## ಅಧ್ಯಾಯ 20

# ಎರಡನೆಯ ಮರಣ

ಪ್ರಕಟನೆ 20ನೇ ಅಧ್ಯಾಯದ ವಿಷಯದಲ್ಲಿ G. B. Cairdನು ಹೀಗೆ ಬರೆಯುತ್ತಾನೆ, "ಈಗ ನಾವು ವಕ್ರೋಕ್ತಿಗಳನ್ನು ಮಾಡುವವರಿಗೆ ಹಾಗೂ ಮತಾಂಧರಿಗೆ ... ಪರದೈಸಿನಂತಿರುವ ಒಂದು ವಾಕ್ಯಭಾಗಕ್ಕೆ ಬಂದಿರುತ್ತೇವೆ ..."[1] John Risseನು ಇದನ್ನು "ತಿಕ್ಕಲು ವ್ಯಕ್ತಿಗಳ ಮೈದಾನ"[2] ಎಂದು ಕರೆದನು. ಈ "ಮೈದಾನ"ದ ಮೂಲಭೂತ ಲಕ್ಷಣವು ಈ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿರುವ "ಸಾವಿರಾರು ವರ್ಷಗಳು" ಎಂಬುದೆ. Frank Packನು ಹೇಳಿದ್ದೇನೆಂದರೆ, "ಈ ಕೆಲವು ವಚನಗಳನ್ನು ಅನೇಕರು ಇಡೀ ಬೈಬಲಿನ ಅತ್ಯಂಥ ಪ್ರಾಮುಖ್ಯವಾದ ಭಾಗವೆಂದು ಮತ್ತು ಇಡೀ ಶಾಸ್ತ್ರಗಳ ಅರ್ಥನಿರೂಪಣೆ ಮಾಡುವದಕ್ಕೆ ಮುಖ್ಯವಾದ ಭಾಗವೆಂದು ಬಳಸಲ್ಪಡುತ್ತವೆ."[3]

ಪ್ರಕಟನೆ 20ನೇ ಅಧ್ಯಾಯವು ಪ್ರಾಮುಖ್ಯವಾದದ್ದು, ಆದರೆ ಅದು ಒಂದು ಸಾವಿರ ವರ್ಷದ ಸಂಕೇತವನ್ನು ಬಳಸುತ್ತದೆ ಎಂಬ ಕಾರಣಕ್ಕಾಗಿಯಲ್ಲ. "ಸಹಸ್ರವರ್ಷ"ಕ್ಕೆ ಕೊಡಲಾಗಿರುವ ಗಮನವು ಸಂಪೂರ್ಣವಾಗಿ ಬೈಬಲಿನಲ್ಲಿ ಅದಕ್ಕೆ ನೀಡಲಾಗಿರುವ ಒತ್ತಿನ ಅನುಪಾತದ ಕಾರಣದಿಂದಲೇ ಆಗಿದೆ. Douglas Ezellನ ಪ್ರಕಾರವಾಗಿ, ಕುಂಚದ ಒಂದೇ ಗೆರೆಯ ಸಮ್ಮೋಹನಕ್ಕೊಳಗಾಗುವದು ಅನೇಕರಿಗೆ ಪ್ರೇರಿತ ಚಿತ್ರವನ್ನು ಕಣ್ತಪ್ಪಿಸಿಕೊಳ್ಳುವಂತೆ ಮಾಡಿರುತ್ತದೆ. ಇದು "ಒಂದು ಬಾಲ ಅಲ್ಲಾಡಿಸುವ ನಾಯಿಯ ಪ್ರಕರಣ"[4] ರೀತಿಯಾಗಿರುತ್ತದೆ.

ಪ್ರಕಟನೆ 20ನೇ ಅಧ್ಯಾಯದ ಸುತ್ತ ಇರುವ ವಿವಾದದ ಕಾರಣದಿಂದಾಗಿ, ಇಷ್ಟವಿಲ್ಲದಿದ್ದರೂ "ಸಹಸ್ರವರ್ಷದ ಪ್ರಶ್ನೆ" ಕುರಿತು ಚರ್ಚಿಸುವದಕ್ಕೆ ಹೆಚ್ಚು ಸ್ಥಳಾವಕಾಶವು ಕೊಡಲ್ಪಡುವದು. ಈ ರೀತಿಯ ವಿವರವಾದ ಚರ್ಚೆಯು ಅಧ್ಯಾಯದಲ್ಲಿನ ಜಯಶಾಲಿ ಸಂದೇಶವನ್ನು ಅಸ್ಪಷ್ಟಗೊಳಿಸುವದಿಲ್ಲ ಎಂದು ನಿರೀಕ್ಷಿಸುತ್ತೇವೆ. W. B. West, Jr., ನು ಒತ್ತಿ ಹೇಳಿದ್ದೇನೆಂದರೆ ಪ್ರಕಟನೆ 20ನೇ ಅಧ್ಯಾಯವು "ನೀವು ಅದನ್ನು ಪ್ರಥಮ ಶತಮಾನದ ಕನ್ನಡಗಳನ್ನು ಧರಿಸಿಕೊಂಡು ಅಧ್ಯಯನ ಮಾಡುವದಾದರೆ, ಅರ್ಥಮಾಡಿಕೊಳ್ಳುವದಕ್ಕೆ ಅತ್ಯಂಥ ಸುಲಭವಾಗಿರುವ ಅಧ್ಯಾಯಗಳಲ್ಲೊಂದಾಗಿದೆ."[5] ಆತನು ಪ್ರಕರಣವನ್ನು ಸ್ವಲ್ಪ ಅತಿಯಾಗಿಸಿ ಹೇಳಿರಬಹುದು; ಆದರೆ, ನಾವು ಎಲ್ಲಿಯ ವರೆಗೆ ಕೆಳಗಿನ ನಿಯಮಗಳನ್ನು ಅನುಸರಿಸುತ್ತೇವೋ ಅಲ್ಲಿಯ ವರೆಗೆ, ಕೆಲವರು ಇದನ್ನು ಕಠಿಣವೆಂದು ತೋರುವಂತೆ ಮಾಡುವ ಪ್ರಕಾರ ಅದೇನೂ ಅಷ್ಟು ಕಠಿಣವಾಗಿರುವದಿಲ್ಲ.

ಮೊದಲನೆಯದಾಗಿ, ಪ್ರಕಟನೆ ಪುಸ್ತಕವು ಒಂದು ಅಂತ್ಯಕಾಲಿಕ ಪುಸ್ತಕವೆಂಬುದನ್ನು, ಅದು ಸಂಕೇತಗಳ ಮೂಲಕ ತನ್ನ ಸಂದೇಶವನ್ನು ತಿಳಿಯಪಡಿಸುತ್ತದೆಂಬುದನ್ನು ನೆನಪಿಟ್ಟುಕೊಳ್ಳಿರಿ. Jim McGuigganನು ಗಮನಕ್ಕೆ ತಂದ ಪ್ರಕಾರ, ನಾವು "ಚಿತ್ರಗಳನ್ನು ನೋಡುತ್ತಿದ್ದೇವೆ" ಎಂಬುದರ ಅರಿವು ಹೊಂದಿರಬೇಕು - ಮತ್ತು ನಾವು ಒಂದು ಚಿತ್ರವನ್ನು ನೋಡುವಾಗೆಲೆಲ್ಲಾ ಹೀಗೆ ಹೇಳತಕ್ಕದ್ದು, "ಅದೇ ಚಿತ್ರವಾಗಿದೆ, ಅದು ಕಲಿಸುವ ಸತ್ಯವು ಯಾವುದು?"[6] ಈ ವಿಷಯದಲ್ಲಿ, 20ನೇ ಅಧ್ಯಾಯವು ಪ್ರಕಟನೆ ಪುಸ್ತಕದಲ್ಲಿನ ಬೇರೆ ಯಾವದೇ

ಅಧ್ಯಾಯಕ್ಕಿಂತ ಭಿನ್ನವಾದದ್ದೇನೂ ಆಗಿರುವದಿಲ್ಲ.

ನಂತರ, ಪ್ರಕಟನೆ ಪುಸ್ತಕವು ಒಂದು ಕಟ್ಟುನಿಟ್ಟಿನ ಕಾಲಾನುಕ್ರಮವನ್ನು ಕಾಪಾಡಿಕೊಂಡು ಹೋಗುವದಕ್ಕೆ ಯಾವ ಪ್ರಯತ್ನವನ್ನೂ ಮಾಡುವದಿಲ್ಲ ಎಂಬುದನ್ನು ನೆನಪಿಟ್ಟುಕೊಳ್ಳಿರಿ. ಉದಾಹರಣೆಗೆ, 12ನೇ ಅಧ್ಯಾಯವು ಪ್ರಕಟನೆ ಪುಸ್ತಕದ ಅರ್ಧಭಾಗಕ್ಕೆ ಬಂದಿದ್ದಾಗಿದ್ದರೂ, ಅದು ಹಿಂದಕ್ಕೆ ಸರಿದು ಯೇಸುವಿನ ಜನನದ ತಕನವೂ ಸಾಗುತ್ತದೆ. ವಾಸ್ತವಿಕದಲ್ಲಿ, ಪ್ರಕಟನೆ ಪುಸ್ತಕದಲ್ಲಿ ಕಾಲದ ಒಂದು ಮೂಲಭೂತ ಅವಧಿಯು ಪದೇ ಪದೇ ಚರ್ಚೆಗೆ ಬರುತ್ತದೆ, ಸ್ವಲ್ಪ ವ್ಯತ್ಯಾಸವಾದ ದೃಷ್ಟಿಕೋನಗಳೊಂದಿಗೆ ಹಿಂದಿರುಗುತ್ತದೆ. ಪ್ರಕಟನೆ ಪುಸ್ತಕದ ಸರಳವಾದ ಸಂಕ್ಷಿಪ್ತ ವಿವರಣೆಗಳಲ್ಲಿ, 17ರಿಂದ 19 ಅಧ್ಯಾಯಗಳು ಒಂದು ವಿಭಾಗವಾಗಿ ಪಟ್ಟಿ ಮಾಡಲ್ಪಟ್ಟಿರುತ್ತವೆ ("ಸಭೆಯ ಬಹುಪಾಲು ವೈರಿಗಳ ನಾಶನ"), ಅದೇ ವೇಳೆಯಲ್ಲಿ 20ರಿಂದ 22 ಅಧ್ಯಾಯಗಳು ಒಂದು ಹೊಸ ವಿಭಾಗದಲ್ಲಿ ಸೇರಿರುತ್ತವೆ ("ಘಟಸರ್ಪಮ ನಾಶನದ ಬಳಿಕ ಹೊಸ ಆಕಾಶ ಮತ್ತು ಭೂಮಿಗಳು ಸೃಷ್ಟಿಸಲ್ಪಡುವಿಕೆ"). ಸರಳವಾಗಿ ಹೇಳುವದಾದರೆ, ವಾಕ್ಯಭಾಗವು ಕಾಲಾನುಕ್ರಮದಲ್ಲಿ 20ನೇ ಅಧ್ಯಾಯದೊಂದಿಗೆ ಮರು ಆರಂಭಗೊಳ್ಳುತ್ತದೆ.

ಇದು ಏಕೆ ಪ್ರಾಮುಖ್ಯವಾದದ್ದು? ಏಕೆಂದರೆ ಸುಳ್ಳು ನಿಲುವುಗಳು 20ನೇ ಅಧ್ಯಾಯವು ಕಾಲಾನುಕ್ರಮದಲ್ಲಿ 19ನೇ ಅಧ್ಯಾಯವನ್ನು ಹಿಂಬಾಲಿಸುತ್ತದೆ ಎಂದು ಮತ್ತು 20ನೇ ಅಧ್ಯಾಯದಲ್ಲಿರುವ ಸಂಗತಿಗಳು ಕಾಲಾನುಕ್ರಮದ ಪ್ರಕಾರವಾಗಿರುತ್ತವೆಂದು ಭಾವಿಸಿಕೊಳ್ಳಬಹುದಾಗಿದೆ. ಉದಾಹರಣೆಗೆ, 19ನೇ ಅಧ್ಯಾಯದ ಅಂತ್ಯಭಾಗವು ಕ್ರಿಸ್ತನ ಎರಡನೆಯ ಬರೋಣವನ್ನು ಚಿತ್ರಿಸುತ್ತದೆಂದು, ಬಳಿಕ ಅದರ ನಂತರ ಕಾಲಾನುಕ್ರಮದಲ್ಲಿ 20ನೇ ಅಧ್ಯಾಯದೊಳಗೆ ಸೈತಾನನನ್ನು ಸೆರೆ ಹಿಡಿಯಲ್ಪಡುತ್ತಾನೆಂದು ಕೆಲವರು ವಾದಿಸುತ್ತಾರೆ. ಇದಾದ ನಂತರ, ಸಹಸ್ರವರ್ಷಾಡಳಿತ, "ಸ್ವಲ್ಪ ಕಾಲ" (20:3; KJV), ಮತ್ತು ನ್ಯಾಯಾತೀರ್ಪು ಬರುತ್ತದೆಂದು ಅವರು ಹೇಳುತ್ತಾರೆ. ಹೇಗೂ, ವಾಕ್ಯಭಾಗವು ಈ ಕಾಲಾನುಕ್ರಮದ ಅರ್ಥೈಸುವ ದಾರಿಯನ್ನು ಅನುಸರಿಸುವದಿಲ್ಲ. ನಾವು ನೋಡಲಿರುವ ಪ್ರಕಾರ, 20ನೇ ಅಧ್ಯಾಯವು ಯೇಸುವಿನ ಭೂಲೋಕದ ಸೇವೆಯ ವೇಳೆಯಲ್ಲಿ ಸೈತಾನನನ್ನು ಸೆರೆಹಿಡಿಯುವದರೊಂದಿಗೆ ಆರಂಭಗೊಳ್ಳುತ್ತದೆ. ಬಳಿಕ ಅಧ್ಯಾಯವು 19ನೇ ಅಧ್ಯಾಯವು ಮುಕ್ತಾಯಗೊಳಿಸಿದ ಅದೇ "ಯುದ್ಧ"ದೊಂದಿಗೆ ಮುಕ್ತಾಯಗೊಳ್ಳುತ್ತದೆ.

20ನೇ ಅಧ್ಯಾಯವು ಕಾಲಾನುಕ್ರಮವಾಗಿ 19ನೇ ಅಧ್ಯಾಯದ ಹಿಂದೆ ಬರುತ್ತದೋ ಅಥವಾ ಇಲ್ಲವೋ ಎಂಬುದರ ಕುರಿತು ಆಲೋಚಿಸುವದಕ್ಕೆ ಒಂದು ಅಂಶವು ಇಲ್ಲಿದೆ: 19ನೇ ಅಧ್ಯಾಯದಲ್ಲಿ "ದೊಡ್ಡವರೂ ಚಿಕ್ಕವರೂ ... *ಇವರೆಲ್ಲರ* ಮಾಂಸವನ್ನು" (19:18; ಒತ್ತಿ ಹೇಳಿದ್ದು ನನ್ನದು) ತಿನ್ನುವಂತೆ ಪಕ್ಷಿಗಳನ್ನು ಆಮಂತ್ರಿಸಲಾಗುತ್ತದೆ, ಅವು ಮಾಂಸವನ್ನು ತಿಂದವು (19:21). ಮನುಷ್ಯರಲ್ಲಿ "ಇವರೆಲ್ಲರು" ನಾಶಗೊಂಡರೆ ಮತ್ತು 20ನೇ ಅಧ್ಯಾಯವು ಕಾಲಾನುಕ್ರಮದಲ್ಲಿ 19ನೇ ಅಧ್ಯಾಯವನ್ನು ಹಿಂಬಾಲಿಸುವದಾದರೆ, ತಾನು ಸೆರೆ ಹಿಡಿಯಲ್ಪಡುವ ವೇಳೆಯಲ್ಲಿ ಸೈತಾನನು ಮರಳುಗೊಳಿಸುತ್ತಿದ್ದ "ಜನಗಳು" ಯಾರಾಗಿದ್ದರು (20:3)? ಕೆಲವು ಸಹಸ್ರವರ್ಷಪೂರ್ವಾಡಳಿತ ವಾದಿಗಳು ಈ ಪ್ರಶ್ನೆಯನ್ನು ಒಂದು ಸಮಸ್ಯೆಯೆಂದು ಅರ್ಥಮಾಡಿಕೊಳ್ಳುತ್ತಾರೆ ಮತ್ತು ಇವರನ್ನು 19ನೇ ಅಧ್ಯಾಯದಲ್ಲಿ ನಾಶಗೊಳಿಸಲ್ಪಟ್ಟ ರೋಮನ್ ಸಾಮ್ರಾಜ್ಯದ "ತುದಿಗಳಲ್ಲಿ" ಉಳಿದುಕೊಂಡಿದ್ದ ಜನಗಳು ಎಂಬುದಾಗಿ ಹೇಳುತ್ತಾರೆ, ಆದಾಗ್ಯೂ ವಾಕ್ಯದಲ್ಲಿ ಇಂತಹ ಅರ್ಥನಿರೂಪಣೆಗೆ ಪುರಾವೆಯು ಇರುವದೇ ಇಲ್ಲ.

19 ಮತ್ತು 20 ಅಧ್ಯಾಯಗಳ ವ್ಯವಸ್ಥೆಯು ಕಾಲಾನುಕ್ರಮದ ಪ್ರಕಾರವಲ್ಲ, ಆದರೆ

ತಾರ್ಕಿಕವಾಗಿ ಆಗಿರುತ್ತದೆ. ವಾಕ್ಯಭಾಗವು ಪರಾಕಾಷ್ಠೆಯ ಕಡೆಗೆ ಸಾಗುತ್ತಲಿತ್ತು. ಕುರಿಯಾದಾತನ ವೈರಿಗಳು ಈ ಕ್ರಮಾಂಕದಲ್ಲಿ ಪರಿಚಯಿಸಲ್ಪಡುತ್ತಾರೆ: ಘಟಸರ್ಪ, ಎರಡು ಮೃಗಗಳು, ಮತ್ತು ಮಹಾ ಬಾಬೆಲ. ಹಿಮ್ಮೊಗವಾದ ಕ್ರಮಾಂಕದಲ್ಲಿ, ಅವರು ತಮ್ಮ ನಾಶನವನ್ನು ಎದುರುಗೊಂಡರು: 17ರಿಂದ 18 ಅಧ್ಯಾಯಗಳಲ್ಲಿ ಮಹಾ ಬಾಬೆಲ, 19ನೇ ಅಧ್ಯಾಯದಲ್ಲಿ ಎರಡು ಮೃಗಗಳು. ಈಗ ಘಟಸರ್ಪದ ಬೀಳುವಿಕೆಯ ಸಮಯವಾಗಿತ್ತು. ಆತನು ಬೀಳುವದು *ಅತ್ಯಾವಶ್ಯಕವಾಗಿತ್ತು.* ಬೇರೆ ವೈರಿಗಳ ಹಿಂದಿದ್ದ ಶಕ್ತಿಯು ಈತನೇ ಆಗಿದ್ದನು. ಈತನನ್ನು ಸಹ ನಿಗ್ರಹಿಸುವ ವರೆಗೂ ಯಾವದೇ ಶಾಶ್ವತವಾದ ಪ್ರಯೋಜನವನ್ನು ಸಾಧಿಸಿಕೊಳ್ಳಲು ಆಗುತ್ತಿರಲಿಲ್ಲ. ದಂಡನೆಯಿಂದ ತಪ್ಪಿಸಿಕೊಳ್ಳಲು ಆತನಿಗೆ ಅವಕಾಶವನ್ನು ಕೊಡುವದಾದರೆ, ಆತನು ದೇವರ ಜನರನ್ನು ಹಿಂಸೆಯನ್ನು ಮುಂದುವರೆಸಿಕೊಂಡು ಹೋಗಲು ಹೊಸ ಸಾಧನಗಳನ್ನು ಕಂಡುಕೊಳ್ಳಲಿದ್ದನಷ್ಟೆ.

Ray Summersನು ಒತ್ತಿ ಹೇಳಿದ್ದೇನೆಂದರೆ "ಈ ಅಧ್ಯಾಯದ ಮೊದಲ ಹತ್ತು ವಚನಗಳ ಮುಖ್ಯ ಚರ್ಚೆಯಾಂಶವು *ಸೈತಾನನ* ಪತನವೇ, ಹೊರತು ಒಂದು ಸಾವಿರ ವರ್ಷಗಳ ಆಳ್ವಿಕೆಯು ಅಲ್ಲ."[7] "ಸಾವಿರ ವರ್ಷಗಳ" ಸಂಕೇತವು ಇದಕ್ಕೆ ಸಾಂದರ್ಭಿಕವಾಗಿರುತ್ತದೆ.

20ನೇ ವಚನದ ಪ್ರಾಮುಖ್ಯತೆ ಹಾಗೂ ರೋಮಾಂಚಕತೆಗಳನ್ನು ಮಾತುಗಳಲ್ಲಿ ತಿಳಿಯಪಡಿಸುವದು ಕಷ್ಟಕರವಾಗಿರುತ್ತದೆ. ವಾಕ್ಯಭಾಗವು ಸಾವಿರ ವರ್ಷಗಳ ಬಗ್ಗೆ ಪ್ರಸ್ತಾಪಿಸುತ್ತದೆಂಬ ಕಾರಣಕ್ಕೆ ಕಷ್ಟಕರಲ್ಲ, ಆದರೆ ಅದು ಸೈತಾನನ ಅವಸಾನವನ್ನು ಪ್ರಕಟಿಸುತ್ತದೆ: ಹವ್ವಳನ್ನು ವಂಚಿಸಿದವನು ಮತ್ತು ಲೋಕವನ್ನು ಶಾಪಕ್ಕೊಳಗಾಗುವಂತೆ ಮಾಡಿದ ಸೈತಾನನು (ಆದಿಕಾಂಡ 3); ಲೋಕದಲ್ಲಿರುವ ಎಲ್ಲಾ ಪಾಪ ಮತ್ತು ನೋವಿಗೆ ಜವಾಬ್ದಾರನಾಗಿರುವ ಸೈತಾನನು; ಒಂದಾದ ಮೇಲೊಂದು ಪೀಳಿಗೆಯ ಮನುಷ್ಯರ ಜೀವಿತಗಳನ್ನು, ಶತಶತಮಾನಗಳಿಂದಲೂ ಹಾಳುಮಾಡಿರುವ ಸೈತಾನನು; ನಮ್ಮ *ಸ್ವಂತ* ಜೀವಿತಗಳಲ್ಲಿ ಅವಮಾನ ಹಾಗೂ ಹೃದಯವೇದನೆಯನ್ನು ತಂದಂಥ ಸೈತಾನನು. ಈ ಭಯಂಕರ, ಭಯಂಕರ, ಮೃತ್ಯುಕಾರಕ, ಹೊಲಸು ಜೀವಿಯು ಒಂದು ದಿನ ಕರ್ತನನ್ನು ಅನುಸರಿಸುವವರ ಸಮ್ಮುಖದಿಂದ ತೊಲಗಿಸಲ್ಪಡುವದು. ಆತನು ಶಾಶ್ವತವಾಗಿ ಇಲ್ಲದಂತಾಗುವನು. ಎಂಥ ಆಶ್ಚರ್ಯಕರವಾದ ಸುದ್ದಿ! "ಇದಲ್ಲದೆ ಅವರನ್ನು ಮರುಳುಗೊಳಿಸಿದ ಸೈತಾನನು ಬೆಂಕಿ ಗಂಧಕಗಳುರಿಯುವ ಕೆರೆಯಲ್ಲಿ ದೊಬ್ಬಲ್ಪಟ್ಟನು. ಅಲ್ಲಿ ಮೃಗವೂ ಸುಳ್ಳು ಪ್ರವಾದಿಯೂ ಕೂಡ ಇದ್ದಾರೆ; ಅವರು ಹಗಲಿರುಳು ಯುಗಯುಗಾಂತರಗಳಲ್ಲಿಯೂ ಯಾತನೆಪಡುತ್ತಿರುವರು" (20:10).

ಅಧ್ಯಾಯವು ಕಠಿಣವಾದ ವಿಭಾಗಗಳನ್ನು ಒಳಗೊಂಡಿರುತ್ತದೆ. ಅದಲ್ಲೊಂದು ಎಂದರೆ ಸೈತಾನನು "ಸಾವಿರ ವರುಷಗಳು ತೀರಿದ ಮೇಲೆ" ಬಿಡುಗಡೆಗೊಳಿಸಲ್ಪಡುವದೇ (20:7). ಅಧ್ಯಾಯದ ಕುರಿತು ನಾವು ಯಾವ ನಿಲುವು ತೆಗೆದುಕೊಂಡರೂ ಸರಿಯೇ, ಅಲ್ಲಿ ಸಮಸ್ಯೆಗಳಿರುತ್ತವೆ. ಹೇಗೂ, ಎಲ್ಲಾ ಅಧ್ಯಾಯಗಳ ವಿಷಯದಲ್ಲಿಯೂ ಹೀಗೆಯೇ ಇದ್ದಿರಲಿಲ್ಲವೋ? ಮತ್ತೊಂದಾವರ್ತಿ, ಪ್ರಕಟನೆ ಪುಸ್ತಕದ ಯಾವದೇ ವಾಕ್ಯಭಾಗದ ಮೂಲಭೂತ ಸಂದೇಶವು ಅಸ್ಪಷ್ಟವಾದ ವಿವರಗಳಲ್ಲಿ ಅಡಕವಾಗಿರುವದಿಲ್ಲ, ಆದರೆ ಅದು ಮನಸ್ಸಿನಲ್ಲಿ ಮೂಡಿಸುವ ಒಟ್ಟಾರೆಯಾದ ಛಾಪಿನಲ್ಲಿಯೇ ಇರುತ್ತದೆ.

20ನೇ ಅಧ್ಯಾಯದ ಸಂದೇಶವು ನಿಶ್ಚಯವಾಗಿಯೂ ಇದೇ ಆಗಿದೆ: ಕುರಿಯಾದಾತನನ್ನು ಅನುಸರಿಸುವವರು ಜಯಿಸಿದರೆ, ಸೈತಾನನನ್ನು ಅನುಸರಿಸುವವರು ಸೋಲುವರು ಎಂಬುದೆ. ಕ್ರೈಸ್ತರು 20ನೇ ಅಧ್ಯಾಯದಿಂದ ಕಲಿಯಬೇಕೆಂದು ದೇವರು ಬಯಸುವದು *ಅದನ್ನೇ* ಆಗಿದೆ.

ಅದು ಮೊದಲ ಶತಮಾನದಲ್ಲಿ ಒಂದು ಪ್ರಾಮುಖ್ಯವಾದ ಸಂದೇಶವಾಗಿತ್ತು. ಅದು ಈ ದಿನವೂ ಅಷ್ಟೇ ಪ್ರಾಮುಖ್ಯವಾಗಿರುತ್ತದೆ.

## ಸೈತಾನನು ಹಿಡಿಯಲ್ಪಡುತ್ತಾನೆ (20:1-3)

**[1]ಆಗ ಒಬ್ಬ ದೇವದೂತನು ಅಧೋಲೋಕದ ಬೀಗದ ಕೈಯನ್ನೂ ದೊಡ್ಡ ಸರಪಣಿಯನ್ನೂ ಕೈಯಲ್ಲಿ ಹಿಡಿದುಕೊಂಡು ಪರಲೋಕದಿಂದ ಇಳಿದು ಬರುವದನ್ನು ಕಂಡೆನು. [2]ಅವನು ಪಿಶಾಚನೂ ಸೈತಾನನೂ ಆಗಿರುವ ಪುರಾತನಸರ್ಪನೆಂಬ ಘಟಸರ್ಪನನ್ನು ಹಿಡಿದು ಸಾವಿರ ವರುಷ ಬಂಧನದಲ್ಲಿಟ್ಟನು. [3]ಆ ಸಾವಿರ ವರುಷ ತೀರುವ ತನಕ ಸೈತಾನನು ಇನ್ನೂ ಜನಗಳನ್ನು ಮರುಳುಗೊಳಿಸದ ಹಾಗೆ ದೇವದೂತನು ಅವನನ್ನು ಅಧೋಲೋಕದಲ್ಲಿ ದೊಬ್ಬಿ ಬಾಗಿಲು ಮುಚ್ಚಿ ಅದಕ್ಕೆ ಮುದ್ರೆಹಾಕಿದನು. ಆ ಸಾವಿರ ವರುಷಗಳಾದ ಮೇಲೆ ಅವನಿಗೆ ಸ್ವಲ್ಪಕಾಲ ಬಿಡುಗಡೆಯಾಗಬೇಕು.**

**ವಚನ 1.** 20ನೇ ಅಧ್ಯಾಯವು ಹೀಗೆ ಆರಂಭಗೊಳ್ಳುತ್ತದೆ, **ಆಗ ಒಬ್ಬ ದೇವದೂತನನ್ನು ... ಕಂಡೆನು. ಆಗ ಕಂಡೆನು** ಎಂಬ ಮಾತುಗಳು ಪ್ರಕಟನೆ ಪುಸ್ತಕದುದ್ದಕ್ಕೂ ಬಳಸಲ್ಪಟ್ಟಿರುವ ಸಾಹಿತ್ಯಕ ಸಾಧನಗಳಾಗಿವೆ, ಮತ್ತು ವಿಶೇಷವಾಗಿ, ಈ ವಿಭಾಗದಲ್ಲಿ ಒಂದು ಹೊಸ ಯೋಚನೆಯನ್ನು ಪರಿಚಯಿಸುವದಕ್ಕೆ ಬಳಸಲ್ಪಟ್ಟಿರುತ್ತವೆ (ನೋಡಿರಿ 20:4, 11, 12; 21:1, 2). ಈ **ದೇವದೂತನು** ಕ್ರಿಸ್ತನೇ ಎಂಬುದಾಗಿ ಕೆಲವರು ನಂಬುತ್ತಾರೆ, ಆದರೆ ವಾಕ್ಯಭಾಗದಲ್ಲಿರುವ ಯಾವದೂ ಈ ದೇವದೂತನು ಕರ್ತನು ಹೇಳಿದ್ದನ್ನು ಮಾಡುವದಕ್ಕೆ ಕಳುಹಿಸಲ್ಪಡುವ ಬೇರೆ ಯಾವದೇ ಸಂದೇಶಕರಿಗಿಂತಲೂ ಭಿನ್ನವಾದವನೆಂಬುದನ್ನು ಸೂಚಿಸುವದಿಲ್ಲ. ದೇವದೂತನು **ಅಧೋಲೋಕದ ಬೀಗದ ಕೈಯನ್ನೂ ದೊಡ್ಡ ಸರಪಣಿಯನ್ನೂ ಕೈಯಲ್ಲಿ ಹಿಡಿದುಕೊಂಡು ಪರಲೋಕದಿಂದ ಇಳಿದು ಬರು**ತ್ತಿದ್ದನು. **ಅಧೋಲೋಕ** ಎಂಬುದು, ಕೆಲವು ಸಾರಿ "ತಳವಿಲ್ಲದ ತಗ್ಗು" ಎಂದು ಕರೆಯಲ್ಪಟ್ಟಿದ್ದು, ಅದು ಈ ಯುಗದಲ್ಲಿ ದುಷ್ಟರ ಸಾಂಕೇತಿಕ ನಿವಾಸವಾಗಿರುತ್ತದೆ (9:1ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಅಧೋಲೋಕವು ನರಕವಲ್ಲ. ಸೈತಾನನು ಈ ಅಧ್ಯಾಯದ 10ನೇ ವಚನದ ತನಕವೂ ನಿತ್ಯವಾದ ಬೆಂಕಿಯ ಕೆರೆಯಲ್ಲಿ ಹಾಕಲ್ಪಡುವದಿಲ್ಲ.

ಅಧೋಲೋಕವು 9ನೇ ಅಧ್ಯಾಯದಲ್ಲಿ ಪರಿಚಯಿಸಲ್ಪಟ್ಟಿತು, ಆಗ ಒಂದು ನಕ್ಷತ್ರವು ಭೂಮಿಗೆ ಬಿದ್ದಿತ್ತು ಮತ್ತು ಆತನಿಗೆ "ಅಧೋಲೋಕಕ್ಕೆ ಹೋಗುವ ಬೀಗದಕೈ ಕೊಡಲ್ಪಟ್ಟಿತು" (9:1). ಈ "ನಕ್ಷತ್ರ," ಬಹುಶಃ ಒಬ್ಬ ದೇವದೂತನು ಅಧೋಲೋಕವನ್ನು ತೆರೆದಾಗ, ಪೀಡಿಸುವ ಮಿಡತೆಗಳು ಗುಂಪಾಗಿ ಹೊರಹೊಮ್ಮಿದವು. 20ನೇ ಅಧ್ಯಾಯದ ದೇವದೂತನು 9ನೇ ಅಧ್ಯಾಯದ ಆ "ನಕ್ಷತ್ರ" ಆಗಿರಬಹುದು ಅಥವಾ ಆಗಿರದೆ ಇರಬಹುದು. ಆತನು ಯಾರೇ ಆಗಿದ್ದರೂ ಸರಿಯೇ, ಆತನು ದೇವರ ಸಂದೇಶಕನಂತೆ ಆಗಿದ್ದನು ಮತ್ತು ದೇವರ ಧ್ಯೇಯವನ್ನು ನಡಿಸುವದಕ್ಕೆ ಸಾಮರ್ಥ್ಯವುಳ್ಳವನಾಗಿದ್ದನು.

ದೇವದೂತನ ಬಳಿಯಲ್ಲಿ ಅಧೋಲೋಕಕ್ಕೆ ಹೋಗುವ **ಬೀಗದಕೈ** ಇತ್ತು, ಆತನಿಗೆ ಅದರ ಮೇಲೆ ಅಧಿಕಾರವು ಕೊಡಲ್ಪಟ್ಟಿತ್ತೆಂಬುದನ್ನು ಸೂಚಿಸುತ್ತದೆ: ಅದನ್ನು ತೆರೆಯುವದಕ್ಕೆ ಅಥವಾ ಮುಚ್ಚುವದಕ್ಕೆ ಅಧಿಕಾರ. ಈ ಪರಿಭಾಷೆಯು ಯೇಸುವಿನ ಬಳಿಯಲ್ಲಿ "ಮರಣದ ಮತ್ತು ಪಾತಾಳದ ಬೀಗದ ಕೈಗಳು" ಇರುತ್ತವೆ (1:18ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ) ಎಂಬುದರೊಂದಿಗೆ ಸಾಮ್ಯತೆಯನ್ನು ಹೊಂದಿರುತ್ತದೆ. ಅಷ್ಟುಮಾತ್ರವಲ್ಲದೆ, ದೇವದೂತನ

ಬಳಿಯಲ್ಲಿ ಸೈತಾನನನ್ನು ಬಂಧಿಸುವದಕ್ಕೆ ಒಂದು **ದೊಡ್ಡ ಸರಪಣಿ** ಇತ್ತು. ಸರಪಣಿಯು ಕೈದಿಗಳನ್ನು ನಿಗ್ರಹಿಸುವದಕ್ಕೆ ರೋಮನ್ನರು ಬಳಸುತ್ತಿದ್ದ ಸರಪಣಿಯಂತೆಯೇ ಇತ್ತು. ಸರಪಣಿ ἅλυσιν (*halusin*) ಎಂಬುದಕ್ಕಿರುವ ಇದೇ ಪದವನ್ನು ಅಪೊಸ್ತಲರ ಕೃತ್ಯಗಳು 12:7 ಮತ್ತು 28:20ರಲ್ಲಿ ಬಳಸಲಾಗಿರುತ್ತದೆ.

ಒಂದು ಪ್ರಶ್ನೆಯು ಇಲ್ಲಿ ಕೇಳಲ್ಪಡಬಹುದು, "ಬೀಗದಕ್ಕೈ ಹಾಗೂ ಸರಪಣಿಗಳು ಅಕ್ಷರಶಃ ಆಗಿದ್ದವೋ?" Westನು ಈ ಪ್ರಶ್ನೆಯನ್ನು ಇನ್ನಷ್ಟು ವಿಮರ್ಶಿಸುತ್ತಾನೆ: "ಅವುಗಳು ಅಕ್ಷರಶಃ ಆಗಿರುವದಾದಲ್ಲಿ, ಅವುಗಳು ಯಾವ ವಿಧವಾದ ಬೀಗದಕ್ಕೈ ಹಾಗೂ ಸರಪಣಿ ಆಗಿದ್ದವು? ಅವುಗಳು ಕಬ್ಬಿಣದವುಗಳೋ? ಅವುಗಳು ಬೆಳ್ಳಿಯವುಗಳೋ? ಅವುಗಳು ಚಿನ್ನದವುಗಳೋ? ಅವುಗಳು ಕಟ್ಟಿಗೆಯವುಗಳೋ? ಅಥವಾ ಬೇರೆ ಯಾವ ವಿಧದವುಗಳಾಗಿದ್ದವು?"[8] ಇಂತಹ ಪ್ರಶ್ನೆಗಳು ಮೊದಲ ಮೂರು ವಚನಗಳ ವಿಷಯದಲ್ಲಿ ಇನ್ನೂ ಅಧಿಕಗೊಳ್ಳಬಹುದಾಗಿದೆ: ಅಧೋಲೋಕವು ಆಳವಾಗಿತ್ತೋ, ಭೂಮಿಯಲ್ಲಿನ ಆಳವಾದ ರಂಧ್ರವಾಗಿತ್ತೋ? ಘಟಸರ್ಪವು ಒಂದು ಮಾಂಸ ಹಾಗೂ ಮೂಳೆಗಳಿಂದ ಕೂಡಿದ ಜೀವಿಯಾಗಿತ್ತೋ? ಮತ್ತೊಂದಾವರ್ತಿ, ನಾವು ಸಂಕೇತಗಳನ್ನೊಳಗೊಂಡಿರುವ ಅಂತ್ಯಕಾಲಿಕ ಭಾಷೆಯ ಕುರಿತು ಚರ್ಚಿಸುತ್ತಿದ್ದೇವೆಂಬುದು ನಮಗೆ ಜ್ಞಾಪಿಸಲ್ಪಡುತ್ತದೆ.

ಅಕ್ಷರಶಃವಾದಿಗಳು, ವಿಶೇಷವಾಗಿ ಸಹಸ್ರವರ್ಷಪೂರ್ವಾಡಳಿತ ವಾದಿಗಳು ಪ್ರಕಟನೆ ಪುಸ್ತಕದಲ್ಲಿನ ಪದಗಳನ್ನು "ಆತ್ಮೀಕಕರಣಗೊಳಿಸುವ" ಜನರ ಕುರಿತು ತಿರಸ್ಕಾರದಿಂದ ಮಾತಾಡುತ್ತಾರೆ. ಅವರು ಅಹಂಕಾರದಿಂದ ವಾದಿಸುವದೇನೆಂದರೆ ತಾವೊಬ್ಬರೇ "ಶಾಸ್ತ್ರಗಳನ್ನು ಅಕ್ಷರಶಃ ಅರ್ಥೈಸಿಕೊಳ್ಳುವವರು" ಎಂಬದೆ. ಹೇಗೂ, ಈ ವಿಷಯದ ಸತ್ಯವು ಏನೆಂದರೆ, ಅವರು ತಮ್ಮ ವಿಚಿತ್ರವಾದ ದೃಶ್ಯಾವಳಿಗೆ ಯಾವುದು ಸರಿಹೊಂದುವದಿಲ್ಲವೋ ಅಂತಹದ್ದು ಪ್ರಕಟನೆ ಪುಸ್ತಕದಲ್ಲಿ ಬರುವ ಯಾವದನ್ನೇ ಆಗಲಿ "ಆತ್ಮೀಕರಣ" ಮಾಡುವದಕ್ಕೆ ಸಂಕೋಚ ಪಡುವದಿಲ್ಲ. ಅವರು ತಕ್ಷಣವೇ ಬೀಗದಕ್ಕೈ ಒಂದು ಕಂಪನಿ ಬೀಗದ ಕೈಯಿಂದ ಮಾಡಲ್ಪಟ್ಟಿದ್ದಲ್ಲ, ಸರಪಣಿಯು ಕಬ್ಬಿಣದಿಂದ ಮಾಡಿದ್ದಲ್ಲ, ಮತ್ತು ಅಧೋಲೋಕವು ಅಕ್ಷರಶಃ ತಳವಿಲ್ಲದ ತಗ್ಗು ಆಗಿರುವದಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತಾರೆ.

**ವಚನ 2.** ದೇವದೂತನು **ಪಿಶಾಚನೂ ಸೈತಾನನೂ ಆಗಿರುವ ಪುರಾತನಸರ್ಪನೆಂಬ ಘಟಸರ್ಪನನ್ನು ಹಿಡಿದು**ಕೊಂಡನು. ಖಳನಾಯಕರನ್ನು ಗುರುತಿಸುವದಕ್ಕೆ ಯಾವ ಸಮಸ್ಯೆಯೂ ಇರುವದಿಲ್ಲ. ಇದೇ ಪದಗುಚ್ಛಗಳು ಆತನನ್ನು 12:9ರಲ್ಲಿ ಗುರುತಿಸಿದವು. ವಾಚಕನಿಗೆ ಈಗಾಗಲೇ ಹೇಳಲಾಗಿರುವದೇನೆಂದರೆ "ಆತನು ಪರಲೋಕದ ಕಾದಾಟದಲ್ಲಿ ಮಿಕಾಯೇಲನಿಂದ ಸೋಲಿಸಲ್ಪಟ್ಟಿರುವ ಘಟಸರ್ಪನು (12:7, 8), ಮೆಸ್ಸೀಯನ ಸಮುದಾಯವನ್ನು ಪ್ರವಾಹದ ಮೂಲಕ ಹೊಡೆದುಕೊಂಡು ಹೋಗುವಂತೆ ಮಾಡಲು ಪ್ರಯತ್ನಿಸಿದ ಸರ್ಪನು (12:15), ಮತ್ತು ತನಗೆ ಕಾಲವು ಕ್ಲುಪ್ತವಾಗಿದೆ ಎಂಬುದನ್ನು ಅರಿತುಕೊಂಡಿರುವ ಸೈತಾನನು (12:12) ಆಗಿದ್ದಾನೆ"[9] ಎಂಬುದೆ.

ದೇವದೂತನು ಸೈತಾನನನ್ನು ಹಿಡಿದುಕೊಂಡ ಮೇಲೆ, ಆತನನ್ನು **ಸಾವಿರ ವರುಷಗಳ ಬಂಧನದಲ್ಲಿಟ್ಟನು.** ದೇವದೂತನಿಗೆ ವಹಿಸಲಾಗಿದ್ದ ಧ್ಯೇಯವು ಸೈತಾನನನ್ನು ಅಧೀನದಲ್ಲಿಟ್ಟುಕೊಳ್ಳುವದಾಗಿತ್ತು - ಅದನ್ನು ಆತನು ಸಾಧಿಸಿದನು. ಈ ದರ್ಶನದಲ್ಲಿ ಕೇವಲ ಸೋಲಿಸಲ್ಪಟ್ಟದ್ದು ಮಾತ್ರವೇ ಆಗಿರಲಿಲ್ಲ; ಆತನು ಅವಮಾನಕ್ಕೊಳಗಾದನು. ಆತನು ಅಷ್ಟೆಲ್ಲಾ ಶೌರ್ಯಾಟೋಪಗಳನ್ನು ತೋರಿಸಿದ ಮೇಲೆಯೂ - ಆಕಾಶದಿಂದ ನಕ್ಷತ್ರಗಳನ್ನು ಹೊಡೆದು ತಳ್ಳುವದು (12:4), ಮತ್ತು ಇತ್ಯಾದಿ ಕಾರ್ಯಗಳನ್ನು ಮಾಡಿದ ಬಳಿಕ - ಆತನನ್ನು

ಕೇವಲ ಬಂಧನದಲ್ಲಿಡುವದಕ್ಕೆ ಒಬ್ಬ ಹೆಸರಿಸಲ್ಪಡ ದೇವದೂತನು ಮಾತ್ರವೇ ಸಾಕಾಗಿತ್ತು.

ಬಹಳಷ್ಟು ವಾದ ವಿವಾದ ಮಾಡಲ್ಪಟ್ಟಿರುವ **ಸಾವಿರ ವರುಷಗಳು** ಎಂಬುದು 2ನೇ ವಚನದಲ್ಲಿ ಮೊದಲ ಬಾರಿಗೆ ಪ್ರಸ್ತಾಪಿಸಲ್ಪಡುತ್ತದೆ. ನಾವು ಒಂದು ಪ್ರಾಮುಖ್ಯವಾದ ಪ್ರಶ್ನೆಯನ್ನು ಕೇಳತಕ್ಕದ್ದು: ಇದು ಅಕ್ಷರಶಃ ಸಾವಿರಾರು ವರುಷಗಳೋ? ಬೀಗದಕ್ಕೆ, ಸರೊಣಿ, ಅಧೋಲೋಕ, ಮತ್ತು ಘಟಸರ್ಪಗಳೆಲ್ಲಾ ಸಾಂಕೇತಿಕವಾಗಿರುವದಾದಲ್ಲಿ, ಸಾವಿರ ವರುಷಗಳು ಒಂದು ಅಕ್ಷರಶಃ ಕಾಲವಧಿಯಾಗಿರುತ್ತದೆಂದು ಕೆಲವರು ಯಾವುದರ ಆಧಾರದಿಂದ ಹೇಳುತ್ತಾರೆ? ಪ್ರಕಟನೆ ಪುಸ್ತಕದುದ್ದಕ್ಕೂ, ವಾಚಕನು ನೂರಾರು ಸಾಂಕೇತಿಕ ಅಂಕೆಗಳನ್ನು ಎದುರುಗೊಂಡನು. ಏಳು ಪವಿತ್ರಾತ್ಮರು ಇರುವದಿಲ್ಲ ಎಂದು ವಾದಿಸಲಾಯಿತು; 1:4ರಲ್ಲಿನ "ಏಳು" ಅಂಕೆಯು ಸಾಂಕೇತಿಕವಾದದ್ದು. ಪರಲೋಕಕ್ಕೆ ಹೋಗುವವರ ಸಂಖ್ಯೆಯು ಅಕ್ಷರಶಃ 144,000 ಮಂದಿಯಾಗಿರುವದಿಲ್ಲ, ಆ ಸಂಖ್ಯೆಯು 7 ಮತ್ತು 14 ಅಧ್ಯಾಯಗಳಲ್ಲಿ ಬಳಸಲ್ಪಟ್ಟಿರುವ ಪ್ರಕಾರ, ರಕ್ಷಣೆ ಹೊಂದಿರುವ *ಎಲ್ಲರಿಗೆ* ಸಂಕೇತವಾಗಿರುತ್ತದೆ. ಆ ಸಂಖ್ಯೆಗಳು ಸಾಂಕೇತಿಕವಾಗಿ ಬಳಸಲ್ಪಟ್ಟಿರುವದಾದರೆ, 20ನೇ ಅಧ್ಯಾಯದಲ್ಲಿನ "ಒಂದು ಸಾವಿರ" ಅಂಕೆಯು ಅಕ್ಷರಶಃ ಎಂದು ಯಾವನಾದರೂ ಏಕೆ ಭಾವಿಸತಕ್ಕದ್ದು? "ಸಾವಿರ" ಎಂಬ ಪದವು ಶಾಸ್ತ್ರಗಳಲ್ಲಿ ಒಂದು ರೂಪಕ ಭಾಷೆಯಾಗಿ ಬಳಸಲ್ಪಟ್ಟಿದೆ (ನೋಡಿರಿ ಕೀರ್ತನೆ 50:10). Thomas Torranceನು ಹೀಗೆ ಬರೆಯುತ್ತಾನೆ,

> ನಾವು ಹೇಗೆ ಹತ್ತ ತಲೆಗಳು ಹಾಗೂ ಏಳು ಕೊಂಬುಗಳುಳ್ಳ ಬೃಹತ್ ಮೃಗವನ್ನು ಅಕ್ಷರಶಃ ಅರ್ಥೈಸಿಕೊಳ್ಳುವ ಹಕ್ಕು ಹೊಂದಿರುವದಿಲ್ಲವೋ ಹಾಗೆಯೇ ಸಾವಿರ ವರುಷಗಳನ್ನು ಅಕ್ಷರಶಃ ಭಾವಿಸಿಕೊಳ್ಳುವ ಹಕ್ಕು ನಮಗಿರುವದಿಲ್ಲ. ಅಂತ್ಯಕಾಲಿಕ ಹಿನ್ನಲೆಯಲ್ಲಿರುವ ಸಾವಿರ ವರುಷಗಳನ್ನು ತೆಗೆದುಕೊಂಡು ಇತಿಹಾಸದ ಸಾಮಾನ್ಯ ಮೈದಾನದಲ್ಲಿಡುವದು ... ಸಂಪೂರ್ಣ ಸಂಬಂಧವೇ ಇಲ್ಲದ್ದಾಗಿದೆ, ಲೋಕಾಂತ್ಯದ ಕುರಿತಾಗಿ ... ಲೋಕದ ಗಣಿತದಿಂದ ಬಗೆಹರಿಸುವದಕ್ಕೆ ಮತ್ತು ಲೆಕ್ಕಾಚಾರದಿಂದ ಕೈಚಳಕ ತೊರಿಸುವದಕ್ಕೆ ಸಾಧ್ಯವೆಂಬಂತೆ.[10]

"ಒಂದು ಸಾವಿರ" ಅಂಕೆಯು ಸಾಂಕೇತಿಕವಾಗಿರುವದಾದರೆ - ಮತ್ತು ಹಾಗಲ್ಲವೆಂದು ನಂಬುವದಕ್ಕೆ ಬೇರೆ ಕಾರಣವೇ ಇಲ್ಲವೆಂದಾದರೆ - ಅದು ಏನನ್ನು ಸಂಕೇತಿಸುತ್ತದೆ? "ಹತ್ತು" ಸಂಪೂರ್ಣತೆಯನ್ನು ಸೂಚಿಸುವದಾಗಿದೆ, ಅದು ಬಹುಶಃ ಒಬ್ಬ ವ್ಯಕ್ತಿಗೆ ಹತ್ತು ಬೆರಳುಗಳಿಗೆ ಎಂಬುದರಿಂದ ಹೊರಹೊಮ್ಮಿರಬಹುದಾಗಿದೆ. ಹತ್ತರ ಗುಣಕಾರಗಳನ್ನು ಬಳಸುವದು (ಒಂದು ನೂರು ಅಥವಾ ಒಂದು ಸಾವಿರ) ಭಾವನೆಯನ್ನು ತೀಕ್ಷ್ಣಗೊಳಿಸಿರುತ್ತದೆ. "ಒಂದು ಸಾವಿರ" ಎಂದು ಹೇಳಿದರೆ (ಹತ್ತು ಗುಣಕಾರ ಹತ್ತು ಗುಣಕಾರ ಹತ್ತು) ಅದರರ್ಥವು "ಸಂಪೂರ್ಣತೆಯ ಸಂಪೂರ್ಣತೆಯ ಸಂಪೂರ್ಣತೆ" ಎಂದಾಗಿತ್ತು. ಹಳೆಯ ಒಡಂಬಡಿಕೆಯೊಂದಿಗೆ ಪರಿಚಿತರಾಗಿದ್ದ ವಾಚಕರು ದೇವದರ್ಶನ ಗುಡಾರದಲ್ಲಿ ಅತಿ ಪರಿಶುದ್ಧ ಸ್ಥಳದ ಬಗ್ಗೆ ಯೋಚಿಸಿಕೊಂಡಿರಬಹುದಾಗಿದೆ, ಅದು ವಿಮೋಚನಕಾಂಡ 26ರಲ್ಲಿನ ಬಣ್ಣನೆಯ ಮೇಲೆ ಆಧಾರವಾಗಿದ್ದು, ಅದು ಹತ್ತು ಮೊಳಗಳಷ್ಟು ಉದ್ದ ಹತ್ತು ಮೊಳಗಳಷ್ಟು ಅಗಲ ಹಾಗೂ ಹತ್ತು ಮೊಳಗಳಷ್ಟು ಎತ್ತರವಾಗಿ ರಚಿಸಲ್ಪಟ್ಟಿತ್ತೆಂದು ನಂಬಲಾಗುತ್ತದೆ: ಒಂದು ಪರಿಪೂರ್ಣವಾದ ಚೌಕಟ್ಟು. ದೇವಾಲಯದಲ್ಲಿನ ಅತಿ ಪರಿಶುದ್ಧ ಸ್ಥಳವು ಸಹ ಒಂದು ಚೌಕಟ್ಟು ಆಗಿತ್ತು: ಇಪ್ಪತ್ತು ಮೊಳ ಉದ್ದವೂ ಇಪ್ಪತ್ತು ಮೊಳ ಅಗಲವೂ ಇಪ್ಪತ್ತು ಮೊಳ ಎತ್ತರವೂ ಇತ್ತು (1 ಅರಸು 6:20). ಆದದರಿಂದ, ಸೈತಾನನನ್ನು "ಒಂದು ಸಾವಿರ ವರುಷಗಳ ವರೆಗೆ" ಬಂಧಿಸಿಡುವದು ಎಂದರೆ ಆತನು *ಸಂಪೂರ್ಣವಾಗಿ* ಬಂಧನದಲ್ಲಿಡಲ್ಪಟ್ಟನು ಎಂದು ಹೇಳುವ ಸಾಂಕೇತಿಕ ವಿಧವಾಗಿತ್ತು.

ಕಡೆಯ ಹೇಳಿಕೆಯಿಂದ ಯಾವದೇ ಮುಕ್ತಾಯಕ್ಕೆ ಬರುವ ಮುನ್ನ, “ಬಂಧನದಲ್ಲಿಡುವದು” ಏನನ್ನು ಸಂಕೇತಸುತ್ತದೆಂಬುದನ್ನು ಆಲೋಚಿಸತಕ್ಕದ್ದು, ಮತ್ತು ಈ ಸಾಹಸಕಾರ್ಯವು ಈಗಾಗಲೇ ಸಂಭವಿಸಿರುತ್ತದೋ ಅಥವಾ ಅದು ಕ್ರಿಸ್ತನ ಪುನರಾಗಮನದ ವೇಳೆ ಸಂಭವಿಸುವದು ಎಂಬುದನ್ನು ಯೋಚಿಸಬೇಕು. ಸೈತಾನನು ಬಂಧಿಸಲ್ಪಡುವ ಕುರಿತು ಬೇರೆ ಇನ್ನೊಂದು ಸಂದರ್ಭದಲ್ಲಿ ಮಾತ್ರವೇ ಪ್ರಸ್ತಾಪಿಸಲ್ಪಟ್ಟಿದ್ದು, ಅದನ್ನು ಸುವಾರ್ತೆಗಳ ಬರಹಗಾರರೊಳಗೆ ಮೂವರು ಅದನ್ನು ಬರೆದಿರುತ್ತಾರೆ (ಮತ್ತಾಯ 12:25-30; ಮಾರ್ಕ 3:20-27; ಲೂಕ 11:14-23). ಆ ಸಂದರ್ಭದಲ್ಲಿ, ಯೇಸುವಿನ ಮೇಲೆ ಆತನು ಸೈತಾನನ ಶಕ್ತಿಯಿಂದ ದೆವ್ವಗಳನ್ನು ಬಿಡಿಸುತ್ತಾನೆಂಬ ಆರೋಪ ಮಾಡಾಗಿತ್ತು. ಆತನ ಪ್ರತ್ಯುತ್ತರ ಕೊಡುವವನಾಗಿ, ಹೀಗೆ ಕೇಳಿದ್ದನು, “ಇದಲ್ಲದೆ ಒಬ್ಬನು ಮೊದಲು ಬಲಿಷ್ಠನನ್ನು ಕಟ್ಟಿಹಾಕದೆ ಅ ಬಲಿಷ್ಠನ ಮನೆಯನ್ನು ಹೊಕ್ಕು ಅವನ ಸೊತ್ತನ್ನು ಸುಲುಕೊಳ್ಳುವದು ಹೇಗೆ? ಕಟ್ಟಿಹಾಕಿದ ಮೇಲೆ ಅವನ ಮನೆಯನ್ನು ಸುಲುಕೊಂಡಾನು” (ಮತ್ತಾಯ 12:29). ಯೇಸುವು ನೀಡಿದ ದೃಷ್ಟಾಂತದಲ್ಲಿ, ಆತನು “ಬಲಿಷ್ಠ” ಮತ್ತು ಸೈತಾನನ ನಡುವೆ, “ಮನೆಯನ್ನು ಸೂರೆ ಮಾಡುವದು” ಮತ್ತು ದೆವ್ವಗಳನ್ನು ಓಡಿಸುವದರ ನಡುವೆ ಸಮಾನಾರ್ಥವನ್ನು ಕಲ್ಪಿಸುತ್ತಿದ್ದಾನೆ. ಯೇಸುವು ಬಲಿಷ್ಠನನ್ನು, ಅಂದರೆ ಸೈತಾನನನ್ನು “ಕಟ್ಟಿಹಾಕಿದ” *ವನಾಗಿದ್ದ* ಕಾರಣದಿಂದ ಆತನು ದೆವ್ವಗಳನ್ನು ಓಡಿಸುವದಕ್ಕೆ ಶಕ್ತನಾಗಿದ್ದನೆಂಬುದಾಗಿ ಈ ವಾಕ್ಯದಿಂದ ನಾವು ನಿರ್ಧಾರಕ್ಕೆ ಬರಬಹುದಾಗಿದೆ.

ಸೈತಾನನು “ಬಂಧಿಸಲ್ಪಡುವದು” ಯೇಸುವಿನ ಜನನದೊಂದಿಗೆ ಆರಂಭಗೊಂಡಿತ್ತು ಮತ್ತು ಆತನ ಮರಣ, ಹೂಣಲ್ಪಡುವಿಕೆ, ಹಾಗೂ ಪುನರುತ್ಥಾನಗಳೊಂದಿಗೆ ಪರಾಕಾಷ್ಠೆಯನ್ನು ತಲುಪಿತು. ಕೆಲವು ಜನರು ಕರೆದಿರುವ ಪ್ರಕಾರ “ಎಲ್ಲಾ ವಾಗ್ದಾನಗಳ ತಾಯಿ” (ಆದಿಕಾಂಡ 3:15) ಎಂಬ ಈ ವಾಗ್ದಾನವು ಸ್ತ್ರೀಯ ಸಂತಾನವು (ಯೇಸು) ತನ್ನ ಹಿಮ್ಮಡಿಯು ಗಾಯಗೊಂಡಿದ್ದಾಗಿದ್ದರೂ ಸರ್ಪದ (ಸೈತಾನನ) ತಲೆಯನ್ನು ಜಜ್ಜುವನು ಎಂಬುದನ್ನು ಮುಂತಿಳಿಸಿತು. ಇದು ಯೇಸುವು ಶಿಲುಬೆಯ ಮೇಲೆ ಮರಣಿಸಿ ಜೀವಿತನಾಗಿ ಏಳುವ ಮೂಲಕ ಸೈತಾನನ ಶಕ್ತಿ ಹಾಗೂ ಅಧಿಕಾರಕ್ಕೆ “ಒಂದು ಮರಣಾಂತಿಕ ಹೊಡೆತ”ವನ್ನು ಕೊಟ್ಟದ್ದನ್ನು ಸೂಚಿಸುತ್ತದೆಂದು ಬಹುಪಾಲು ವೇದಪಂಡಿತರು ಒಪ್ಪಿಕೊಳ್ಳುತ್ತಾರೆ. ಈ ವಾಗ್ದಾನವು ನೆರವೇರಿತ್ತೆಂಬುದು ಮತ್ತಾಯ 12ರಿಂದ ಮತ್ತು ಈ ಕೆಳಗಿನಂತಹ ವಾಕ್ಯಭಾಗಗಳಿಂದ ಸ್ಪಷ್ಟಗೊಳ್ಳುತ್ತದೆ:

ಯೇಸುವು ಎಪ್ಪತ್ತು ಮಂದಿ ಶಿಷ್ಯರನ್ನು ಸುವಾರ್ತೆ ಸಾರಲು ಕಳುಹಿಸಿ ಕೊಟ್ಟ ಬಳಿಕ, ಅವರು ಸಂತೋಷವುಳ್ಳವರಾಗಿ ಹಿಂತಿರುಗಿ ಬಂದು “ಸ್ವಾಮೀ, ದೆವ್ವಗಳು ಕೂಡಾ ನಿನ್ನ ಹೆಸರನ್ನು ಕೇಳಿ ನಮಗೆ ಅಧೀನವಾಗುತ್ತವೆ ಅಂದರು” (ಲೂಕ 10:17). ಯೇಸು ಉತ್ತರಿಸಿ ಹೇಳಿದ್ದೇನೆಂದರೆ, “ಸೈತಾನನು ಸಿಡಿಲಿನಂತೆ ಆಕಾಶದಿಂದ ಬೀಳುವದನ್ನು ಕಂಡೆನು” (ಲೂಕ 10:18). ಈ ಬೀಳುವಿಕೆಯು ಸೈತಾನನ ಮೂಲೋತ್ಪತ್ತಿಯನ್ನು ಸೂಚಿಸುವದಿಲ್ಲ, ಆದರೆ ಬದಲಾಗಿ ಯೇಸುವಿನ ಶಿಷ್ಯರು ದೆವ್ವಗಳನ್ನು ಓಡಿಸುವದಕ್ಕೆ ಶಕ್ತರಾಗಿದ್ದರ ಮೂಲಕವಾಗಿ ತೋರ್ಪಟ್ಟಿರುವ ಪ್ರಕಾರ ಮನುಷ್ಯರ ಮೇಲಿನ ಸೈತಾನನ ಹಿಡಿತವು ತಗ್ಗಿಸಲ್ಪಟ್ಟಿದ್ದನ್ನು ಸೂಚಿಸುತ್ತದೆ (12:9-12ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಯೋಹಾನ 12ರಲ್ಲಿ, ಯೇಸುವು “ತಾನು ಇಂಥ ಸಾವು ಸಾಯತಕ್ಕವನೆಂಬ” ಕುರಿತು ಮಾತಾಡುವ ವೇಳೆ (ಯೋಹಾನ 12:32, 33), ಆತನು ಹೀಗೆ ಹೇಳಿದನು, “ಈಗ ಇಹಲೋಕಾಧಿಪತಿಯು ಹೊರಗೆ ನೂಕಲ್ಪಡುವನು” (ಯೋಹಾನ 12:31). ಯೋಹಾನ 16ನೇ

ಅಧ್ಯಾಯದಲ್ಲಿ ಆತನು ತನ್ನ ಶಿಷ್ಯರಿಗೆ "ಇಹಲೋಕಾಧಿಪತಿಗೆ ನ್ಯಾಯತೀರ್ವಿಕೆಯಾ"ಗಿದೆ ಎಂದು ಹೇಳಿದನು (ಯೋಹಾನ 16:11).

ಪೌಲನು ಯೇಸುವಿನ ಮರಣದ ಕುರಿತು ಬರೆಯುತ್ತಾ (ಕೊಲೊಸ್ಸೆ 2:14), ಆತನ ಮರಣವು "ದೊರೆತನಗಳನ್ನೂ ಅಧಿಕಾರಗಳನ್ನೂ ನಿರಾಯುಧರನ್ನಾಗಿ" ಮಾಡಿತು ಎಂದು ಬರೆಯುತ್ತಾನೆ (ಕೊಲೊಸ್ಸೆ 2:15). ಯೋಹಾನನು ಹೀಗೆ ಹೇಳಿದನು, "ಸೈತಾನನ ಕೆಲಸಗಳನ್ನು ಲಯ ಮಾಡುವದಕ್ಕೋಸ್ಕರವೇ ದೇವಕುಮಾರನು ಪ್ರತ್ಯಕ್ಷನಾದನು" (1 ಯೋಹಾನ 3:8). ಇಬ್ರಿಯರಿಗೆ ಪತ್ರಿಕೆಯ ಲೇಖಕನು ವಿವರಿಸಿದ್ದೇನೆಂದರೆ ಯೇಸುವು "ತನ್ನ ಮರಣದಿಂದಲೇ ಮರಣಾಧಿಕಾರಿಯನ್ನು ಅಂದರೆ ಸೈತಾನನನ್ನು ಅಡಗಿಸಿಬಿಡುವದಕ್ಕೂ" ಮರಣಿಸಿದನು ಎಂದು ಹೇಳಿದನು (ಇಬ್ರಿಯ 2:14).

ಅಂತಿಮವಾಗಿ, ಪ್ರಕಟನೆ 12ರಲ್ಲಿ ವಾಕ್ಯಭಾಗವು ಇರುತ್ತದೆ. ಸೈತಾನನ ವಿಷಯವಾಗಿ ಆತನು "ದೊಬ್ಬಲ್ಪಟ್ಟನು" ಎಂದು ಹೇಳಲಾಗುತ್ತದೆ ಮತ್ತು ಜಯವು ಯಜ್ಞದ ಕುರಿಯಾದಾತನ ರಕ್ತ ನಿಮಿತ್ತದಿಂದ ದೊರಕಿತ್ತು (ವಚನಗಳು 10, 11; ವಚನಗಳು 9-12ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಸೈತಾನನ ಮೇಲೇ ಗಳಿಸಲಾದ ಈ ಜಯವು ಯೇಸುವಿನ ಮೊದಲನೆಯ ಬರೋಣಕ್ಕೆ (ವಚನಗಳು 2, 5), ಮತ್ತು ಯೇಸುವಿನ ಪರಲೋಕಾರೋಹಣಕ್ಕೆ ಸಂಬಂಧಗೊಳಿಸಲ್ಪಟ್ಟಿದೆ (ವಚನಗಳು 5, 11).

ಸೈತಾನನು "ಸಾವಿರ ವರುಷ ಬಂಧನದಲ್ಲಿಡಲ್ಪಟ್ಟನು" ಎಂಬುದರ ಅರ್ಥವು *ಏನೇ* ಆಗಿದ್ದರೂ ಅದು ಆ ಕಾರಣದಿಂದ ಯೇಸುವಿನ ನರಾವತಾರದೊಂದಿಗೆ ಆರಂಭಗೊಂಡ ಕಾಲಾವಧಿಯೊಂದಿಗೆ ಸಂಬಂಧಿಸಿರುತ್ತದೆ. ಇದು ಯೇಸುವು ಹಿಂದಿರುಗಿ ಬಂದ ನಂತರದಲ್ಲಿನ ಯಾವದೋ ಕಲ್ಪನಾತ್ಮಕ ಯುಗವನ್ನು ಕುರಿತ ಉಲ್ಲೇಖವಾಗಿರುವದಿಲ್ಲ.

ಹೇಗೂ, ಸೈತಾನನು ಯಾವ ಅರ್ಥದಲ್ಲಿ ಬಂಧಿಸಲ್ಪಟ್ಟನೆಂಬುದು ಸ್ಥಾಪಿಸಲ್ಪಟ್ಟಿರುವದಿಲ್ಲ. "ಬಂಧನ" ಎಂಬ ಪದದ ಅರ್ಥವು "ಅಶಕ್ತಗೊಳಿಸುವಿಕೆ" ಎಂದಾಗಿರುತ್ತದೆಂದು ಅನೇಕರು ಭಾವಿಸಿಕೊಳ್ಳುವದರಿಂದ, ಸೈತಾನನು ಈಗ ಬಂದಿಸಲ್ಪಟ್ಟಿರುತ್ತಾನೆಂಬ ಯೋಚನೆಯನ್ನು ಕುಚೋದ್ಯ ಮಾಡುತ್ತಾರೆ. ಅವರು ಲೋಕದಲ್ಲಿ ಸೈತಾನನು ತನ್ನ ಕ್ರಿಯೆಗಳನ್ನು ನಿರಂತರವಾಗಿ ಮಾಡುತ್ತಲೇ ಇದ್ದಾನೆಂಬುದನ್ನು ಸೂಚಿಸುವ ಬೈಬಲಿನಲ್ಲಿರುವ ವಾಕ್ಯಭಾಗಗಳನ್ನು ಗಮನಕ್ಕೆ ತರುತ್ತಾರೆ (ಅಪೊಸ್ತಲರ ಕೃತ್ಯಗಳು 5:3; 2 ಕೊರಿಂಥ 2:11; 11:14; ಎಫೆಸ 2:2; 6:11; 1 ಥೆಸಲೋನಿಕ 2:18; 2 ತಿಮೊಥೆ 2:26; 1 ಪೇತ್ರ 5:8' ಪ್ರಕಟನೆ 2:13; 3:9) ಮತ್ತು "ಲೋಕದಲ್ಲಿ ಇಷ್ಟೊಂದು ಸಮಸ್ಯೆ ಇರುವಾಗ ಸೈತಾನನು ಬಂಧಿಸಲ್ಪಟ್ಟಿರುತ್ತಾನೆಂದು ನೀವು ಹೇಗೆ ಹೇಳಬಲ್ಲಿರಿ?" ಎಂದು ಕೇಳುತ್ತಾರೆ. ಒಬ್ಬ ಲೇಖಕನು ಅಪಹಾಸ್ಯ ಮಾಡುತ್ತಾ ಹೀಗೆ ಹೇಳಿದನು, "ಸೈತಾನನು ಇಂದು ಬಂದಿಸಲ್ಪಟ್ಟಿರುವದಾದರೆ, ಆತನನ್ನು ವಿಪರೀತವಾದ ಉದ್ದದ ಸರಪಣಿಯಿಂದ ಕಟ್ಟಿರಬೇಕು!" ಇನ್ನೊಬ್ಬ ಲೇಖಕನು "ಸೈತಾನನು ಬಂಧಿಸಲ್ಪಟ್ಟನು ಮತ್ತು ಕ್ರಿಸ್ತನು *ಈಗ* ಆಳ್ವಿಕೆ ಮಾಡುತ್ತಿದ್ದಾನೆ?" ಎಂದು ಸಂಶಯಾತ್ಮಕವಾಗಿ ಹೇಳುವ ಮೂಲಕ ತನಗೆ ಗ್ರಹಿಕೆಯಾಗಿದ್ದಕ್ಕಿಂತ ಹೆಚ್ಚಾಗಿ ಮಾತಾಡಿದನು. ಸೈತಾನನು ಈಗ ಬಂಧಿಸಲ್ಪಟ್ಟಿದ್ದಾನೆಂಬುದಕ್ಕೆ ಜನರು ಮಾಡುವ ಆಕ್ಷೇಪಣೆಗಳು ಮತ್ತು ಕ್ರಿಸ್ತನು ಈಗ ಆಳ್ವಿಕೆ ಮಾಡುತ್ತಿದ್ದಾನೆಂಬುದಕ್ಕೆ ಮಾಡಲ್ಪಡುವ ಆಕ್ಷೇಪಣೆಗಳು ಒಂದೇ ಆಗಿವೆ (11:15, 17ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

"ಬಂಧನದಲ್ಲಿಟ್ಟನು" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು δέω (*deō*) ಎಂಬದರಿಂದ ಬಂದದ್ದಾಗಿದ್ದು, "ಅಶಕ್ತಗೊಳಿಸಲ್ಪಡುವಿಕೆ" ಅಥವಾ "ಕ್ರಿಯೆ ಮಾಡದಂತೆ

ಅಸಮರ್ಥಗೊಳಿಸಲ್ಪಟ್ಟನು" ಎಂದರ್ಥವನ್ನು ಕೊಡುವದಿಲ್ಲ. ಪೌಲನು ಅನೇಕ ಸಾರಿ ಸರಪಣಿಯಿಂದ ಬಂಧಿಸಲ್ಪಟ್ಟು ಸೆರೆಮನೆಯಲ್ಲಿದ್ದನಾದರೂ, ಆತನು ಸಕ್ರಿಯ ಜೀವಿತವನ್ನು ಆಗಲೂ ನಡಿಸುತ್ತಿದ್ದನು - ಆದಾಗ್ಯೂ ನಿರ್ಬಂಧಕ್ಕೊಳಪಟ್ಟ ಜೀವಿತವಾಗಿತ್ತು. ಈ ವಾಸ್ತವಾಂಶವು ಅಪೊಸ್ತಲರ ಕೃತ್ಯಗಳು 27 ಮತ್ತು 28 ಅಧ್ಯಾಯಗಳಿಂದ ಸ್ಪಷ್ಟವಾಗುತ್ತದೆ, ಮಾತ್ರವಲ್ಲದೆ ಪೌಲನು ರೋಮಾಪುರದ ಸೆರೆಮನೆಯಲ್ಲಿರುವಾಗ ಬರೆದ ಪತ್ರಿಕೆಗಳಿಂದ ಸ್ಪಷ್ಟವಾಗುತ್ತದೆ: ಎಫೆಸದವರಿಗೆ, ಕೊಲೊಸ್ಸೆಯವರಿಗೆ, ಮತ್ತು ಫಿಲಿಪ್ಪಿಯವರಿಗೆ. *Deō* ಪದವು ರೋಮಾ 7:2ರಲ್ಲಿ ಸಾಂಕೇತಿಕವಾಗಿ ಬಳಸಲ್ಪಟ್ಟಿದೆ, ಅದು ಒಬ್ಬ ಹೆಂಡಿತಿ "ಗಂಡನು ಜೀವದಿಂದಿರುವ ತನಕ ನ್ಯಾಯದ ಪ್ರಕಾರ ಅವನಿಗೆ ಬದ್ಧಳಾಗಿರುವಳು" ಎಂಬುದನ್ನು ತಿಳಿಸುತ್ತದೆ. "ಬದ್ಧಳಾದ" ಸ್ತ್ರೀಯು ಎಲ್ಲಾ ವಿಧದಲ್ಲಿಯೂ ನಿರ್ಬಂಧಿಸಳಾಗಿರಲಿಲ್ಲ, ಆದರೆ ಒಂದು ನಿರ್ದಿಷ್ಟವಾದ ವಿಧದಲ್ಲಿ ನಿರ್ಬಂಧಿಸಲ್ಪಟ್ಟಳಾಗಿದ್ದಳು: ಆಕೆಯ ಗಂಡನು ಇನ್ನೂ ಬದುಕಿರುವ ವೇಳೆ ಮರುಮದುವೆ ಮಾಡಿಕೊಳ್ಳುವದಕ್ಕೆ ಧರ್ಮಶಾಸ್ತ್ರವು ಆಕೆಗೆ ಅನುಮತಿ ನೀಡಲಿಲ್ಲ (ರೋಮಾ 7:3).

ವಾಕ್ಯಭಾಗವು ಸೈತಾನನು "ಬಂಧನದಲ್ಲಿಟ್ಟ" ಕುರಿತು ಅರ್ಥನಿರೂಪಣೆ ಮಾಡುತ್ತದೆ ಮತ್ತು ಎಲ್ಲೆಗಳನ್ನು ತಿಳಿಸುತ್ತದೆ: ಪ್ರಕಟನೆ 20:3 ಹೇಳುವದೇನೆಂದರೆ ಆತನು "ಇನ್ನೂ ಜನಗಳನ್ನು ಮರುಳುಗೊಳಿಸದ ಹಾಗೆ" ಕಟ್ಟಿ ಬಂಧನದಲ್ಲಿಡಲ್ಪಟ್ಟನು ಎಂಬದೆ. Homer Haileyನು ಸೈತಾನನು ಬಂಧನದಲ್ಲಿಡಲ್ಪಡುವದರ ಕುರಿತು "ದಂಡನಾತ್ಮಕವಾಗಿ ಅಲ್ಲ," ಆದರೆ "ಪ್ರತಿಬಂಧಕಾತ್ಮಕ"[11] ಆಗಿತ್ತದೆಂದು ಬಣ್ಣಿಸುತ್ತಾನೆ. 8ನೇ ವಚನವು ಗಮನಕ್ಕೆ ತರುವದೇನೆಂದರೆ, ಬಿಡುಗಡೆಗೊಳಿಸಲ್ಪಟ್ಟ ಬಳಿಕ, ಆತನು ಮತ್ತೊಂದಾವರ್ತಿ "ಜನಾಂಗಗಳನ್ನು ಮರುಳುಗೊಳಿ"ಸುವದಕ್ಕೆ ಶಕ್ತನಾದನು ಎಂಬದೆ. ಹಾಗಾದರೆ ಸೈತಾನನು ಎಲ್ಲಾ ಅರ್ಥದಲ್ಲಿಯೂ ಬಂಧಿಸಲ್ಪಟ್ಟಿರಲಿಲ್ಲ. ಬದಲಾಗಿ ಆತನು ಜನಾಂಗಗಳನ್ನು ಮರುಳುಗೊಳಿಸುವ ವಿಷಯದಲ್ಲಿ ಮಾತ್ರವೇ ಕಟ್ಟಲ್ಪಟ್ಟಿದ್ದನು. ಇದನ್ನು ಈ ಮುಂಚೆ ಗಮನಿಸಿದ ವಾಕ್ಯಭಾಗಗಳೊಂದಿಗೆ - ಜೊತೆಗೆ ಕ್ರಿಸ್ತನಲ್ಲಿ ದೇವರು ಹೊಂದಿರುವ ನಿತ್ಯವಾದ ಉದ್ದೇಶದ ಕುರಿತು ಮಾತಾಡುವ ಇನ್ನಿತರ ವಾಕ್ಯಭಾಗಗಳೊಂದಿಗೆ - ಜೋಡನೆ ಮಾಡುವದು ಪ್ರಾಮುಖ್ಯವಾಗಿರುತ್ತದೆ.

ಸೈತಾನನ ಕಾರಣದಿಂದಾಗಿ, ಲೋಕದೊಳಗೆ ಮರಣ ಹಾಗೂ ಪಾಪಗಳು ಬಂದವು. ಇವುಗಳ ಮೂಲಕವಾಗಿ, ಸೈತಾನನು ಮಾನವರ ಮೇಲೆ ಬಲವಾದ ಹಿಡಿತಗಳನ್ನು ಸಾಧಿಸಿಕೊಂಡು ಕಾಪಾಡಿಕೊಳ್ಳುತ್ತಾ ಬಂದನು. ಹೇಗೂ, "ಸ್ತ್ರೀಯ ಸಂತಾನ"ವು ಬಂದು ಸೈತಾನನ ಶಕ್ತಿಗೆ ಒಂದು ನಜ್ಜುಗುಜ್ಜುಗೊಳಿಸುವಂಥ ಹೊಡೆತವನ್ನು ಕೊಡುವನೆಂದು ದೇವರು ವಾಗ್ದಾನ ಮಾಡಿದನು. ಅಲ್ಲದೆ ಆತನು "ಸಂತಾನ"ವು ಮಾನವರಿಗೆ (ಆದಿಕಾಂಡ 22:18) - ಅಂದರೆ, ಸೈತಾನನಿಂದ ಪೀಡಿಸಲ್ಪಡುವವರೆಲ್ಲರಿಗೆ - ಆಶೀರ್ವಾದವನ್ನುಂಟು ಮಾಡುವದೆಂದು ಸಹ ವಾಗ್ದಾನ ಮಾಡಿದನು.

ಈ ವಾಗ್ದಾನಗಳನ್ನು ಸಫಲಗೊಳಿಸುವ ಸಲುವಾಗಿ, ದೇವರು ಒಂದು ಜನಾಂಗವನ್ನು ಪ್ರತ್ಯೇಕಗೊಳಿಸಿಕೊಂಡನು, ಅದು ಇಸ್ರಾಯೇಲ್ ಜನಾಂಗವೇ (ಯೆಹೂದ್ಯರು). ಆಗೊಮ್ಮೆ ಈಗೊಮ್ಮೆ ಹಳೆಯ ಒಡಂಬಡಿಕೆಯ ಕಾಲಗಳಲ್ಲಿದ್ದು ಉಳಿದ ಜನಾಂಗಗಳ ಮೇಲೆ ಸಹ ಪ್ರಭಾವವನ್ನು ಬೀರುವದಕ್ಕೆ ಪ್ರಯತ್ನಗಳು ನಡೆದವು; ಹೇಗೂ, ಬಹಳ ಮಟ್ಟಿಗೆ ಅಜ್ಞಾನವು ಅಧಿಕವಾಗಿತ್ತು ಮತ್ತು ಸೈತಾನನು ಜನರ ಸಮೂಹದೊಳಗೆ ತನ್ನ ಇಷ್ಟವನ್ನು ಸಾಧಿಸಿಕೊಳ್ಳಲು ಸಫಲನಾಗಿದ್ದನು.

ಅಂತಿಮವಾಗಿ, ಯೇಸುವು ಈ ಲೋಕದೊಳಗೆ ಬಂದನು. ಆತನು ಸೈತಾನನನ್ನು ನಾಶಗೊಳಿಸಬೇಕೆಂಬ ಸ್ಪಷ್ಟವಾಗಿ ಹೇಳಲ್ಪಟ್ಟ ಉದ್ದೇಶದೊಂದಿಗೆ ಬಂದನು. ಇದರ ಬಗ್ಗೆ ಅರಿವು ಇದ್ದ ಸೈತಾನನು, ಯೇಸುವಿನ ಕಾರ್ಯಸೂಚಿಗೆ ಭಂಗವನ್ನುಂಟು ಮಾಡುವದಕ್ಕೆ ಮತ್ತು ಆತನನ್ನು ನಾಶಗೊಳಿಸುವದಕ್ಕೆ ಸಕಲ ವಿಧವಾಗಿಯೂ ಪ್ರಯತ್ನ ಮಾಡಿದನು. ಸೈತಾನನು ಹಾಗೆ ಮಾಡುತ್ತಿರುವ ವೇಳೆ, ನಿರಂತರವಾಗಿ ಆತನು ಸೋಲನ್ನು ಅನುಭವಿಸಿದನು: ಆತನು ಯೇಸುವನ್ನ ನೇರವಾಗಿ ಪಾಪ ಮಾಡುವಂತೆ ನಡಿಸಲು ಪ್ರಯತ್ನಿಸಿದಾಗ, ಅದರಲ್ಲಿ ಆತನು ವಿಫಲನಾದನು (ಮತ್ತಾಯ 4). ಆತನು ಯೇಸುವನ್ನು ಪಾಪ ಮಾಡುವಂತೆ ನಡಿಸಲು ಪರೋಕ್ಷವಾಗಿ ಪ್ರಯತ್ನಿಸಿದ ವೇಳೆ, ಅದರಲ್ಲಿಯೂ ಆತನು ವಿಫಲನಾದನು (ಮತ್ತಾಯ 16:23). ಆತನು ತನ್ನ ಸಹಾಯಕ ದೆವ್ವಗಳನ್ನು ಓಡಿಸುವದರಿಂದ ಕ್ರಿಸ್ತನನ್ನು ಮತ್ತು ಆತನ ಶಿಷ್ಯರನ್ನು ತಡೆಯುವದಕ್ಕೆ ಸಹ ಆತನು ವಿಫಲನಾದನು. ನಿಯಂತ್ರಣವು ತನ್ನಿಂದ ತಪ್ಪಿ ಹೋಗುತ್ತಿದೆ ಎಂಬುದನ್ನು ಭಾವಿಸಿಕೊಂಡವನಾಗಿ, ಸೈತಾನನು ಈಗ ಯೇಸುವನ್ನು ಒಂದು ರೋಮನ್ ಶಿಲುಬೆಗೆ ಜಡಿಯಲೇ ಬೇಕೆಂಬ ಹತಾಶೆಯ ಪ್ರಯತ್ನ ಮಾಡುವವನಾಗಿ ಯೂದನನ್ನು ಹಾಗೂ ಯೆಹೂದ್ಯ ನಾಯಕರನ್ನು ತನ್ನಿಷ್ಟದಂತೆ ನಡೆದುಕೊಳ್ಳುವ ಹಾಗೆ ವಶ ಪಡಿಸಿಕೊಂಡನು.

ಯೇಸುವಿನ ಮರಣವು, ಬಳಿಕ ಆತನ ಪುನರುತ್ಥಾನವು, ಸ್ವತಃ ಆತನ ಸೋಲಿಗೆ ಪ್ರಮುಖ ಕಾರಣಾಂಶವಾಗಿತ್ತು ಎಂಬುದನ್ನು ಆತನು ಗ್ರಹಿಸಿದೆ ಹೋದನೆಂದು ಸ್ಪಷ್ಟವಾಗಿ ಕಾಣಿಸುತ್ತದೆ (12:11ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಯೇಸುವಿನ ಮರಣವು ಪಾಪದ ಬಲವನ್ನು ನಾಶಗೊಳಿಸಿತು; ಯೇಸುವಿನ ಪುನರುತ್ಥಾನವು ಮರಣದ ಬಲವನ್ನು ನಾಶಗೊಳಿಸಿತು. "ಮರಣವೇ, ನಿನ್ನ ಜಯವೆಲ್ಲಿ? ಮರಣವೇ, ನಿನ್ನ ವಿಷದ ಕೊಂಡಿ ಎಲ್ಲಿ? ಮರಣದ ಕೊಂಡಿ ಪಾಪವೇ; ಮತ್ತು ಪಾಪದ ಬಲಕ್ಕೆ ಆಧಾರವು ಧರ್ಮಶಾಸ್ತ್ರವೇ. ಆದರೆ ದೇವರು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ನಮಗೆ ಜಯವನ್ನು ಕೊಟ್ಟಿದ್ದಾನೆ; ಆತನಿಗೆ ಸ್ತೋತ್ರ" (1 ಕೊರಿಂಥ 15:55-57).

ಯೇಸುವಿನ ಯಜ್ಞದ ಪ್ರಯೋಜನಗಳು ಯೆಹೂದ್ಯರಿಗೆ ಮಾತ್ರವೇ ಸೀಮಿತವಾಗಿರಲಿಲ್ಲ, ಆದರೆ ಅವುಗಳು ಎಲ್ಲಾ ಮಾನವರಿಗಾಗಿಯೂ ಇದ್ದವು. ಆತನ ಮೂಲಕವಾಗಿ, ವಿಧೇಯನಾಗುವ ಪ್ರತಿಯೊಬ್ಬ ವಿಶ್ವಾಸಿಯು ಸೈತಾನನು ಸಂಕೋಲೆಗಳನ್ನು ಕಿತ್ತು ಹಾಕಬಲ್ಲನು. ಹೀಗಿರುವದರಿಂದ ಯೇಸುವು ತನ್ನ ಶಿಷ್ಯರಿಗೆ ಸುವಾರ್ತೆಯನ್ನು ಎಲ್ಲಾ ದೇಶಗಳಿಗೂ ಸಾರಬೇಕೆಂದು ಹೇಳಿದನು (ಮತ್ತಾಯ 28:18-20). ಪೇತ್ರನು ಮೊದಲ ಬಾರಿಗೆ ಸುವಾರ್ತೆಯನ್ನು ಸಾರಿದಾಗ, ರಕ್ಷಣೆಯು ಯೆಹೂದ್ಯರಿಗಾಗಿ ಮಾತ್ರವೇ ಆಗಿರಲಿಲ್ಲ, ಆದರೆ "ದೂರದಲ್ಲಿ" ಇರುವವರೆಲ್ಲರಿಗೆ ಸಹ ಇರುತ್ತದೆ ಎಂದು ಒತ್ತಿ ಹೇಳಿದನು (ಅಪೊಸ್ತಲರ ಕೃತ್ಯಗಳು 2:39).

ಸೈತಾನನು ಪ್ರಥಮ ಕ್ರೈಸ್ತರಿಗೆ ಹಿಂಸೆಯನ್ನುಂಟು ಮಾಡುವ ಮೂಲಕ ಸುವಾರ್ತೆಯ ಪ್ರಚಾರಕ್ಕೆ ಭಂಗ ತರಲು ಪ್ರಯತ್ನಿಸಿದನು, ಆದರೆ ಆತನ ಪ್ರಯತ್ನಗಳೆಲ್ಲಾ ಆತನಿಗೇ ತಿರುಗುಬಾಣವಾಗಿದ್ದವು. ಸುವಾರ್ತೆಯನ್ನು ಯೆರೂಸಲೇಮಿನಲ್ಲಿ ಮಾತ್ರವೇ ಇರುವಂತೆ ಮಿತಿಗೊಳಿಸುವದರ ಬದಲಾಗಿ, ಹಿಂಸೆಯಿಂದ ಅದು ಬೇರೆ ಕಡೆಗಳಿಗೆ ಹಬ್ಬುವಂತಾಯಿತು (ಅಪೊಸ್ತಲರ ಕೃತ್ಯಗಳು 8:1-4). ಅಲ್ಲದೆ ಕರ್ತನು ಆ ಸಮಯದಲ್ಲಿ ಸೈತಾನನ ಕೈಯಲ್ಲಿ ಮುಖ್ಯ ಸಾಧನವಾಗಿದ್ದ, ತಾರ್ಸದ ಸೌಲನನ್ನು ಸಹ ಪರಿವರ್ತನೆ ಮಾಡಿದನು. ಯೇಸುವು ಅನಂತರದಲ್ಲಿ ಪೌಲನೆಂದು ಕರೆಯಲ್ಪಟ್ಟ ಸೌಲನಿಗೆ ಅನ್ಯ ಜನಾಂಗಗಳ ಬಳಿಗೆ

(ಯೆಹೂದ್ಯೇತರರಿಗೆ) ಹೋಗುವಂತೆ ಆದೇಶ ಕೊಟ್ಟನು:

> ನಿನ್ನನ್ನು ನನ್ನ ಸೇವಕನಾಗಿಯೂ ಸಾಕ್ಷಿಯಾಗಿಯೂ ನೇಮಿಸುವದಕ್ಕೋಸ್ಕರ ನಿನಗೆ ಕಾಣಿಸಿಕೊಂಡಿದ್ದೇನೆ ... ಅವರು ಕತ್ತಲೆಯಿಂದ ಬೆಳಕಿಗೂ *ಸೈತಾನನ ಅಧಿಕಾರದಿಂದ ದೇವರ ಕಡೆಗೂ* ತಿರುಗಿಕೊಂಡು ನನ್ನಲ್ಲಿ ನಂಬಿಕೆಯಿಡುವದರಿಂದ ಪಾಪಪರಿಹಾರವನ್ನೂ ಪವಿತ್ರರಾದವರಲ್ಲಿ ಹಕ್ಕನ್ನೂ ಹೊಂದುವಂತೆ ಅವರ ಕಣ್ಣುಗಳನ್ನು ತೆರೆಯಬೇಕೆಂದು ಅವರ ಬಳಿಗೆ ನಾನು ನಿನ್ನನ್ನು ಕಳುಹಿಸುತ್ತೇನೆ ಅಂದನು (ಅಪೊಸ್ತಲರ ಕೃತ್ಯಗಳು 26:16-18; ಒತ್ತಿ ಹೇಳಿದ್ದು ನನ್ನದು).

ಸುವಾರ್ತೆಯು ಎಲ್ಲೆಲ್ಲಿ ಹೋಯಿತೋ, ಅಲ್ಲೆಲ್ಲಾ ಅಂಧಕಾರವು ಹೃದಯಗಳೊಳಗಿಂದ ಓಡಿ ಹೋಯಿಯು ಮತ್ತು ಬೆಳಕು ತುಂಬಿಕೊಂಡಿತು (ಕೊಲೊಸ್ಸೆ 1:13; 1 ಥೆಸಲೋನಿಕ 5:4; 1 ಪೇತ್ರ 2:9). "ಯಜ್ಞದ ಕುರಿಯಾದಾತನ ರಕ್ತದಿಂದ" (ಪ್ರಕಟನೆ 12:11) ನೂರಾರು ಜನರು - ಸಾವಿರಾರು ಜನರು ಸಹ - ಸೈತಾನನ ಮೇಲೆ ಜಯವನ್ನು ಹೊಂದಿದರು. ಮೊದಲನೆಯ ಶತಮಾನದ ಅಂತ್ಯವಾಗುವದರೊಳಗೆ, ಸುವಾರ್ತೆಯು "ಆಕಾಶದ ಕೆಳಗಿರುವ ಸರ್ವಸೃಷ್ಟಿಗೆ"ಲ್ಲಾ ಸಾರಲ್ಪಟ್ಟಿತು ಎಂದು ಹೇಳಿದನು (ಕೊಲೊಸ್ಸೆ 1:23). ಸೈತಾನನು ಎಂದಿಗೂ ಚೇತರಿಸಿಕೊಳ್ಳಲಾಗದಂಥ ಒಂದು ಹೊಡೆತವನ್ನು ಪಡೆದುಕೊಂಡಿದ್ದನು. ಕ್ರೈಸ್ತರು ಈಗ ಗಾಯಗೊಂಡಿರುವ, ಸೋಲಿಸಲ್ಪಟ್ಟಿರುವ ವೈರಿಯ ವಿರುದ್ಧ ಹೋರಾಡುತ್ತಾರೆಂಬುದಾಗಿ 12ನೇ ಅಧ್ಯಾಯವು ಹೇಳುತ್ತದೆ. 20ನೇ ಅಧ್ಯಾಯವು ಮೂಲಭೂತವಾಗಿ ಅದೇ ಸತ್ಯವನ್ನು ಕಲಿಸುತ್ತದೆ, ಆದರೆ ಬೇರೊಂದು ಚಿತ್ರವನ್ನು ಬಳಸುತ್ತದೆ: ಕ್ರೈಸ್ತರು ಈಗ *ಕಟ್ಟಲ್ಪಟ್ಟಿರುವ* ವೈರಿಯ ವಿರುದ್ಧ ಹೋರಾಡುತ್ತಾರೆ.

ಹಾಗಾದರೆ ಇದರರ್ಥವು ಸೈತಾನನು ಇನ್ನು ಮೇಲೆ ಸಕ್ರಿಯನಾಗಿರುವದಿಲ್ಲ ಎಂದಾಗಿರುತ್ತದೋ? ಇಲ್ಲವೇ ಇಲ್ಲ. ಸೈತಾನನು ಸಭೆಯನ್ನು ಹಾಗೂ ಕ್ರೈಸ್ತರನ್ನು ನಾಶ ಮಾಡುವದಕ್ಕೆ ಪ್ರಯತ್ನಿಸುತ್ತಿಲ್ಲ ಎಂದರ್ಥವೋ? ಇಲ್ಲ. ಸೈತಾನನು ಕಟ್ಟಿ ಹಾಕಲ್ಪಟ್ಟ ಮೇಲೆಯೂ ಕ್ರೈಸ್ತರನ್ನು ಕೊಲ್ಲುತ್ತಲೇ ಇದ್ದನು. ಸೈತಾನನು ತನ್ನೊಂದಿಗೆ ಸಾಧ್ಯವಾದಷ್ಟು ಜನರನ್ನು ನರಕಕ್ಕೆ ಕರೆದೊಯ್ಯಬೇಕೆಂಬ ಇಂಗಿತವನ್ನು ಹೊಂದಿರುವದಿಲ್ಲ ಎಂದು ಇದರರ್ಥವೋ? ಇಲ್ಲ. Owen Crouchನು ಅದನ್ನು ಈ ವಿಧವಾಗಿ ಹೇಳುತ್ತಾನೆ: ಸೈತಾನನು ಈಗ "ಮಿತಿಗೊಳಿಸಲ್ಪಟ್ಟಿದ್ದಾನೆ, ಹೊರತು ಕೊನೆಗಾಣಿಸಲ್ಪಟ್ಟವನಾಗಿ ರುವದಿಲ್ಲ."[12]

ಸೈತಾನನನ್ನು "ಬಂಧನಲ್ಲಟ್ಟಿದ್ದ"ರ ಅರ್ಥವು ಆತನ ಶಕ್ತಿಯು ಮೊಟಕುಗೊಳಿಸಲ್ಪಟ್ಟಿದೆ ಎಂದಾಗಿರುತ್ತದೆ. ಕರ್ತನು ಸೈತಾನನನ್ನು ಹಲವಾರು ವಿಧಗಳಲ್ಲಿ ಮಿತಿಯಲ್ಲಿಟ್ಟಿದ್ದಾನೆ: ಆತನು ವಾಕ್ಯವನ್ನು ನಾಶಗೊಳಿಸಲಾಗದು (ಮತ್ತಾಯ 24:35; 1 ಪೇತ್ರ 1:25). ಆತನು ಸಭೆಯನ್ನು ನಾಶಗೊಳಿಸಲಾಗದು (ಮತ್ತಾಯ 16:18). ಆತನು ಕ್ರೈಸ್ತರನ್ನು ಹೇಗೆ ಹಿಂಸಿಸಬಲ್ಲನು ಎಂಬ ವಿಷಯದಲ್ಲಿ ಮಿತಿಗೊಳಪಟ್ಟಿದ್ದಾನೆ. ಆತನು ಅಪೊಸ್ತಲರ ದಿನಗಳಲ್ಲಿ ಮಾಡಿದ ರೀತಿಯಲ್ಲಿ, ಇನ್ನು ಮೇಲೆ ಮನುಷ್ಯರೊಳಗೆ ಪ್ರವೇಶಿಸಿ ಅವರ ಚಿತ್ತಗಳನ್ನು ನಿಯಂತ್ರಣ ಮಾಡುವದಕ್ಕೆ ಶಕ್ತನಾಗುವದಿಲ್ಲ. ಕ್ರೈಸ್ತರಿಗೆ ಸಹಿಸಿಕೊಳ್ಳುವದಕ್ಕೆ ಸಾಧ್ಯವಾಗುವದಕ್ಕಿಂತ ಅಧಿಕವಾಗಿ ಶೋಧನೆಯನ್ನು ಆತನಿಂದ ಮಾಡಲಾಗದು (1 ಕೊರಿಂಥ 10:13; 2 ಪೇತ್ರ 2:9). ನಂಬಿಗಸ್ತರು ಸೈತಾನನನ್ನು ಎದುರಿಸುವದಾದರೆ, ಆತನು ಅವರನ್ನು ಬಿಟ್ಟು ಓಡಿ ಹೋಗುವನು (ಯಾಕೋಬ 4:7; ನೋಡಿರಿ ಎಫೆಸ 6:16). ಶಿಲುಬೆಯ ಕಾರಣದಿಂದಾಗಿ, ಸಹೋದರರ ಮೇಲೆ ದೂರು ಹೇಳುವ ತನ್ನ ಹಕ್ಕನ್ನು ಸೈತಾನನು ಕಳೆದುಕೊಂಡನು (12:10ರ ಮೇಲಿನ

ವ್ಯಾಖ್ಯೆಗಳನ್ನು ನೋಡಿರಿ). ಈಗಿನ ವಾಕ್ಯಭಾಗದಲ್ಲಿ, ನಾಶನ ಮಾರ್ಗದಲ್ಲಿರುವವನ್ನು ಮರುಳುಗೊಳಿಸುವ ವಿಷಯದಲ್ಲಿ ಸೈತಾನನು ಮಿತಿಗೊಳಪಡಿಸಲ್ಪಟ್ಟಿದ್ದಾನೆ ಎಂಬುದರ ಕುರಿತು ಒತ್ತು ಕೊಡಲಾಗಿರುತ್ತದೆ. ಸುವಾರ್ತೆಯ ಬೆಳಕು ಅಂಧಕಾರವನ್ನು ಬೆಳಗಿಸುತ್ತದೆ, ಆ ಮೂಲಕ ತಮ್ಮ ಕಣ್ಣುಗಳನ್ನು ತೆರೆಯುವ ಯಾವದೇ ವ್ಯಕ್ತಿಗಳಿಗೆ ಸೈತಾನನ ಕುತಂತ್ರಗಳನ್ನು ಬಯಲುಗೊಳಿಸುತ್ತದೆ (2 ಕೊರಿಂಥ 2:11). ಬಹುಶಃ ನಾವು ಬೇರೆ ಇನ್ನಾವ ವಿಧಗಳಲ್ಲಿ ಸೈತಾನನು ಮಿತಿಗೊಳಿಸಲ್ಪಟ್ಟಿದ್ದಾನೆಂಬ ಬಗ್ಗೆ ಯೋಚಿಸಬಹುದು. ಅದಾದ ತಕ್ಷಣದಲ್ಲಿ ಬರುವ ಸನ್ನಿವೇಶವು ಸೈತಾನನ ಪ್ರಭಾವದ ಮೂಲಕವಾಗಿ ರಕ್ತಸಾಕ್ಷಿಗಳಾಗಿ ಕೊಲ್ಲಲ್ಪಟ್ಟಿದ್ದ ಕ್ರೈಸ್ತರು ಈಗ ಕ್ರಿಸ್ತನ ಸಂಗಡ ಆಳ್ವಿಕೆ ಮಾಡುತ್ತಿದ್ದಾರೆಂಬುದನ್ನು ತೋರಿಸುತ್ತದೆ. ಸೈತಾನನು ಈ ರೀತಿಯಾಗಿ ಆತನು ಕ್ರೈಸ್ತರಿಗೆ ಏನು ಮಾಡಬಲ್ಲನೆಂಬ ವಿಷಯದಲ್ಲಿ ಮಿತಿಗೊಳಗಾಗಿರುತ್ತಾನೆ: ಆತನು ಅವರನ್ನು ಕೊಲ್ಲಬಲ್ಲನು, ಆದರೆ ಅವರನ್ನು ನಾಶಗೊಳಿಸಲು ಸಾಧ್ಯವಿಲ್ಲ. ಆತನು ಅವರ ಜೀವಿತಗಳನ್ನು ಅಂತ್ಯಗೊಳಿಸಬಲ್ಲನು, ಆದರೆ ಅವರ ಜಯವನ್ನು ರದ್ದುಗೊಳಿಸಲು ಸಾಧ್ಯವಿಲ್ಲ.

**ವಚನ 3.** ದೇವದೂತನು ಘಟಸರ್ಪನನ್ನು ಬಂಧನದಲ್ಲಿಟ್ಟ ಬಳಿಕ, ಸೈತಾನನು ಇನ್ನೂ ಜನಗಳನ್ನು ಮರುಳುಗೊಳಿಸದ ಹಾಗೆ ದೇವದೂತನು ಅವನನ್ನು ಅಧೋಲೋಕದಲ್ಲಿ ದೊಬ್ಬಿ ಬಾಗಿಲು ಮುಚ್ಚಿ ಅದಕ್ಕೆ ಮುದ್ರೆಹಾಕಿದನು. ದರ್ಶನದಲ್ಲಿ ಅಧೋಲೋಕವು ಯೇಸುವಿನ ಸಮಾಧಿಗೆ ಮುದ್ರೆ ಹಾಕಲ್ಪಟ್ಟಿದ್ದ ಪ್ರಕಾರವೇ (ಮತ್ತಾಯ 27:66) ಮುದ್ರೆಹಾಕಲ್ಪಟ್ಟಿತು. ಒಂದು ಮುದ್ರೆಯು ಯಾವನು ಮುದ್ರೆ ಹಾಕಲ್ಪಟ್ಟಿರುವ ಕ್ಷೇತ್ರವನ್ನು ಗಮನಕ್ಕೆ ಬಾರದಂತೆ ಪ್ರವೇಶಿಸುವದಕ್ಕೆ ಅಥವಾ ಹೊರಗೆ ಹೋಗುವದಕ್ಕೆ ಸಾಧ್ಯವಾಗದಂತೆ ಖಚಿತ ಪಡಿಸುತ್ತಿತ್ತು. ಮುಚ್ಚಲ್ಪಟ್ಟಿರುವ, ಮುದ್ರೆ ಹಾಕಲಾಗಿರುವ ಅಧೋಲೋಕವು ಅನಂತರದಲ್ಲಿ ಸೈತಾನನ "ಸೆರೆ" ಎಂದು ಕರೆಯಲ್ಪಟ್ಟಿದೆ (20:7). ದೊಬ್ಬುವದು, ಮುಚ್ಚುವದು, ಮತ್ತು ಮುದ್ರೆ ಹಾಕುವದು ಎಂಬ ಮಾತುಗಳು ಸೈತಾನನು ಆತನ ಮೇಲೆ ಹೇರಲಾಗಿರುವ ದೈವಿಕ ನಿರ್ಬಂಧಗಳನ್ನು ಮುರಿದುಕೊಂಡು ಹೊರಬರುವ ಯಾವ ಸಾಧ್ಯತೆಯೂ ಇಲ್ಲದವನಾಗಿ, ನಿಜವಾಗಿಯೂ ಆತನು ಮೊಟಕುಗೊಳಿಸಲ್ಪಟ್ಟಿದ್ದಾನೆಂಬ ವಿಚಾರವನ್ನು ಇನ್ನಷ್ಟು ವಿಸ್ತಾರಗೊಳಿಸುವದಕ್ಕೆ ಬಳಸಲ್ಪಟ್ಟಿರುವ ವಿವರಗಳಾಗಿವೆಯಷ್ಟೇ.

ವಚನವು ಈ ಒಗಟಿನಿಂದ ಕೂಡಿದ ಮಾತುಗಳೊಂದಿಗೆ ಅಂತ್ಯಗೊಳ್ಳುತ್ತದೆ: **ಆ ಸಾವಿರ ವರುಷಗಳಾದ ಮೇಲೆ ಅವನಿಗೆ ಸ್ವಲ್ಪಕಾಲ ಬಿಡುಗಡೆಯಾಗಬೇಕು. ಆಗಬೇಕು** ಎಂಬುದು δεῖ (*dei*) ಎಂಬ ಗ್ರೀಕ್ ಪದದಿಂದ ಬಂದದ್ದಾಗಿದ್ದು, "ನೈತಿಕ ಅವಶ್ಯಕತೆ" ಎಂಬುದನ್ನು ಸೂಚಿಸುತ್ತದೆ. ಸೈತಾನನು **ಸ್ವಲ್ಪ ಕಾಲ** ಬಿಡುಗಡೆಗೊಳಿಸಲ್ಪಡುವದರ ಅರ್ಥವು ಏನೇ ಆಗಿದ್ದರೂ ಸರಿಯೇ ("ಒಂದಿಷ್ಟು ಕಾಲ"; KJV), ಅದು ದೇವರ ಯೋಜನೆಗಳ ಹಾಗೂ ಉದ್ದೇಶಗಳ ಭಾಗವೇ ಆಗಿತ್ತು. ಬಹುಶಃ "ಸ್ವಲ್ಪ ಕಾಲ" ಎಂಬ ಪದಗುಚ್ಛವನ್ನು "ಸಾವಿರ ವರುಷಗಳು" ಎಂಬುದರೊಂದಿಗೆ ವಿರುದ್ಧ ಹೋಲಿಕೆ ಮಾಡುವ ಉದ್ದೇಶದಿಂದ ಬಳಸಿರಬಹುದು: ಸೈತಾನನು "ಬಂಧನಲ್ಲಿ" ಇಡಲ್ಪಟ್ಟ ಕಾಲಕ್ಕೆ ಹೋಲಿಸಿದರೆ ಆತನ ಬುಡುಗಡೆಯ ಸಮಯವು ಅಷ್ಟೇನೂ ಮಹತ್ವವೇ ಇಲ್ಲದ್ದಾಗಿತ್ತು (ವ. 7ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಸೈತಾನ ಬಿಡುಗಡೆ ಹಾಗೂ ಆತನ ಅಂತಿಮ ಗತಿಯ ಕುರಿತು 7 ರಿಂದ 10 ವಚನಗಳಲ್ಲಿ ವಿವರವಾಗಿ ಕೊಡಲಾಗಿರುತ್ತದೆ.

ಪ್ರಕಟನೆ 20ನ್ನು ಅಧ್ಯಯನ ಮಾಡುವ ವೇಳೆ ಕಾಲದ ಪರಿಭಾಷೆಯಲ್ಲಿ ಯೋಚಿಸದಿರುವದು ಕಷ್ಟಕರವಾಗಿರುತ್ತದೆ. ಬಹುಪಾಲು ವ್ಯಾಖ್ಯಾನಕಾರರು - "ಸಾವಿರ

ವರುಷಗಳು" ಎಂಬುದನ್ನು ಅಕ್ಷರಶಃ ಭಾವಿಸಿಕೊಳ್ಳಬಾರದೆಂದು ವಾದಿಸುವವರು ಸಹ - ಸೈತಾನನ "ಸ್ವಲ್ಪ ಕಾಲ"ವನ್ನು ಯುಗಾಂತ್ಯದಲ್ಲಿ ಸಂಭವಿಸುವ ಒಂದು ಅಕ್ಷರಶಃ ಕಾಲಾವದಿ ಎಂದು ನಿರ್ಧರಿಸುತ್ತಾರೆ.

ಗತಕಾಲದಲ್ಲಿ, ಸಹಸ್ರವರ್ಷಪೂರ್ವಾಡಳಿತ ವಾದಿಗಳನ್ನು ವಿರೋಧಿಸುತ್ತಿದ್ದವರು ಸಾಮಾನ್ಯವಾಗಿ "ಸಾವಿರು ವರುಷಗಳು ಕ್ರೈಸ್ತ ಯುಗಕ್ಕೆ ಸಮವಾಗಿರುತ್ತವೆ" ಎಂದು ವಾದಿಸುತ್ತಿದ್ದರು. ಇದರೊಳಗೆ ಒಂದು ಬಲವಾದ ಸತ್ಯಾಂಶವು ಇರುತ್ತದೆ, ಆದರೆ ಅದರೊಳಗೊಂದು ಅಂತರ್ಗತವಾದ ಸಮಸ್ಯೆಯೂ ಇರುತ್ತದೆ: ಕ್ರೈಸ್ತ ಯುಗವು ಕ್ರಿಸ್ತನ ಪುನರಾಗಮನದ ತನಕವೂ ಮುಂದುವರೆಯುವದೆಂದು ಬಹಳಷ್ಟು ಜನರು ಒಪ್ಪಿಕೊಳ್ಳುತ್ತಾರೆ, ಆದರೆ "ಸ್ವಲ್ಪ ಕಾಲ" (KJV) ಸಹ ಕ್ರಿಸ್ತನ ಬರೋಣಕ್ಕೆ ಮುಂಚೆಯೇ ಇರತಕ್ಕದ್ದು. ಕ್ರಿಸ್ತನು ಹಿಂದಿರುಗಿ ಬರುವ ವೇಳೆ, ಅಲ್ಲಿ ನ್ಯಾಯತೀರ್ಪಿನ ದಿನವಿರುವದು, ಮತ್ತು ದುಷ್ಟರು ನರಕದಲ್ಲಿ ಹಾಕಲ್ಪಡುವರು (20:11-15). ಸೈತಾನನು ಸಹ ಸುಮಾರು ಅದೇ ಹೊತ್ತಿನಲ್ಲೇ ನರಕಕ್ಕೆ ಹಾಕಲ್ಪಡುವನು (20:10). ಆದದರಿಂದ, ಆತನು ನರಕದೊಳಗೆ ನಿರ್ಗಮಿಸುವ (20:7-9) ಮುಂಚೆ ಸಂಭವಿಸುವ ಈ "ಸ್ವಲ್ಪ ಕಾಲ" ಎಂಬುದು, ಎರಡನೆಯ ಬರೋಣಕ್ಕೆ ಮುಂಚೆಯೇ ಸಂಭವಿಸತಕ್ಕದ್ದು. "ಸಾವಿರು ವರುಷಗಳು" ಕ್ರೈಸ್ತ ಯುಗವಾಗಿರುವದಾದಲ್ಲಿ, "ಸ್ವಲ್ಪ ಕಾಲ" ಎಲ್ಲಿ ಸರಿ ಹೊಂದುತ್ತದೆ? ಕೆಲವು ಸಾರಿ "ಸ್ವಲ್ಪ ಕಾಲ" ಎಂಬುದನ್ನು "ಕ್ರೈಸ್ತ ಯುಗದ ಅಂತ್ಯದಲ್ಲಿ ಸಂಭವಿಸುವ ಒಂದು ಕ್ಲುಪ್ತ ಕಾಲಾವದಿ" ಎಂಬುದಾಗಿ ಹಠಾತ್ತಾಗಿ ಏನೋ ಒಂದು ಅರ್ಥನಿರೂಪಣೆಯನ್ನು ನೀಡಿ ತಳ್ಳಿ ಹಾಕಲಾಗುತ್ತದೆ. ಹೇಗೂ, ಈ ಕಾಲವು "ಸಾವಿರು ವರುಷಗಳ" ನಂತರದಲ್ಲಿ ಸಂಭವಿಸುತ್ತದೆಂದು ವಾಕ್ಯಭಾಗವು ಹೇಳುತ್ತದೆ. ಹೀಗಿರುವದರಿಂದ, "ಸಾವಿರ ವರುಷಗಳು" ಕ್ರೈಸ್ತ ಯುಗಕ್ಕೆ ಸಮವಾಗಿರುವದಾದರೆ, "ಸ್ವಲ್ಪ ಕಾಲ" ಎಂಬುದು ಕ್ರೈಸ್ತ ಯುಗದ ನಂತರದಲ್ಲಿ, ಆದರೆ ಎರಡನೆಯ ಬರೋಣಕ್ಕೆ ಮುಂಚೆ ಸಂಭವಿಸುವ ಕಾಲಾವದಿ ಆಗಿರತಕ್ಕದ್ದು.

ಮೇಲಿನ ವಿವರಣೆಯಲ್ಲಿ ಒಂದು ಸ್ಪಷ್ಟವಾದ ಸಮಸ್ಯೆಯು ಇರುತ್ತದೆ: ಅದು ಕ್ರೈಸ್ತ ಯುಗವು ಎರಡನೆಯ ಬರೋಣದ ವರೆಗೂ ವಿಸ್ತರಿಸುವದಿಲ್ಲ ಎಂಬ ಅರ್ಥವನ್ನು ಕೊಡುವದು. ಈ ಕಾರಣಕ್ಕಾಗಿ, ನಾವು ಕಾಲಾವದಿಯ ಕುರಿತು ಒತ್ತು ಕೊಡದೆಯೇ "ಒಂದು ಸಾವಿರವು ಸಂಪೂರ್ಣತೆಗೆ ಸಮವಾಗಿದೆ" ಎಂಬುದನ್ನು ಒತ್ತಿ ಹೇಳಿದೆವು. ಅಷ್ಟುಮಾತ್ರವಲ್ಲದೆ, ಈ ಕಾರಣದಿಂದಲೇ ಹೀಗೆ ಹೇಳಲಾಯಿತು "'ಸಾವಿರ ವರುಷಗಳು' ಸೈತಾನನು ಬಂಧನದಲ್ಲಿಡಲ್ಪಡುವಂಥ ಹಾಗೂ ಮರಣ ಹೊಂದಿದ್ದ ಕ್ರೈಸ್ತರು ಜೀವಿತರಾಗಿ ಎದ್ದು ಆಳ್ವಿಕೆ ಮಾಡುವರು- ಅದು ಈಗಲೇ ಆಗಿದೆ." "ಈಗಲೇ" *ಎಂಬುದು* ಕ್ರೈಸ್ತ ಯುಗ; ಆದಾಗ್ಯೂ ಈ ರೀತಿಯಾಗಿ ಹೇಳುವದರಲ್ಲಿ ಮತ್ತು "ಸಾವಿರ ವರುಷಗಳು ಕ್ರೈಸ್ತ ಯುಗಕ್ಕೆ ಸಮವಾಗಿರುತ್ತದೆ" ಎಂದು ಹೇಳುವದರಲ್ಲಿ ಒಂದು ಮಾರ್ಮಿಕವಾದ, ಆದರೆ ಪ್ರಾಮುಖ್ಯವಾಗಿರುವಂಥ ವ್ಯತ್ಯಾಸವು ಇರುತ್ತದೆ. "ಸಾವಿರು ವರುಷ" *ಮತ್ತು* "ಸ್ವಲ್ಪ ಕಾಲ" ಎಂಬುದರ ಕುರಿತು ಚರ್ಚಿಸುವದರಲ್ಲಿ, ಅಕ್ಷರಶಃ ಅರ್ಥನಿರೂಪಣೆಯನ್ನು ಮಾಡದೆ ಇರುವದು ಹಾಗೂ ಸಾಂಕೇತಿಕ ಮಹತ್ವಪೂರ್ಣತೆಯನ್ನು ಒತ್ತಿ ಹೇಳುವದು ಉತ್ತಮವಾಗಿರುತ್ತದೆ.

## ಪ್ರಥಮ ಪುನರುತ್ಥಾನ (20:4-6)

**4ತರುವಾಯ ಸಿಂಹಾಸನಗಳನ್ನು ಕಂಡೆನು. ಅವುಗಳ ಮೇಲೆ ಜನರು ಕೂತಿದ್ದರು; ನ್ಯಾಯತೀರಿಸುವ ಅಧಿಕಾರವು ಅವರಿಗೆ ಕೊಡಲ್ಪಟ್ಟಿತು. ಇದಲ್ಲದೆ ಯೇಸುವಿನ ವಿಷಯವಾದ**

**ಸಾಕ್ಷಿಯ ನಿಮಿತ್ತವಾಗಿಯೂ ದೇವರ ವಾಕ್ಯದ ನಿಮಿತ್ತವಾಗಿಯೂ ತಲೆಹೊಯಿಸಿಕೊಂಡವರ ಆತ್ಮಗಳನ್ನೂ ಮೃಗಕ್ಕೂ ಅದರ ವಿಗ್ರಹಕ್ಕೂ ನಮಸ್ಕರಿಸದೆ ತಮ್ಮ ಹಣೆಯ ಮೇಲೆ ಮತ್ತು ಕೈಯ ಮೇಲೆ ಗುರುತುಹಾಕಿಸಿಕೊಳ್ಳದೆ ಇರುವವರನ್ನೂ ಕಂಡೆನು. ಅವರು ಜೀವಿತರಾಗಿ ಎದ್ದು ಸಾವಿರ ವರುಷ ಕ್ರಿಸ್ತನೊಂದಿಗೆ ಆಳಿದರು. [5]ಮಿಕ್ಕ ಸತ್ತವರು ಆ ಸಾವಿರ ವರುಷ ತೀರುವ ತನಕ ಜೀವಿತರಾಗಿ ಏಳಲಿಲ್ಲ. ಇದೇ ಪ್ರಥಮ ಪುನರುತ್ಥಾನವು. [6]ಪ್ರಥಮ ಪುನರುತ್ಥಾನದಲ್ಲಿ ಸೇರಿರುವವನು ಧನ್ಯನೂ ಪರಿಶುದ್ಧನೂ ಆಗಿದ್ದಾನೆ. ಇಂಥವರ ಮೇಲೆ ಎರಡನೆಯ ಮರಣಕ್ಕೆ ಅಧಿಕಾರವಿಲ್ಲ; ಆದರೆ ಅವರು ದೇವರಿಗೂ ಕ್ರಿಸ್ತನಿಗೂ ಯಾಜಕರಾಗಿ ಕ್ರಿಸ್ತನೊಂದಿಗೆ ಆ ಸಾವಿರ ವರುಷ ಆಳುವರು.**

ನಾವು ಈಗ ಬೈಬಲಿನಲ್ಲಿಯೇ ಅತ್ಯಂಥ ವಿವಾದಾತ್ಮಕ ಪುಸ್ತಕದಲ್ಲಿನ ಅತ್ಯಂಥ ವಿವಾದಾತ್ಮಕ ಅಧ್ಯಾಯದಲ್ಲಿರುವ ಅತ್ಯಂಥ ವಿವಾದಾತ್ಮಕ ವಿಭಾಗಕ್ಕೆ ಬಂದಿದ್ದೇವೆ: ಪ್ರಕಟನೆ 20ನೇ ಅಧ್ಯಾಯದ 4ರಿಂದ 6 ವಚನಗಳು. 20:1-3ರಲ್ಲಿ, ಸೈತಾನನು ಒಂದು ಸಾವಿರು ವರುಷಗಳ ವರೆಗೆ ಬಂಧನದಲ್ಲಿಡಲ್ಪಟ್ಟನು ಎಂಬುದನ್ನು ತಿಳಿದುಕೊಂಡೆವು. ಈಗ ರಕ್ತಸಾಕ್ಷಿಗಳಾಗಿ ಸತ್ತವರು ಕ್ರಿಸ್ತನ ಸಂಗಡ ಒಂದು ಸಾವಿರು ವರುಷಗಳ ವರೆಗೆ ಆಳ್ವಿಕೆ ಮಾಡುವರೆಂಬುದನ್ನು ನೋಡುತ್ತೇವೆ.

ಈ ಹಂತದಲ್ಲಿ, ವಾಚಕನು ತಾನು 1ರಿಂದ 6 ವಚನಗಳನ್ನು ಓದಿದ್ದೇನೆಂಬ ಊಹಾಪೋಹಗಳನ್ನು ಮರೆತು ಬಿಡಬೇಕು, ಮತ್ತು ಪವಿತ್ರಾತ್ಮನು ತಿಳಿಸುವ ವಿರುದ್ಧ ಹೋಲಿಕೆಯ ಮೇಲೆ ಗಮನವನ್ನು ಇಡಬೇಕು: ಸಾವಿರು ವರುಷಗಳ ವರೆಗೆ *ಸೈತಾನನು ಬಂಧನದಲ್ಲಿಡಲ್ಪಟ್ಟನು,* ಅದೇ ವೇಳೆಯಲ್ಲಿ ಒಂದು ಸಾವಿರು ವರುಷಗಳ ಕಾಲ *ರಕ್ತಸಾಕ್ಷಿಗಳು ಆಳ್ವಿಕೆ ಮಾಡಿದರು.* ಒಂದು ಸಾವಿರು ವರುಷಗಳು "ಸಂಪೂರ್ಣ" ಪರಿಪೂರ್ಣತೆಯ ಸಂಕೇತವಾಗಿರುತ್ತವೆ: ಸೈತಾನನು ಸಂಪೂರ್ಣವಾಗಿ ಬಂಧಿಸಲ್ಪಟ್ಟನು, ಅದೇ ವೇಳೆಯಲ್ಲಿ ರಕ್ತಸಾಕ್ಷಿಗಳು ಸಂಪೂರ್ಣವಾಗಿ ಆಳ್ವಿಕೆ ಮಾಡಿದರು (ವ. 2ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಸರಳವಾಗಿ ಹೇಳುವದಾದರೆ, ಒಂದು ಕಡೆಯಲ್ಲಿ *ಪೂರ್ತಿ ಸೋಲು* ಇದ್ದರೆ, ಇನ್ನೊಂದು ಕಡೆಯಲ್ಲಿ *ಸಂಪೂರ್ಣ ಜಯ* ಇತ್ತು.

ಆದಿ ಕ್ರೈಸ್ತರಿಗೆ ಆ ದೃಷ್ಟಿಕೋನದ ಅಗತ್ಯವಿತ್ತು. ಭೂಲೋಕದ ದೃಷ್ಟಿಯಿಂದ ನೋಡುವದಾದರೆ, ಸೈತಾನನು ಗೆಲ್ಲುತ್ತಿರುವವನಂತೆ ಮತ್ತು ಕ್ರೈಸ್ತತ್ವವು ನಾಶವಾದಂತೆ ಕಾಣಿಸುತ್ತಿತ್ತು. ಪ್ರಕಟನೆ 20:1-6 ವಚನಗಳು ನಂಬಿಗಸ್ತ ಕ್ರೈಸ್ತರಿಗೆ ಕೂಗಿ ಹೇಳಿದ್ದೇನೆಂದರೆ, "ಅದು ಕೇವಲ ಒಂದು ಭ್ರಮೆಯಷ್ಟೇ! ವಾಸ್ತವಿಕತೆಯು ಹೀಗಿರುತ್ತದೆ: *ನೀವು* ಗೆಲ್ಲುತ್ತಿರುವಿರಿ! ನಿಮ್ಮ ಪ್ರಾಣವನ್ನು ಕಳೆದುಕೊಳ್ಳುವ ಬಗ್ಗೆ ಚಿಂತೆ ಮಾಡಬೇಡಿರಿ, ಯಾಕೆಂದರೆ ತಮ್ಮ ನಂಬಿಕಗೋಸ್ಕರ ರಕ್ತಸಾಕ್ಷಿಯಾಗಿ ಕೊಲ್ಲಲ್ಪಟ್ಟವರು ನಿಜವಾಗಿಯೂ ಸತ್ತವರಲ್ಲ. ಅವರು *ಜೀವಂತವಾಗಿದ್ದಾರೆ,* ಮತ್ತು ಅವರು ಯೇಸುವಿನ ಸಂಗಡ *ಆಳ್ವಿಕೆ ಮಾಡುತ್ತಿದ್ದಾರೆ!"*

ಪ್ರಕಟನೆ 20:4-6 ವಾಕ್ಯಭಾಗವು ಎಷ್ಟೊಂದು ವಿಚಿತ್ರವಾದ ಹಾಗೂ ಸಂಕೀರ್ಣವಾದ ಊಹೆಗಳನ್ನು ಹೆಣೆದಿರುತ್ತದೆಂದರೆ ಅವುಗಳಲ್ಲಿ ಕೆಲವೊಂದನ್ನು ಪರೀಕ್ಷಿಸಲೇ ಬೇಕಾಗಿರುತ್ತದೆ, ಬೇರೆ ದಾರಿಯಿಲ್ಲ. ಹೇಗೂ, ಈ ವಚನಗಳ ಸರಳವಾದ ಭಾವನೆಯ ಮೇಲಿನ ನಮ್ಮ ದೃಷ್ಟಿಯನ್ನು ಕಳೆದುಕೊಳ್ಳಕೂಡದು: ನಾವು ನಂಬಿಗಸ್ತರಾಗಿ ಉಳಿಯುವದಾದರೆ, *ಸೈತಾನನು ಸೋತು ಹೋಗುವನು ಮತ್ತು ನಾವು ಗೆಲ್ಲುವೆವು.*

"ಸಹಸ್ರವರ್ಷ" ಎಂಬ ಪದವು *mille* ಮತ್ತು *annus* ಎಂಬ ಪದಗಳಿಂದ ಬರುತ್ತದೆ, ಇವು "ಸಾವಿರ" ಮತ್ತು "ವರ್ಷ" ಎಂಬುದಕ್ಕಿರುವ ಲ್ಯಾಟಿನ್ ಪದಗಳಿಂದ ಬರುತ್ತದೆ. "ಸಹಸ್ರ ವರ್ಷ"

ಎಂಬುದು “ಒಂದು ಸಾವಿರ ವರುಷಗಳು” ಎಂದು ಹೇಳುವದಕ್ಕೆ ಬಳಸುವ ಇನ್ನೊಂದು ಪದವಾಗಿದೆಯಷ್ಟೆ. ಇದಕ್ಕೆ ಸಂಬಂಧಿಸಿದಂತೆ ಕೆಲವು ಸಾರಿ ಬಳಸಲ್ಪಡುವ ಪದವೆಂದರೆ: “chiliasm” ಇದು ಗ್ರೀಕ್ ಭಾಷೆಯ χίλιοι (*chilioi*) ಎಂಬ ಪದದಿಂದ ಬರುವದಾಗಿದ್ದು ಅದರರ್ಥವು “ಸಾವಿರ” ಎಂದಾಗಿದೆ, ಮತ್ತು ಪ್ರಕಟನೆ 20ರಲ್ಲಿನ “ಸಾವಿರು ವರುಷಗಳ” ಕುರಿತಾದ ಒಂದು ನಿರ್ದಿಷ್ಟವಾದ ಊಹೆಯನ್ನು ಸೂಚಿಸುತ್ತದೆ. ಬೈಬಲಿನಲ್ಲಿ “ಒಂದು ಸಾವಿರ ವರುಷಗಳ” ಕುರಿತು ಮಾತಾಡುವ ಕೆಲವೇ ಕೆಲವು ವಾಕ್ಯಗಳಲ್ಲಿ 20ನೇ ಅಧ್ಯಾಯವು ಒಂದಾಗಿರುತ್ತದೆ. ಬೈಬಲಿನಲ್ಲಿ ಹಲವಾರು ಸ್ಥಳಗಳಲ್ಲಿ “ಸಾವಿರ ವರುಷಗಳು” ಎಂಬ ಪದವು ಒಂದು ದೀರ್ಘವಾದ, ಅನಿರ್ದಿಷ್ಟಾವದಿಯ ಕಾಲವನ್ನು ಸೂಚಿಸುತ್ತದೆ (ಕೀರ್ತನೆ 90:4; ಪ್ರಸಂಗಿ 6:6; 2 ಪೇತ್ರ 3:8). ಈ ಉಲ್ಲೇಖಗಳಲ್ಲಿ ಯಾವದೂ “ಸಾವಿರ ವರುಷಗಳು” ಎಂಬುದನ್ನು ಅಕ್ಷರಶಃ ಸಾವಿರು ಕ್ಯಾಲೆಂಡರ್ ವರ್ಷಗಳೆಂಬ ಅರ್ಥದಲ್ಲಿ ಬಳಸುವದಿಲ್ಲ.

ಪ್ರಕಟನೆ ಪುಸ್ತಕದಲ್ಲಿ ಸಿಕ್ಕುವ ಎಲ್ಲಾ ಸಾಂಕೇತಿಕ ಸಂಖ್ಯೆಗಳೊಳಗೆ, ಮನುಷ್ಯರು ಏಕೆ ಈ “ಸಾವಿರು ವರುಷಗಳು” ಎಂಬುದನ್ನಷ್ಟೇ ಅಕ್ಷರಶಃಗೊಳಿಸಲು ನಿರ್ಧರಿಸಿದರೆಂಬುದು ಗೊತ್ತಾಗುವದಿಲ್ಲ. ಬಳಿಕ ಈ “ಸಾವಿರು ವರುಷಗಳು” ಕುರಿತಾದ ತಮ್ಮ ಅಕ್ಷರಶಃ ನಿಲುವಿನ ಸುತ್ತ ಒಂದು ದೈವಶಾಸ್ತ್ರದ ಸಂಕೀರ್ಣವಾಗಿರುವ ವ್ಯವಸ್ಥೆಯೊಂದನ್ನು ನಿರ್ಮಿಸಿದರೆಂಬುದೂ ಸ್ಪಷ್ಟವಾಗಿ ತಿಳಿಯುವದಿಲ್ಲ. ಹೇಗೂ, ಅದು ಸಂಭವಿಸಿ ಬಿಟ್ಟಿರುತ್ತದೆ - ಮತ್ತು ನಾವು ಅದರ ಬಗ್ಗೆ ಚರ್ಚಿಸಲೇ ಬೇಕಾಗಿರುತ್ತದೆ.

“ಸಹಸ್ರವರ್ಷದ ಅಭಿಪ್ರಾಯಗಳು” ಕುರಿತಾಗಿ ಬರೆಯುವವರು ಸಾಮಾನ್ಯವಾಗಿ ಎಲ್ಲರನ್ನೂ ಈ ಕೆಳಗಿನ ಮುರು ವಿಭಾಗಗಳೊಳಗೆ ಯಾವದಾದರೂ ಒಂದರಲ್ಲಿ ಸೇರ್ಪಡೆಗೊಳಿಸುತ್ತಾರೆ:

1. *Postmillennialism.* ಈ ಅರ್ಥೈಸುವ ದಾರಿಯು ಹಲವು ವರ್ಷಗಳ ಹಿಂದೆ ಜನಪ್ರಿಯವಾಗಿತ್ತು. ಇದು ಈಗ ಹೆಚ್ಚು ಕಡಿಮೆಯ ನಿಷ್ಕ್ರಿಯಗೊಂಡಿರುತ್ತದೆ, ಆದರೆ ಹಳೆಯ ವ್ಯಾಖ್ಯಾನಗ್ರಂಥಗಳ ಮರುಮುದ್ರಣಗಳೊಳಗೆ ಇದರ ಉಲ್ಲೇಖಗಳು ಮಾಡಲ್ಪಟ್ಟಿರುತ್ತವೆ. “Post” ಎಂದರೆ “ನಂತರ.” “Postmillennialism” ಎಂಬುದರ ಅರ್ಥವು “ಸಾವಿರ ವರ್ಷಗಳ ನಂತರ” ಎಂದಾಗಿರುತ್ತದೆ. ಉಲ್ಲೇಖದ ಅಂಶವು ಎರಡನೆಯ ಬರೋಣ: ಸಹಸ್ರವರ್ಷನಂತರ ವಾದಿಗಳು “ಸಾವಿರು ವರ್ಷಗಳು” ಮುಗಿದ ಬಳಿಕ ಕ್ರಿಸ್ತನು ಹಿಂದಿರುಗಿ ಬರುವನೆಂಬುದಾಗಿ ನಂಬುತ್ತಾರೆ. ಅವರಲ್ಲಿ ಬಹಳಷ್ಟು ಜನರು “ಸಹಸ್ರವರ್ಷ” ಎಂಬುದನ್ನು ಒಂದು ಅಕ್ಷರಶಃ ಸಾವಿರ ವರುಷಗಳೆಂದು ತಿಳಿದುಕೊಳ್ಳಲಿಲ್ಲ, ಆದರೆ ಬದಲಾಗಿ. ಸುವಾರ್ತೆಯು ಲೋಕದಲ್ಲಿ ಜಯಗೊಳ್ಳುವಂಥ ಮತ್ತು ಸಮಾಧಾನ ಹಾಗೂ ಸಮೃದ್ಧಿಗಳು ಜಗತ್ತಿನಲ್ಲೆಡೆಯೂ ಹರಡಿಕೊಳ್ಳುವಂಥ “ಒಂದು ಸುವರ್ಣ ಯುಗ” ಎಂದು ತಿಳಿದುಕೊಂಡಿದ್ದರು. ಎರಡು ವಿಶ್ವಯುದ್ಧಗಲೂ ಮತ್ತು ಇಪ್ಪತ್ತನೆಯ ಶತಮಾನದ ಇತರೆ ಸಮಸ್ಯೆಗಳು ಈ ನಿಷ್ಕಪಟ ಆಶಾವಾದಕ್ಕೆ ತೆರೆಯನ್ನು ಎಳೆದಿದ್ದವು.

2. *Premillennialism*. “Pre” ಎಂದರೆ “ಪೂರ್ವ,” ಅದ್ದರಿಂದ “ಸಹಸ್ರವರ್ಷಪೂರ್ವ” ಎಂಬುದರ ಅಕ್ಷರಶಃ ಅರ್ಥವು “ಸಾವಿರು ವರುಷಗಳ ಮುಂಚೆ” ಎಂದಾಗಿರುತ್ತದೆ. ಪುನಃ, ಉಲ್ಲೇಖನದ ಅಂಶವು ಎರಡನೆಯ ಬರೋಣವಾಗಿರುತ್ತದೆ: ಸಹಸ್ರವರ್ಷಪೂರ್ವ ವಾದಿಗಳು ನಂಬುವದೇನೆಂದರೆ ಕ್ರಿಸ್ತನು “ಸಾವಿರು ವರುಷಗಳ” ಮುಂಚೆಯೇ ಬರುವನು - ಮತ್ತು ಅವರು “ಸಾವಿರು ವರುಷಗಳು” ಎಂಬುದನ್ನು ಸಾವಿರು ಕ್ಯಾಲೆಂಡರ್ ವರ್ಷಗಳೆಂದು ಭಾವಿಸಿಕೊಳ್ಳುತ್ತಾರೆ. ಕ್ರಿಸ್ತನು ಭೂಮಿಗೆ ಹಿಂದಿರುಗಿ ಬಂದು ಅಕ್ಷರಶಃ ದೇಶವಾಗಿರುವ

ಇಸ್ರಾಯೇಲಿನಲ್ಲಿರುವ ಅಕ್ಷರಶಃ ಯೆರೂಸಲೇಮ್ ಪಟ್ಟಣದಲ್ಲಿ ಅಕ್ಷರಶಃ ಸಾವಿರು ವರ್ಷಗಳ ಕಾಲ ಆಳ್ವಿಕೆ ಮಾಡುವನೆಂದು ಅವರು ಕಲಿಸುತ್ತಾರೆ.

3. *Amillennialism.* "A" ಒಂದು ಉಪಸರ್ಗವಾಗಿದ್ದು "ಇಲ್ಲ" ಅಥವಾ "ಆಗಿರುವದಿಲ್ಲ" ಎಂಬರ್ಥವನ್ನು ಕೊಡುತ್ತದೆ. ಹೀಗಿರುವದರಿಂದ "amillennialism" ಎಂದರೆ "ಸಾವಿರು ವರುಷಗಳು ಇರುವದಿಲ್ಲ" ಎಂದಾಗಿರುತ್ತದೆ. ಈ ಬಿರುದು ಒಂದು ಬೇನಾಮಿ ಆಗಿರುತ್ತದೆ, ಯಾಕೆಂದರೆ "ಸಹಸ್ರವರ್ಷ ನಿರಾಕರಣಾ ವಾದಿಗಳು" ಎಂದು ಕರೆಯಲ್ಪಡುವವರಲ್ಲಿ ಬಹುಪಾಲು ಮಂದಿಯು ಪ್ರಕಟನೆ ಪುಸ್ತಕದಲ್ಲಿನ ಸಾವಿರು ವರುಷಗಳ ಬಗ್ಗೆ ನಂಬುತ್ತಾರೆ; ಆದರೆ ಅವರು ಪುಸ್ತಕರಲ್ಲಿರುವ ಬೇರೆ ಸಂಖ್ಯೆಗಳಂತೆಯೇ, "ಒಂದು ಸಾವಿರು" ಎಂಬುದನ್ನು ಸಾಂಕೇತಿಕವಾದದ್ದೆಂದು ನಂಬುತ್ತಾರೆ. ಹಾಗಿದ್ದರೂ, "ಸಹಸ್ರವರ್ಷ ನಿರಾಕರಣಾ ವಾದ" ಎಂಬುದು "ಸಾವಿರು ವರುಷಗಳು" ಸಾಂಕೇತಿಕವಾದವುಗಳೆಂಬ ನಂಬಿಕೆಯನ್ನು ಸೂಚಿಸುವ ಪ್ರಮಾಣಿಕ ದೈವಶಾಸ್ತ್ರೀಕವಾದ ಪದವಾಗಿರುತ್ತದೆ.

ಈ "ಸಹಸ್ರವರ್ಷ ಅಭಿಪ್ರಾಯಗಳ"ಲ್ಲಿ, ಗುಂಪುಗುಂಪಾಗಿ ತರ್ಕಬದ್ಧವಲ್ಲದ ಹಾಗೂ ವಿಲಕ್ಷಣವಾದ ಊಹೆಗಳನ್ನು ಹುಟ್ಟು ಹಾಕಿರುವ ಅಭಿಪ್ರಾಯವೆಂದರೆ ಸಹಸ್ರವರ್ಷಪೂರ್ವವಾದವೇ ಆಗಿರುತ್ತದೆ. ಕ್ರೈಸ್ತರು ಪ್ರಕಟನೆ ಪುಸ್ತಕದ ವಿಷಯದಲ್ಲಿ ಒಂದು ಸ್ವಸ್ಥ ಬುದ್ಧಿಯ ಹಾಗೂ ಅರಿವುಳ್ಳ ಅರ್ಥೈಸುವ ದಾರಿಯನ್ನು ಕಂಡುಕೊಳ್ಳಲು ಪ್ರಯಾಸ ಪಡುವ ವೇಳೆ, ನಿರಂತರವಾಗಿ ಎದುರಾಗುವಂಥದ್ದು ಸಹಸ್ರವರ್ಷಪೂರ್ವ ವಾದವೇ ಆಗಿರುತ್ತದೆ, ಆದದರಿಂದ, ಈ ಸಹಸ್ರವರ್ಷಪೂರ್ವ ವಾದದ ಕುರಿತು ಅತಿ ಸೂಕ್ಷ್ಮವಾಗಿ ಪರೀಕ್ಷಿಸುವದು ಅವಶ್ಯವಾಗಿದೆ.

ಇಷ್ಟೊಂದು ವರ್ಷಗಳಿಂದಲೂ, ವಿವಿಧ ವ್ಯಕ್ತಿಗಳು ಪ್ರಕಟನೆ 20ನೇ ಅಧ್ಯಾಯದ "ಸಾವಿರು ವರುಷಗಳು" ಅಕ್ಷರಶಃ ಅರ್ಥೈಸಿಕೊಳ್ಳತಕ್ಕದ್ದು ಮತ್ತು ಪದವು ಹೇಗೋ ಯೇಸುವಿನ ಎರಡನೆಯ ಬರೋಣಕ್ಕೆ ಸಂಬಂಧಪಟ್ಟಿದೆ ಎಂಬುದಾಗಿ ಪ್ರತಿಪಾದಿಸಿರುತ್ತಾರೆ. ಸಹಸ್ರವರ್ಷಪೂರ್ವ ವಾದಿಗಳು ಈ ವಿಚಾರವನ್ನು ಅಂಗೀಕರಿಸಿಕೊಳ್ಳುವವರ ಪಟ್ಟಿಯನ್ನು ಮಾಡುವದಕ್ಕೆ ಬಹಳ ಇಷ್ಟಪಡುತ್ತಾರೆ, ವಿಶೇಷವಾಗಿ ಕೆಲವೊಬ್ಬ "ಸಭಾ ಪಿತೃಗಳು" ಎಂದು ಕರೆಯಲ್ಪಡುವವರ ಪಟ್ಟಿಯನ್ನು ಮಾಡುತ್ತಾರೆ, ಅವರೆಲ್ಲರೂ ಸಹ ಆಧುನಿಕ ಸಹಸ್ರವರ್ಷಪೂರ್ವವಾದವು ಕಲಿಸುವದನ್ನೆಲ್ಲಾ ಪ್ರತಿಪಾದಿಸಿದವರೆಂಬಂತೆ ಹೇಳುತ್ತಾರೆ. ಕೆಲವು ಆದಿ ಕ್ರೈಸ್ತ ಲೇಖಕರು ಆ ವೇಳೆಯಲ್ಲಿ ವ್ಯಾಪಕವಾಗಿ ಹರಿದಾಡುತ್ತಿದ್ದ ಭೌತಿಕ ಮೆಸ್ಸೀಯಾತ್ಮಕ ಆಳ್ವಿಕೆಯ ಕುರಿತಾಗಿ ಯೆಹೂದ್ಯರಲ್ಲಿದ್ದ ತಪ್ಪುಕಲ್ಪನೆಗಳಿಂದ ಪ್ರಭಾವಿತರಾಗಿದ್ದಂತೆ ಕಂಡರು ಎಂಬುದು ಸತ್ಯವೇ ಆಗಿರುತ್ತದೆ. ಹೇಗೂ, ಅವರು ಆಧುನಿಕ ಕಾಲಹಂಚಿಕೆಯ ಸಹಸ್ರವರ್ಷಪೂರ್ವವಾದದ ಮತಾಂಧ ಅಭಿಪ್ರಾಯಗಳನ್ನು ಕಲಿಸುತ್ತಿದ್ದರೆಂಬುದಂತೂ ಸತ್ಯವಲ್ಲ.[13] "ಕಾಲಹಂಚಿಕೆ ಸಹಸ್ರವರ್ಷಪೂರ್ವ ವಾದ"ದಲ್ಲಿ ಬಳಸಲ್ಪಟ್ಟಿರುವ "ಕಾಲಹಂಚಿಕೆ" ಎಂಬ ಪದವು ಕ್ರಿಸ್ತನ ಮರಣ ಹಾಗೂ ಆತನ ಎರಡನೆಯ ಬರೋಣದ ನಡುವಿನ ಕಾಲಾವದಿಯು "ಕಾಲಹಂಚಿಕೆಗಳು" ಆಗಿ ವಿಭಾಗಿಸಲ್ಪಟ್ಟಿವೆ ಎಂಬ ಊಹೆಯನ್ನು ಸೂಚಿಸುತ್ತದೆ - ದೇವರು ಮಾನವರೊಂದಿಗೆ ವಿವಿಧ ವಿಧಗಳಲ್ಲಿ ವ್ಯವಹರಿಸುವ ಬೇರೆ ಬೇರೆ ಕಾಲವಾದಿಗಳು. ಉದಾಹರಣೆಗೆ, J. N. Darbyನು ಕಲಿಸಿದ್ದೇನೆಂದರೆ ಅಪೊಸ್ತಲರ ಕೃತ್ಯಗಳು 2-7 ಅಧ್ಯಾಯಗಳು "ಯೆಹೂದ್ಯ ಯುಗ" (ನೇಮನಿಷ್ಠೆಯ ಯುಗ) ಆಗಿದ್ದರೆ, ಅಪೊಸ್ತಲರ ಕೃತ್ಯಗಳು 8ನೇ ಅಧ್ಯಾಯದಿಂದ ಮೊದಲ್ಗೊಂಡು ಮಿಕ್ಕ ಅಧ್ಯಾಯಗಳು "ಅನ್ಯಜನರ ಯುಗ" (ಕೃಪೆಯ ಯುಗ) ಎಂಬದೆ. ಬಹುಪಾಲು ಕಾಲಹಂಚಿಕೆ

ಸಹಸ್ರವರ್ಷಪೂರ್ವವಾದಿಗಳು ಈಗ ನಾವು ಪ್ರಸ್ತುತ "ಸಭಾ ಯುಗ"ದಲ್ಲಿದ್ದೇವೆಂದು, ಅದೇ ವೇಳೆಯಲ್ಲಿ ಸಾವಿರ-ವರ್ಷಗಳ ಆಳ್ವಿಕೆಯು "ರಾಜ್ಯದ ಯುಗ" ಆಗಿರುವದು ಎಂದು ಹೇಳುವರು. ಇಂತಹ ಊಹೆಗಳು "ದೇವರು ಪಕ್ಷಪಾತಿಯಲ್ಲ" (ಅಪೊಸ್ತಲರ ಕೃತ್ಯಗಳು 10:34) ಎಂಬ ಮೂಲಭೂತ ಭಾವನೆಯನ್ನು ಉಲ್ಲಂಘಿಸುತ್ತವೆ. ಈ "ಕಡೇ ದಿನಗಳ" ವೇಳೆ (ಅಪೊಸ್ತಲರ ಕೃತ್ಯಗಳು 2:17; ಇಬ್ರಿಯ 1:2), ದೇವರು ಕೆಲವರಿಗೆ ಒಂದು ವ್ಯವಸ್ಥೆಯನ್ನು ಮತ್ತು ಇನ್ನು ಕೆಲವರಿಗೆ ಬೇರೊಂದು ವ್ಯವಸ್ಥೆಯನ್ನು ಮಾಡಿರುವದಿಲ್ಲ.

ಕಾಲಹಂಚಿಕೆ ಸಹಸ್ರವರ್ಷಪೂರ್ವವಾದವು ಇಂದು ಅಸ್ತಿತ್ವದಲ್ಲಿರುವ ಪ್ರಕಾರ ಸ್ವಲ್ಪ ಹೊಸದಾಗಿರುತ್ತದೆ. ಇದು Plymouth Brethren ಸಭೆಯ ಸಭಾಪಾಲಕನಾದ J. N. Darbyಯಿಂದ ಆರಂಭಗೊಳಿಸಲ್ಪಟ್ಟು, Scofield Bibleದಿಂದ ಹಬ್ಬಿಸಲ್ಪಟ್ಟಿತು, ಮತ್ತು 1970ರ ಹೊತ್ತಿನಲ್ಲಿ Hal Lindseyನ ಬರಹಗಳ ಮೂಲಕ ಜನಪ್ರಿಯಗೊಳಿಸಲ್ಪಟ್ಟಿತು. ಪ್ರಕಟನೆ ಪುಸ್ತಕಕ್ಕೆ ಈ ವಿಧವಾದ ಅರ್ಥೈಸುವ ದಾರಿಯಲ್ಲಿರುವ ಲೋಪಗಳ ಕುರಿತು ಈಗಾಗಲೇ ಚರ್ಚಿಸಲಾಗಿರುತ್ತದೆ (ನೋಡಿರಿ *ಪರಿಚಯ, ಅರ್ಥೈಸುವ ದಾರಿಗಳು, ಭವಿಷ್ಯಾತ್ಮಕ ಅರ್ಥೈಸುವ ದಾರಿ*), ಅದರಲ್ಲಿ ಪ್ರಥಮ ಶತಮಾನದ ಕ್ರೈಸ್ತರಿಗೆ ಅದು ಆದರಣೆಯನ್ನು ಕೊಡಲಾರದ್ದೆಂದು ಹಾಗೂ ರಕ್ತದಿಂದ ಕೊಂಡುಕೊಳ್ಳಲ್ಪಟ್ಟ ಕರ್ತನ ಸಭೆಯ ಮೇಲೆ ಒತ್ತು ಕೊಡದಿರುವಿಕೆ ಕುರಿತಾಗಿಯೂ ಚರ್ಚಿಸಲಾಗಿರುತ್ತದೆ. ಈ ಅಧ್ಯಾಯವು ಸಹಸ್ರವರ್ಷಪೂರ್ವವಾದದ ದೈವಶಾಸ್ತ್ರದಲ್ಲಿ ಕೇಂದ್ರಭಾಗವಾಗಿರುತ್ತದೆ. ಈ ಕೆಳಗಿನವುಗಳು ಪ್ರಕಟನೆ 20ನೇ ಅಧ್ಯಾಯದ ವಿಷಯದಲ್ಲಿರುವ ದುರ್ಬಲತೆಗಳಾಗಿವೆ.

1. ಸಹಸ್ರವರ್ಷಪೂರ್ವಾದದ ಮುಖ್ಯವಾದ ಸಿದ್ಧಾಂತಗಳು ಪ್ರಕಟನೆ 20ನೇ ಅಧ್ಯಾಯದ ಅಂತ್ಯಕಾಲಿಕ ಭಾಷೆಯ ಅಸ್ಥಿರವಾದ ಬುನಾದಿಯ ಮೇಲೆ ಕಟ್ಟಲ್ಪಟ್ಟಿರುತ್ತವೆ. ಅವುಗಳಲ್ಲಿ ಗಮನಿಸತಕ್ಕದ್ದೆಂದರೆ, ಈ ಪರಿಸ್ಥಿತಿಯು ಭೂಮಿಯ ಮೇಲೆ ಅಕ್ಷರಶಃ ಸಾವಿರು ವರುಷ ಆಡಳಿತ ಇರುತ್ತದೆಂಬ ವಿಚಾರದಲ್ಲಿ ಸತ್ಯವಾಗಿರುತ್ತದೆ. Cairdನು ಹೀಗೆ ಬರೆದನು,

> ನಾವು ಹೊಸ ಒಡಂಬಡಿಕೆಯ ಕಡೆಗೆ ತಿರುಗಿಕೊಳ್ಳುವಾಗ, ಯೋಹಾನನನ್ನು ಹೊರತು ಪಡಿಸಿ ಬೇರೆ ಯಾವದೆ ಲೇಖಕನಲ್ಲಿ ಒಂದು ಸಹಸ್ರವರ್ಷದ ನಂಬಿಕೆಯು ಇತ್ತದೆಂಬುದರ ಸುಳಿವು ನಮಗೆ ಸಿಕ್ಕುವದಿಲ್ಲ. ಖಂಡಿತವಾಗಿಯೂ, ಪೌಲನು ಕ್ರಿಸ್ತನ ವೈರಿಗಳೆಲ್ಲಾ ಆತನಿಗೆ ಅಧೀನವಾಗುವ ವರೆಗೂ ಆತನ ಆಳ್ವಿಕೆಯು ಮುಂದುವರೆಯುತ್ತದೆಂಬ ಕುರಿತು ಮಾತಾಡುತ್ತಾನೆ, ಆದರೆ ಇದು ಆತನು ದೇವರ ಬಲಗಡೆಯಲ್ಲಿ ಏರಿ ಹೋಗಿ ಆಸೀನನಾಗುವ ವೇಳೆ ಆರಂಭಗೊಳ್ಳುವ ಆಳ್ವಿಕೆಯಾಗಿರುತ್ತದೆ [1 ಕೊರಿಂಥ 15:24-28; ನೋಡಿರಿ ಮತ್ತಾಯ 13:41] ...[14]

ಕೆಲವರು ಈ ಅಧ್ಯಾಯದ ವಿಷಯದಲ್ಲಿ ಅನುಸರಿಸುವ ಅಕ್ಷರಶಃವಾದ ಅರ್ಥೈಸುವ ದಾರಿಯ ಕುರಿತು, Summersನು ಹೀಗೆ ಹೇಳುತ್ತಾನೆ,

> ಪ್ರಕಟನೆ 20ನೇ ಅಧ್ಯಾಯದ 4, 5, ಮತ್ತು 6 ವಚನಗಳು ಹೊರಗಿಡಲ್ಪಟ್ಟಿದ್ದಲ್ಲಿ, ಕ್ರಿಸ್ತನು ಭೂಮಿಯ ಮೇಲೆ ಅಕ್ಷರಶಃ ಸಾವಿರ ವರುಷ ಆಳ್ವಿಕೆ ಮಾಡುವನೆಂಬ - ಆತನು ಯೆರೂಸಲೇಮಿನಲ್ಲಿ ಒಂದು ತಾತ್ಕಾಲಿಕ ಸಿಂಹಾಸನವನ್ನು ಸ್ಥಾಪಿಸಿ ಭೂಲೋಕದ ಅರಸನಾಗಿ ಒಂದು ಸಹಸ್ರವರ್ಷಾಡಳಿತವನ್ನು ಆರಂಭಗೊಳಿಸುವನು ಎಂಬುದರ - ಕುರಿತು ಯಾರೊಬ್ಬರೂ ಕನಸು ಕಂಡಿರುವದಕ್ಕೆ ಸಾಧ್ಯವಿರುತ್ತಿರಲಿಲ್ಲ. ಹೀಗಿದ್ದಾಗ್ಯೂ ಈ ಅತ್ಯಂಥ ಸಾಂಕೇತಿಕವಾಗಿರುವ ವಚನಗಳ ಅಪಾಯಕ್ಕೊಳಪಟ್ಟ ಬುನಾದಿಯ ಮೇಲೆಯೇ

ಸಭಾಶಾಸ್ತ್ರ, ದೈವಶಾಸ್ತ್ರ, ಹಾಗೂ ತತ್ವಜ್ಞಾನಗಳ ಇಡೀ ವ್ಯವಸ್ಥೆಯು ಕಟ್ಟಲ್ಪಟ್ಟಿರುತ್ತದೆ.[15]

2. ಸಹಸ್ರವರ್ಷಪೂರ್ವವಾದದ ಬಹಳಷ್ಟು ಸಿದ್ಧಾಂತಗಳು ಪ್ರಕಟನೆ 20ನೇ ಅಧ್ಯಾಯದಲ್ಲಿ ಸಿಕ್ಕುವದಿಲ್ಲ; ಅವುಗಳನ್ನು ಸೇರಿಸಿ ಓದಲಾಗಿರುತ್ತದೆ. ಈ ಅಧ್ಯಾಯವು ಒಂದು ಸಾವಿರ ವರುಷಗಳ ಆಳ್ವಿಕೆಯ ಕುರಿತು ಹೇಳಬೇಕಾಗಿತ್ತಾದರೂ, ಸಹಸ್ರವರ್ಷಪೂರ್ವವಾದಿಗಳು ಪ್ರತಿಪಾದಿಸುವ ರೀತಿಯಲ್ಲಿ, ಅದರ ಬಹುಪಾಲು ವಿವರಗಳು ಗೈರಾಗಿರುವದು ಎದ್ದು ಕಾಣುವಂತಿದೆ.

ಉದಾಹರಣೆಗೆ, *ಭೂಮಿಯ ಮೇಲೆ* ಕ್ರಿಸ್ತನ ಆಳ್ವಿಕೆಯ ಕುರಿತು ಯಾವದೇ ಪ್ರಸ್ತಾಪವಿರುವದಿಲ್ಲ. ವಾಕ್ಯಭಾಗವನ್ನು ಜಾಗರೂಕವಾಗಿ ಓದುವಾಗ ಇದು ಸತ್ಯವೆಂಬುದನ್ನು ತೋರಿಸಿ ಕೊಡುತ್ತದೆ. ಪ್ರಕಟನೆ 20ನೇ ಅಧ್ಯಾಯದಲ್ಲಿನ ಸಾವಿರ ವರುಷಗಳ ಆಳ್ವಿಕೆಯ ವಿಷಯವಾಗಿ, William Hendriksenನು ಇದು ಎಲ್ಲಿ ಸಂಭವಿಸುತ್ತದೆ? ಎಂದು ಕೇಳುತ್ತಾನೆ ಮತ್ತು ಬಳಿಕ ಆತನೇ ಉತ್ತರವನ್ನು ಕೊಡುತ್ತಾನೆ:

> (ಅ) ಸಿಂಹಾಸನಗಳು ಎಲ್ಲಿವೆಯೋ ಅಲ್ಲಿಯೇ, ಯಾಕೆಂದರೆ ನಾವು ಹೀಗೆ ಓದುತ್ತೇವೆ: "ತರುವಾಯ ಸಿಂಹಾಸನಗಳನ್ನು ಕಂಡೆನು. ಅವುಗಳ ಮೇಲೆ ಜನರು ಕೂತಿದ್ದರು." ಈಗ, ಇಡೀ ಪ್ರಕಟನೆ ಪುಸ್ತಕದ ಪ್ರಕಾರ ಕ್ರಿಸ್ತನ ಸಿಂಹಾಸನ ಮತ್ತು ಆತನ ಜನರ ಸಿಂಹಾಸನ ಎಂದೆಂದೂ ಪರಲೋಕದಲ್ಲಿರುತ್ತದೆ ...
>
> (ಆ) ದೇಹದಿಂದ ಬೇರ್ಪಟ್ಟಿರುವ ರಕ್ತಸಾಕ್ಷಿಗಳ ಆತ್ಮಗಳು ಎಲ್ಲಿವೆಯೋ ಅಲ್ಲಿಯೇ, ಯಾಕೆಂದರೆ ನಾವು ಹೀಗೆ ಓದುತ್ತೇವೆ: "ಇದಲ್ಲದೆ ಯೇಸುವಿನ ವಿಷಯವಾದ ಸಾಕ್ಷಿಯ ನಿಮಿತ್ತವಾಗಿಯೂ ದೇವರ ವಾಕ್ಯದ ನಿಮಿತ್ತವಾಗಿಯೂ ತಲೆಹೊಯಿಸಿಕೊಂಡವರ *ಆತ್ಮಗಳನ್ನೂ* ... ಕಂಡೆನು." ಯೋಹಾನನು ಆತ್ಮಗಳನ್ನು ನೋಡುತ್ತಾನೆಯೇ ಹೊರತು ದೇಹಗಳನ್ನಲ್ಲ. ಆತನು ದೇಹಗಳಿಲ್ಲದ ಆತ್ಮಗಳ ಬಗ್ಗೆ ಯೋಚಿಸುತ್ತಿದ್ದಾನೆ, ಯಾಕೆಂದರೆ ನಾವು ಹೀಗೆ ಓದುತ್ತೇವೆ: "ನಿಮಿತ್ತವಾಗಿಯೂ ತಲೆಹೊಯಿಸಿಕೊಂಡವರ." ಆತ್ಮ ಹಾಗೂ ದೇಹದ ನಡುವಿನ ವ್ಯತ್ಯಾಸವನ್ನು ಸಹ ಒತ್ತಿ ಹೇಳಲಾಗಿದೆ: "ತಲೆಹೊಯಿಸಿಕೊಂಡವರ ಆತ್ಮಗಳನ್ನೂ ..."
>
> (ಇ) ಯೇಸುವು ಎಲ್ಲಿ ವಾಸಿಸುತ್ತಾನೋ ಅಲ್ಲಿಯೇ, ಯಾಕೆಂದರೆ ನಾವು ಹೀಗೆ ಓದುತ್ತೇವೆ: "ಅವರು ಜೀವಿತರಾಗಿ ಎದ್ದು ಸಾವಿರ ವರುಷ *ಕ್ರಿಸ್ತನೊಂದಿಗೆ* ಆಳಿದರು ..." ಅದಕ್ಕನುಸಾರವಾಗಿ, ಈಗ ಇರುವ ಪ್ರಶ್ನೆಯು ಏನೆಂದರೆ: ಅಂತ್ಯಕಾಲಿಕ ಪುಸ್ತಕದ ಪ್ರಕಾರ, ಉನ್ನತಕ್ಕೇರಿಸಲ್ಪಟ್ಟಿರುವ ಮಧ್ಯಸ್ಥನು ಎಲ್ಲಿ ಆಳ್ವಿಕೆಯನ್ನು ಮಾಡುತ್ತಾನೆ? ಯೇಸುವು ಎಲ್ಲಿ ಜೀವಿಸುತ್ತಾನೆ? ಸ್ಪಷ್ಟವಾಗಿ, *ಪರಲೋಕದಲ್ಲಿಯೇ!* ಕುರಿಯಾದಾತನು ಸಿಂಹಾಸನದಲ್ಲಿ ಕೂತಿದ್ದಾತನ ಕೈಯಿಂದ ಸುರುಳಿಯನ್ನು ತೆಗೆದುಕೊಂಡವನಾಗಿ ಪ್ರತಿನಿಧಿಸಲ್ಪಟ್ಟಿರುವದು *ಪರಲೋಕ*ದಲ್ಲಿಯೇ ಆಗಿದೆ, ಪ್ರಕಟನೆ 5 ಪ್ರಕಟನೆ 12. ಕ್ರಿಸ್ತನು "ದೇವರ ಬಳಿಗೆ ಮತ್ತು ಆತನ ಸಿಂಹಾಸನದ ಬಳಿಗೆ ಎತ್ತಿಕೊಂಡು ಹೋಗಲ್ಪಟ್ಟನು ..." ಎಂದು ಸ್ಪಷ್ಟವಾಗಿ ತಿಳಿಸುತ್ತದೆ.[16]

"ಸಿಂಹಾಸನ" ಎಂಬ ಪದವು ಪ್ರಕಟನೆ ಪುಸ್ತಕದಲ್ಲಿ ನಾಲ್ವತ್ತೇಳು ಸಾರಿ ಕಾಣಿಸಿಕೊಳ್ಳುತ್ತದೆ; ಸೈತಾನನ ಹಾಗೂ ಮೃಗದ ಸಿಂಹಾಸನ ಕುರಿತು ಉಲ್ಲೇಖನಗಳನ್ನು ಮಾಡಿದ್ದನ್ನು ಹೊರತು ಪಡಿಸಿದರೆ, ಸಿಂಹಾಸನ ಅಥವಾ ಸಿಂಹಾಸನಗಳು ಯಾವಾಗಲೂ ಪರಲೋಕದಲ್ಲಿಯೇ ಇರುತ್ತವೆ.

ಪ್ರಕಟನೆ 20ನೇ ಅಧ್ಯಾಯದಲ್ಲಿ ಕಾಣದಿರುವ ಸಹಸ್ರವರ್ಷಪೂರ್ವವಾದದ ಸಿದ್ಧಾಂತಗಳ ಪಟ್ಟಿಯು ಹೆಚ್ಚು ಕಡಿಮೆ ಅಂತ್ಯವಿಲ್ಲದ್ದಾಗಿದೆ: ಅದರಲ್ಲಿ ಎರಡನೆಯ ಬರೋಣದ ಪ್ರಸ್ತಾಪವಿಲ್ಲ,

"ಎತ್ತಲ್ಪಡುವಿಕೆ" ಎಂದು ಕರೆಯಲ್ಪಡುವದೂ ಇರುವದಿಲ್ಲ, ದಾವೀದನ ಸಿಂಹಾಸನ, ಯೆರೂಸಲೇಮ್ ನಗರ, ಅಥವಾ ಶಾರೀರಿಕ ಯೆಹೂದ್ಯರ ಪ್ರಸ್ತಾಪವಾಗಲಿ ಇರುವದಿಲ್ಲ. James Efirdನು ಹೀಗೆ ಹೇಳಿದನು, "ಒಬ್ಬನು ಆ ವಿಚಾರಗಳನ್ನು ಈ ವಾಕ್ಯಭಾಗದಲ್ಲಿ ಕಂಡುಕೊಳ್ಳಲು ಇರುವ ಏಕೈಕ ದಾರಿಯೆಂದರೆ ಅವುಗಳಲ್ಲಿ ಅದರೊಳಗೆ ಆಮದು ಮಾಡಿಕೊಳ್ಳುವ ಮೂಲವೇ - ಮತ್ತು ವಾಕ್ಯವು ಮೂಲತಃ ಏನು ಹೇಳಿತು ಮತ್ತು ಯಾವ ಅರ್ಥವನ್ನು ಹೊಂದಿತ್ತೆಂಬುದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವ ಯಾವನಿಗೇ ಆಗಲಿ ಅದೊಂದು ಆಯ್ಕೆಯಾಗಿರುವದಿಲ್ಲ."[17]

ಸಾಕಷ್ಟು ಆಶ್ಚರ್ಯಕರವೆಂದರೆ, ಪ್ರಕಟನೆ 20ನೇ ಅಧ್ಯಾಯವು *ಕ್ರಿಸ್ತನ* ಆಳ್ವಿಕೆಯು ಎಷ್ಟೊಂದು ಕಾಲವಿರುತ್ತದೆಂಬುದನ್ನು ತಿಳಿಸುವದಿಲ್ಲ, "ಸಾವಿರ ವರುಷಗಳು" ಎಂಬುದನ್ನು ಅಕ್ಷರಶಃವಾಗಿ ಭಾವಿಸಿಕೊಂಡಾಗ್ಯೂ, "ರಕ್ತಸಾಕ್ಷಿಗಳು *ಆತನೊಂದಿಗೆ* ಸಾವಿರು ವರುಷ ಆಳಿದರು" ಎಂದಷ್ಟೇ ಹೇಳುತ್ತದೆ; ಕ್ರಿಸ್ತನು ಎಷ್ಟು ದೀರ್ಘವಾಗಿ ಆಳಿದನೆಂಬುದನ್ನು ಅದು ತಿಳಿಸುವದಿಲ್ಲ. ಅದೇ ರೀತಿಯಲ್ಲಿಯೇ, ಹಳೆಯ ಒಡಂಬಡಿಕೆಯಲ್ಲಿ ಹಲವಾರು ಅರಸರು ತಮ್ಮ ತಂದೆಗ*ಳೊಂದಿಗೆ* ಒಂದಿಷ್ಟು ಕಾಲದ ವರೆಗೆ ಆಳ್ವಿಕೆ ಮಾಡಿದರೆಂದು ಹೇಳಲಾಗುತ್ತದೆ, ಆದರೆ ಅವರ ತಂದೆಗಳು ಎಷ್ಟು ದೀರ್ಘವಾಗಿ ಆಳಿದರೆಂದು ಅಂಥ ಹೇಳಿಕೆಗಳು ತಿಳಿಸುವದಿಲ್ಲ. ಯೆಹೂದ ಹಾಗೂ ಇಸ್ರಾಯೇಲಿನ ಕಾಲಾನುಕ್ರಮದ ಇತಿಹಾಸವು ಅನೇಕ ಅರಸರ ಆಳ್ವಿಕೆಗಳು ಒಂದನ್ನೊಂದು ವ್ಯಾಪಿಸಿರುತ್ತವೆ. ಉದಾಹರಣೆಗೆ, ಅಹಾಜನು ಆತನ ತಂದೆಯಾದ ಯೋತಾಮನ ಸಂಗಡ ಸುಮಾರು ಹನ್ನೆರಡು ವರ್ಷಗಳ ಕಾಲ ಆಳ್ವಿಕೆ ಮಾಡಿದನು, ಮತ್ತು ಮನಾಸ್ಸೆಯು ಬಹುಶಃ ಹಿಜ್ಕೀಯನ ಸಂಗಡ ಎಂಟು ವರ್ಷಗಳ ಕಾಲ ಆಳ್ವಿಕೆ ಮಾಡಿದನು. ಅಂಥ ಹೇಳಿಕೆಗಳು ಎಷ್ಟು ಕಾಲದ ವರೆಗೆ ಅವರು ಜೊತೆ ಆಳ್ವಿಕೆಗಾರರಾಗಿದ್ದರೆಂಬುದನ್ನು ತಿಳಿಸುತ್ತವೆ, ಆದರೆ ಪ್ರತಿಯೊಬ್ಬನು ಎಷ್ಟು ಕಾಲ ಆಳ್ವಿಕೆ ಮಾಡಿದನೆಂಬುದನ್ನು ತಿಳಿಸುವದಿಲ್ಲ.[18]

3. ಸಹಸ್ರವರ್ಷಪೂರ್ವಾದದ ಸಿದ್ಧಾಂತಗಳು ಪ್ರಕಟನೆ 20ನೇ ಅಧ್ಯಾಯದಲ್ಲಿರುವ ರೂಪಕೋಕ್ತಿಗಳ ಮೇಲೆ ಆಧಾರವಾಗಿದ್ದು ಶಾಸ್ತ್ರದೊಳಗೆ ಬೇರೊಂದು ಕಡೆಯಲ್ಲಿರುವ ಸರಳವಾದ ವಾಕ್ಯಭಾಗಗಳಿಗೆ ತದ್ವಿರುದ್ಧವಾಗಿರುತ್ತವೆ. Packನು ತೋರಿಸಿ ಕೊಡುವದೇನೆಂದರೆ ಕಾಲಹಂಚಿಕೆಯನ್ನು ಮಾಡುವಿಕೆಯಲ್ಲಿ "ಒಂದು ವಿಮೋಚನೆಯ ಯೋಜನೆಯನ್ನು ಮತ್ತು ದೇವರ ಮೂಲ ಉದ್ದೇಶವನ್ನು ವ್ಯಾಪಕವಾಗಿ ಮರುರಚನೆ ಮಾಡುವದು"[19] ಸೇರಿರುತ್ತದೆ. ಹಾಗಿದ್ದರೂ, ಪ್ರಸ್ತುತವಾಗಿ, ಪ್ರಕಟನೆ 20ನೇ ಅಧ್ಯಾಯಕ್ಕೆ ಸಂಬಂಧಪಟ್ಟ ತದ್ವಿರುದ್ಧತೆಗಳ ಬಗ್ಗೆ ಮಾತ್ರವೇ ಕಳಕಳಿ ಹೊಂದಿದ್ದೇವೆ.

ಸಹಸ್ರವರ್ಷಪೂರ್ವವಾದಿಗಳು ಹೇಳಿಕೊಳ್ಳುವದೇನೆಂದರೆ ಪ್ರಕಟನೆ 20ನೇ ಅಧ್ಯಾಯವು ಕ್ರಿಸ್ತನ ಆಳ್ವಿಕೆಯು ಭವಿಷ್ಯದಲ್ಲಿನ ಒಂದ ಕಾಲದ ತನಕವೂ ಆರಂಭಗೊಳ್ಳುವದಿಲ್ಲ ಎಂದು ಕಲಿಸುತ್ತದೆ ಎಂಬದೆ, ಆದರೆ ಬೇರೆ ಕಡೆಗಳಲ್ಲಿರುವ ವಾಕ್ಯಭಾಗಗಳು ಕ್ರಿಸ್ತನು ತಂದೆಯ ಬಳಿಗೆ ಏರಿ ಹೋದಾಗ ಆತನ ಆಳ್ವಿಕೆಯು ಆರಂಭಗೊಂಡಿತೆಂದು ಕಲಿಸುತ್ತವೆ. ಅನೇಕ ಶಾಸ್ತ್ರಗಳು ಕ್ರಿಸ್ತನು ದಾವೀದನ ಸಿಂಹಾಸನದಲ್ಲಿ ಕೂತುಕೊಂಡಿದ್ದಾನೆಂಬುದರ ಕುರಿತು ಮಾತಾಡುತ್ತವೆ. ಅವುಗಳಲ್ಲೊಂದು ಎಂದರೆ ಅಪೊಸ್ತಲರ ಕೃತ್ಯಗಳು 2ನೇ ಅಧ್ಯಾಯದಲ್ಲಿ ಪೇತ್ರನ ಸಂದೇಶ. ಅಪೊಸ್ತಲನು ಅರಸನಾದ ದಾವೀದನ ಕುರಿತಾಗಿ ಹೀಗೆ ಹೇಳಿದನು,

> ಅವನು ಪ್ರವಾದಿಯಾಗಿದ್ದು - ನಿನ್ನ ಸಂತತಿಯವರೊಳಗೆ ಒಬ್ಬನನ್ನು ನಾನು ನಿನ್ನ ಸಿಂಹಾಸನದ ಮೇಲೆ ಕುಳ್ಳಿರಿಸುವೆನೆಂದು ತನಗೆ ದೇವರು ಆಣೆಯಿಟ್ಟು ಹೇಳಿದ್ದನ್ನು

> ಬಲ್ಲವನಾಗಿ ಮುಂದಾಗುವದನ್ನು ಕಂಡು ಕ್ರಿಸ್ತನ ಪುನರುತ್ಥಾನವನ್ನೇ ಕುರಿತು - ಆತನು ಪಾತಾಳದಲ್ಲಿ ಬಿಡಲ್ಪಡಲಿಲ್ಲವೆಂತಲೂ ಆತನ ಶರೀರವು ಕೊಳೆಯುವ ಅವಸ್ಥೆಯನ್ನನುಭವಿಸುವದಿಲ್ಲವೆಂತಲೂ ಹೇಳಿದನು. ಈ ಯೇಸುವನ್ನೇ ದೇವರು ಎಬ್ಬಿಸಿದನು; ಇದಕ್ಕೆ ನಾವೆಲ್ಲರು ಸಾಕ್ಷಿಗಳಾಗಿದ್ದೇವೆ. ಆತನು ದೇವರ ಬಲಗೈಯಿಂದ ಉನ್ನತಸ್ಥಾನಕ್ಕೆ ಏರಿಸಲ್ಪಟ್ಟು ವಾಗ್ದಾನವಾಗಿದ್ದ ಪವಿತ್ರಾತ್ಮವರವನ್ನು ತಂದೆಯಿಂದ ಹೊಂದಿ ನೀವು ನೋಡಿ ಕೇಳುವದನ್ನು ಸುರಿಸಿದ್ದಾನೆ. ದಾವೀದನು ಆಕಾಶಕ್ಕೆ ಏರಿಹೋಗಲಿಲ್ಲವಲ್ಲಾ. ತಾನೇ ಹೇಳುವ ಮಾತೇನಂದರೆ - ನಾನು ನಿನ್ನ ವಿರೋಧಿಗಳನ್ನು ನಿನ್ನ ಪಾದಗಳಿಗೆ ಪೀಠವಾಗ ಮಾಡುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು ಎಂದು ಕರ್ತನು ನನ್ನ ಒಡೆಯನಿಗೆ ನುಡಿದನು ಎಂಬದೇ. ಆದದರಿಂದ ನೀವು ಶಿಲುಬೆಗೆ ಹಾಕಿಸಿದ ಈ ಯೇಸುವನ್ನೇ ದೇವರು ಒಡೆಯನನ್ನಾಗಿಯೂ ಕ್ರಿಸ್ತನನ್ನಾಗಿಯೂ ಮಾಡಿದ್ದಾನೆಂಬದು ಇಸ್ರಾಯೇಲ್ ಕುಲದವರಿಗೆಲ್ಲಾ ನಿಸ್ಸಂದೇಹವಾಗಿ ತಿಳಿದಿರಲಿ ಎಂದು ಹೇಳಿದನು (ಅಪೊಸ್ತಲರ ಕೃತ್ಯಗಳು 2:30-36).

ಯೇಸುವಿನ ಪುನರುತ್ಥಾನ ಹಾಗೂ ಆತನು ಪರಲೋಕಕ್ಕೆ ಆರೋಹಣಗೊಳ್ಳುವಿಕೆಯು "ಒಬ್ಬನನ್ನು ನಾನು ನಿನ್ನ [ದಾವೀದನ] ಸಿಂಹಾಸನದ ಮೇಲೆ ಕುಳ್ಳಿರಿಸುವೆನು" ಎಂಬ ವಾಗ್ದಾನವು ನೆರವೇರಿಸಿತು ಎಂಬುದನ್ನು ಒಬ್ಬನು ಗಮನಿಸತಕ್ಕದ್ದು. ಯೇಸುವು "ದೇವರ ಬಲಗೈಯಿಂದ ಉನ್ನತಸ್ಥಾನಕ್ಕೆ ಏರಿಸಲ್ಪಟ್ಟಿದ್ದನು" ಮತ್ತು ಆತನ ವೈರಿಗಳು ಅವನಿಗೆ ಪಾದಪೀಠವಾಗಿ ಮಾಡಲ್ಪಡುವ ತನಕ ಆತನೊಂದಿಗೆ ಪರಲೋಕದಲ್ಲಿ ಆಳ್ವಿಕೆ ಮಾಡುತ್ತಿದ್ದಾನೆ.

ಪೌಲನು ಕ್ರಿಸ್ತನ ಆಳ್ವಿಕೆಯ ಈ ಅಂಶದ ಕುರಿತಾಗಿ 1 ಕೊರಿಂಥ 15ರಲ್ಲಿ ಗಮನ ಕೊಡುತ್ತಾನೆ:

> ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು. ಆದರೆ ಪ್ರತಿಯೊಬ್ಬನು ತನ್ನ ತನ್ನ ತರಗತಿಯಲ್ಲಿರುವನು. ಕ್ರಿಸ್ತನು ಪ್ರಥಮಫಲ; ತರುವಾಯ ಕ್ರಿಸ್ತನ ಪ್ರತ್ಯಕ್ಷತೆಯಲ್ಲಿ ಆತನವರು ಎದ್ದುಬರುವರು. ಆಮೇಲೆ ಆತನು ಬೇರೆ ಎಲ್ಲಾ ಧೊರೆತನವನ್ನೂ ಎಲ್ಲಾ ಅಧಿಕಾರವನ್ನೂ ಬಲವನ್ನೂ ನಿವೃತ್ತಿಮಾಡಿ ತಂದೆಯಾಗಿರುವ ದೇವರಿಗೆ ರಾಜ್ಯವನ್ನು ಒಪ್ಪಿಸಿಕೊಡುವಾಗ ಸಮಾಪ್ತಿ. ಯಾಕಂದರೆ ತಾನು ಎಲ್ಲಾ ವಿರೋಧಿಗಳನ್ನು ತನ್ನ ಪಾದಗಳ ಕೆಳಗೆ ಹಾಕಿಕೊಳ್ಳುವ ತನಕ ರಾಜ್ಯವನ್ನಾಳುವದು ಅವಶ್ಯ. ಮರಣವು ಕಡೇ ಶತ್ರುವಾಗಿ ನಿವೃತ್ತಿಯಾಗುವದು. ದೇವರು ಸಮಸ್ತವನ್ನೂ ಆತನ ಪಾದಗಳ ಕೆಳಗೆ ಹಾಕಿ ಆತನಿಗೆ ಅಧೀನಮಾಡಿದ್ದಾನೆಂಬದಾಗಿ ಹೇಳಿಯದೆಯಲ್ಲಾ. ಸಮಸ್ತವೂ ಆತನಿಗೆ ಅಧೀನಮಾಡಲ್ಪಟ್ಟಿದೆ ಎಂದು ಹೇಳುವಾಗ ಸಮಸ್ತವನ್ನು ಅಧೀನಮಾಡಿ ಕೊಟ್ಟಾತನು ಅದರಲ್ಲಿ ಸೇರಲಿಲ್ಲವೆಂಬದು ಸ್ಪಷ್ಟವಾಗಿದೆ. ಸಮಸ್ತವೂ ಆತನಿಗೆ ಅಧೀನವಾದ ಮೇಲೆ ಮಗನು ಸಮಸ್ತವನ್ನೂ ತನಗೆ ಅಧೀನಮಾಡಿಕೊಟ್ಟಾತನಿಗೆ ತಾನೇ ಅಧೀನನಾಗುವನು; ಹೀಗೆ ದೇವರು ಸಮಸ್ತರಲ್ಲಿಯೂ ಸಮಸ್ತವೂ ಆಗುವನು (1 ಕೊರಿಂಥ 15:22-28).

ದೇವರು ಈಗಾಗಲೇ ಕ್ರಿಸ್ತನಿಗೆ "ಸಮಸ್ತವನ್ನು ಅಧೀನಮಾಡಿದ್ದಾನೆ"; ಕ್ರಿಸ್ತನು ಈಗ ಸದ್ಯ ಪರಲೋಕದಲ್ಲಿ ಆಳ್ವಿಕೆಯನ್ನು ಮಾಡುತ್ತಿದ್ದಾನೆ. 1 ಕೊರಿಂಥ 15:25ರಲ್ಲಿ "ರಾಜ್ಯವನ್ನಾಳುವದು" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದ βασιλεύειν (*basileuein,* ಇದು βασιλεύω, *basileuō* ಎಂಬದರಿಂದ ಬಂದದ್ದು) ಎಂಬುದು, ವರ್ತಮಾನಕಾಲ

ಧಾತ್ವರ್ಥವಾಚಿಯಲ್ಲಿರುತ್ತದೆ. ವರ್ತಮಾನಕಾಲ ರೂಪವು ಮುಂದುವರೆದಿರುವಂಥ ಕ್ರಿಯೆಯನ್ನು ಸೂಚಿಸುತ್ತದೆ. ವಚನವನ್ನು ಹೀಗೆ ಅನುವಾದಿಸಬಹುದಾಗಿದೆ, "ಆತನು ತನ್ನ ವೈರಿಗಳು ತನಗೆ ಪಾದಪೀಠವಾಗಿ ಮಾಡಲ್ಪಡುವ ತನಕ ಆಳ್ವಿಕೆಯನ್ನು *ಮುಂದುವರೆಸಬೇಕು*" (ಒತ್ತಿ ಹೇಳಿದ್ದು ನನ್ನದು). ಸೋಲಿಸಲ್ಪಡಲಿರುವ ಕಡೇ ವೈರಿಯು ಮರಣವೇ ಆಗಿರುವದು ಎಂಬುದನ್ನು 26ನೇ ವಚನವು ತಿಳಿಸುತ್ತದೆ.

ಪ್ರಕಟನೆ ಪುಸ್ತಕವು ಸಹ ಕ್ರಿಸ್ತನು ಈಗ ಸದ್ಯ ಆಳ್ವಿಕೆ ಮಾಡುತ್ತಿದ್ದಾನೆಂಬುದನ್ನು ಸ್ಪಷ್ಟಗೊಳಿಸುತ್ತದೆ. ಆತನು *ಈಗಾಗಲೇ* ರಾಜಾಧಿರಾಜನು ಮತ್ತು ಕರ್ತರ ಕರ್ತನು ಆಗಿದ್ದಾನೆ (17:14; 19:16). ಯೇಸುವು ಶ್ರಮೆಯನ್ನು ಅನುಭವಿಸಿದ ಬಳಿಕ, ತನ್ನ ತಂದೆಯೊಂದಿಗೆ ಸಿಂಹಾಸನದಲ್ಲಿ ಕೂತುಕೊಳ್ಳಲು ಹೋದನು ಎಂಬುದನ್ನು ಕಲಿಸುವಂಥ ಬೇರೆ ವಾಕ್ಯಭಾಗಗಳನ್ನು ಸಹ ಉಲ್ಲೇಖಿಸಬಹುದಾಗಿದೆ (ನೋಡಿರಿ ಇಬ್ರಿಯ 12:2).

ಕ್ರಿಸ್ತನ ಆಳ್ವಿಕೆಯೊಂದಿಗೆ ಅನಿವಾರ್ಯವಾಗಿ ಜೋಡಿಸಲ್ಪಟ್ಟಿರುವದೆಂದರೆ ಆತನ ರಾಜ್ಯವೇ. ನಿಯಮದ ಪ್ರಕಾರ, ಸಹಸ್ರವರ್ಷಪೂರ್ವವಾದಿಗಳು ಕಲಿಸುವದೇನೆಂದರೆ ಭವಿಷ್ಯದಲ್ಲಿ ಒಂದು ದಿನದ ತನಕವೂ ಕ್ರಿಸ್ತನು ತನ್ನ *ರಾಜ್ಯದ* ಮೇಲೆ ಆಳ್ವಿಕೆ ಮಾಡುವದಿಲ್ಲ ಎಂಬದೆ. ಹೇಗೂ, ಕ್ರಿಸ್ತನು ಈಗ ಸದ್ಯ ತನ್ನ ರಾಜ್ಯದ ಮೇಲೆ ಆಳ್ವಿಕೆ ಮಾಡುತ್ತಿದ್ದಾನೆಂದು ಬೈಬಲಿನಲ್ಲಿರುವ ಸರಳವಾದ ವಾಕ್ಯಭಾಗಗಳು ತಿಳಿಸುತ್ತವೆ, ಅದು ಕ್ರಿಸ್ತನ ಮರಣ, ಹೂಣಲ್ಪಡುವಿಕೆ, ಪುನರುತ್ಥಾನ, ಮತ್ತು ಪರಲೋಕಾರೋಹಣಗಳ ನಂತರದಲ್ಲಾದ ಪ್ರಥಮ ಪಂಚಾಶತ್ತಮ ದಿನದಂದು ಆರಂಭಗೊಂಡಿತ್ತು. ಕೆಲವು ಸಹಸ್ರವರ್ಷಪೂರ್ವವಾದಿಗಳಿಗೆ ಕ್ರಿಸ್ತನ ಈಗಿನ ಆಳ್ವಿಕೆ ಹಾಗೂ ಆತನ ರಾಜ್ಯವು ಈಗ ಸದ್ಯ ಅಸ್ತಿತ್ವದಲ್ಲಿರುತ್ತದೆಂಬ ವಾಸ್ತವಾಂಶದ ಕುರಿತಾದ ಬೈಬಲಿನ ಉಪದೇಶದ ಅರಿವು ಇರುತ್ತದೆ. ಆದದರಿಂದ, ಅವರು "*ಒಂದು ಅರ್ಥದಲ್ಲಿ*, ಯೇಸುವು ಈಗ ಆಳ್ವಿಕೆ ಮಾಡುತ್ತಿದ್ದಾನೆ" ಎಂದು ಹೇಳುತ್ತಾರೆ. ಅವರು ಈಗಿನ "ರಾಜ್ಯ" ಮತ್ತು ಸಹಸ್ರವರ್ಷದ "ರಾಜ್ಯ" ನಡುವೆ ವ್ಯತ್ಯಾಸವನ್ನು ಮಾಡುತ್ತಾರೆ. ಅಂತಹ ವ್ಯತ್ಯಾಸಗಳು ಮನುಷ್ಯನಿರ್ಮಿತ ಮತ್ತು ಶಾಸ್ತ್ರಗಳಲ್ಲಿ ಯಾವದೇ ಆಧಾರಗಳನ್ನು ಹೊಂದಿರುವದಿಲ್ಲ.

ಸ್ನಾನಿಕನಾದ ಯೋಹಾನನು ಮತ್ತು ಯೇಸುವು ರಾಜ್ಯವು "ಸಮೀಪವಾಯಿತು" ಎಂದು ಬೋಧಿಸಿದರು (ಮತ್ತಾಯ 3:2; 4:17). ಆತನ ಭೂಲೋಕದ ಸೇವೆಯ ವೇಳೆಯಲ್ಲಿ, ಯೇಸುವು ತನ್ನ ಶಿಷ್ಯರಿಗೆ ಅವರು ತಮ್ಮ ಜೀವಿತಕಾಲದಲ್ಲಿ "ದೇವರ ರಾಜ್ಯವು ಪ್ರಬಲವಾಗಿ ಬಂದಿರುವದನ್ನು ನೋಡುವರು" ಎಂದು ಹೇಳಿದನು (ಮಾರ್ಕ 9:1). ಆತನ ಪರಲೋಕಾರೋಹಣಗೊಳ್ಳುವದಕ್ಕೆ ಸ್ವಲ್ಪ ಮುಂಚೆ, ಪವಿತ್ರಾತ್ಮನು ಬಂದಾಗ ಅವರು ಶಕ್ತಿಯನ್ನು ಪಡೆದುಕೊಳ್ಳುವರೆಂದು ಹೇಳಿದನು (ಅಪೊಸ್ತಲರ ಕೃತ್ಯಗಳು 1:6-8). ಪವಿತ್ರಾತ್ಮನು ಪಂಚಾಶತ್ತಮ ದಿನದಂದು ಬಂದನು (ಅಪೊಸ್ತಲರ ಕೃತ್ಯಗಳು 2:1-4), ಮತ್ತು ಹೀಗೆ ರಾಜ್ಯವು "ಪ್ರಬಲವಾಗಿ" ಬಂದಿತ್ತು. ಆಗ ಪೇತ್ರನು ದೇವರ ಬಲಗಡೆಯಲ್ಲಿ ಆಸೀನನಾಗಿ ಯೇಸುವು ತನ್ನ ಆಳ್ವಿಕೆಯನ್ನು ಆರಂಭಿಸಿದ್ದಾನೆಂದು ಸಾರುವದಕ್ಕೆ ಶಕ್ತನಾಗಿದ್ದನು. ಅನೇಕ ಲೇಖಕರು ಮಾದರಿ ಪ್ರಾರ್ಥನೆಯಲ್ಲಿನ ಮಾತುಗಳಾದ "ನಿನ್ನ ರಾಜ್ಯವು ಬರಲಿ" (ಮತ್ತಾಯ 6:10) ಎಂಬ ಮಾತುಗಳನ್ನು, ಈಗಲೂ ನಾವು ಮಾಡತಕ್ಕ ಪ್ರಾರ್ಥನೆಯೋ ಎಂಬಂತೆ ಉಲ್ಲೇಖಿಸುತ್ತಾರೆ - ಆದರೆ ಅಪೊಸ್ತಲರ ಕೃತ್ಯಗಳು 2ರಲ್ಲಿ ರಾಜ್ಯವು ಸ್ಥಾಪಿಸಲ್ಪಡುವ *ಮುನ್ನವೇ* ಭಾವಾತ್ಮಕತೆಯು ವ್ಯಕ್ತಪಡಿಸಲ್ಪಟ್ಟಿತ್ತು. ಯೇಸುವು ರಾಜ್ಯವು "ಸಮೀಪವಾಯಿತು" ಎಂದು ಸಾರುತ್ತಲಿದ್ದನು, ಮತ್ತು ಆ ವಾಗ್ದಾನದ ನೆರವೇರಿಕೆಗಾಗಿ ಪ್ರಾರ್ಥಿಸಬೇಕೆಂದು ತನ್ನ

ಶಿಷ್ಯರಿಗೆ ಸೂಚಿಸಿದನು. ಆ ವಾಗ್ದಾನವು ಪಂಚಾಶತ್ತಮದಂದು ನೆರವೇರಿಕೆ*ಯಾಗಿತ್ತು*, ಆಗ ಪೇತ್ರನು ಪ್ರಥಮ ಸುವಾರ್ತಾ ಸಂದೇಶವನ್ನು ಬೋಧಿಸಿದ ಬಳಿಕ ಮೂರು ಸಾವಿರ ಜನರು ದೀಕ್ಷಾಸ್ನಾನ ಮಾಡಿಸಿಕೊಂಡಿದ್ದರು.

ಪೌಲನು ಕೊಲೊಸ್ಸೆಯವರಿಗೆ ಹೇಳಿದ್ದೇನೆಂದರೆ ದೇವರು "ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು" (ಕೊಲೊಸ್ಸೆ 1:13). ಇಬ್ರಿಯರಿಗೆ ಪತ್ರಿಕೆಯ ಲೇಖಕನು ತನ್ನ ವಾಚಕರಿಗೆ ಹೀಗೆ ಹೇಳಿದನು, "ಆದಕಾರಣ ಯಾರೂ ಕದಲಿಸಲಾರದ ರಾಜ್ಯವನ್ನು ಹೊಂದುವವರಾಗಿರೋಣ" (ಇಬ್ರಿಯ 12:28). "ಹೊಂದುವವರಾದ" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು ವರ್ತಮಾನ ಕೃದಂತ ಆಗಿರುತ್ತದೆ, ಅದರರ್ಥವು ಅದನ್ನು "ಹೊಂದುತ್ತಿರುವ" ಎಂಬುದಾಗಿ ಸಹ ಅನುವಾದಿಸಬಹುದು ಎಂಬದೆ (ನೋಡಿರಿ KJV). ವರ್ತಮಾನ ಕೃದಂತವು ಪ್ರಮುಖ ಕ್ರಿಯಾಪದ ಕ್ರಿಯೆಯೊಂದಿಗೆ ಏಕಕಾಲದಲ್ಲಿ ನಡೆಯುವ ಕ್ರಿಯೆಯನ್ನು ಸೂಚಿಸುತ್ತದೆ - ಈ ಪ್ರಕರಣದಲ್ಲಿ, ಕ್ರಿಯಾಪದವು "ಕೃತಜ್ಞತೆಯುಳ್ಳವರಾಗಿರೋಣ" ಎಂಬ ಪದಗುಚ್ಛದಿಂದ ಅನುವಾದಿಸಲ್ಪಟ್ಟಿದೆ. ನಾವು ರಾಜ್ಯವನ್ನು ಹೊಂದುತ್ತಿರುವದರಿಂದ ಕೃತಜ್ಞತೆಯನ್ನು ತೋರಿಸಬೇಕು.

ಪ್ರಕಟನೆ ಪುಸ್ತಕವೇ ಸ್ವತಃ ರಾಜ್ಯವು ಈಗಾಗಲೇ ಅಸ್ತಿತ್ವದಲ್ಲಿದೆ ಎಂಬುದನ್ನು ತೋರಿಸುವ ಉಪದೇಶಗಳನ್ನೊಳಗೊಂಡಿದೆ: ಮೊದಲನೆಯ ಅಧ್ಯಾಯದಲ್ಲಿ, ಯೇಸುವು "ನಮ್ಮನ್ನು ರಾಜ್ಯವನ್ನಾಗಿ ಮಾಡಿದನು" ಎಂದು ಯೋಹಾನನು ಬರೆಯುತ್ತಾನೆ (1:6). ಅದೇ ಅಧ್ಯಾಯದಲ್ಲಿ, ಯೋಹಾನನು ತಾನು ವಾಚಕರೊಂದಿಗೆ "ಯೇಸುವಿನ ನಿಮಿತ್ತ *ಹಿಂಸೆಯಲ್ಲಿಯೂ ರಾಜ್ಯದಲ್ಲಿಯೂ* ತಾಳ್ಮೆಯಲ್ಲಿಯೂ ನಿಮ್ಮೊಂದಿಗೆ ಪಾಲುಗಾರನೂ ಆಗಿರುವೆನು" ಎಂದು ಹೇಳುತ್ತಾನೆ (1:9; ಒತ್ತಿ ಹೇಳಿದ್ದು ನನ್ನದು). ಹಿಂಸೆ ಹಾಗೂ ತಾಳ್ಮೆಗಳು ಭವಿಷ್ಯದೊಳಗೆ ಸಾವಿರಾರು ವರ್ಷಗಳ ನಂತರದಲ್ಲಿ ಇರುವಂಥವುಗಳಾಗಿರಲಿಲ್ಲ; ಅದೇ ರೀತಿ ರಾಜ್ಯವೂ ಆಗಿರಲಿಲ್ಲ. ನಾವು ರಾಜ್ಯವು ಇರುತ್ತದೆಂದು ಮಾತಾಡುವಾಗ, ನಾವು ಸಭೆಯನ್ನು ಕುರಿತೇ ಮಾತಾಡುತ್ತೇವೆ. "ರಾಜ್ಯ" ಮತ್ತು "ಸಭೆ" ಎಂಬ ಪದಗಳು ಮತ್ತಾಯ 16:18, 19 ಮತ್ತು ಇತರ ವಾಕ್ಯಭಾಗಗಳಲ್ಲಿ ಪರ್ಯಾಯವಾಗಿ ಬಳಸಲ್ಪಟ್ಟಿವೆ. "ರಾಜ್ಯ" ಎಂಬ ಪದವು ಕರ್ತನು ಆಳ್ವಿಕೆ ಮಾಡುವಂಥ ಮಂಡಲವನ್ನು ಸೂಚಿಸುತ್ತದಷ್ಟೇ. ಈ ಮಂಡಲದ ವಿಶೇಷಯವಾಗಿ ಭೂಮಿಯ ಮೇಲೆ ಕಂಡುಬರುವಿಕೆಯೆಂದರೆ ಅದು ಸಭೆಯೇ; ಅದರ ಪರಲೋಕದ ತೋರ್ಪಡುವಿಕೆಯೆಂದರೆ ಸ್ವತಃ ಪರಲೋಕವೇ ಆಗಿದೆ. ಒಂದು ಅರ್ಥದಲ್ಲಿ ನಾವು ಭವಿಷ್ಯದಲ್ಲಿ ರಾಜ್ಯವನ್ನು ಪಡೆದುಕೊಳ್ಳಲಿದ್ದೇವೆ - ನಾವು ಕಟ್ಟಕಡೆಗೆ ಪರಲೋಕಕ್ಕೆ ಹೋಗುವ ವೇಳೆ - ಆದರೆ ಕ್ರಿಸ್ತನು ಈಗ *ಪ್ರಸ್ತುತವಾಗಿ* ತನ್ನ ಸಭೆಯೆಂಬ ರಾಜ್ಯದ ಮೇಲೆ ಆಳ್ವಿಕೆ ಮಾಡುತ್ತಿದ್ದಾನೆಂಬುದನ್ನು ಹೊಸ ಒಡಂಬಡಿಕೆಯು ಸ್ಪಷ್ಟವಾಗಿ ತಿಳಿಸುತ್ತದೆ.

ಪ್ರಕಟನೆ 20ನೇ ಅಧ್ಯಾಯದ ಮೇಲೆ ಆಧಾರವಾಗಿರುವ ಸಹಸ್ರವರ್ಷಪೂರ್ವವಾದದ ಇನ್ನೊಂದು ಸಿದ್ಧಾಂತವೆಂದರೆ ದೇಹದ ಪುನರುತ್ಥಾನಗಳು ಅನೇಕ ಸಾರಿ ಸಂಭವಿಸುತ್ತವೆ ಎಂಬುದೆ: "ಸಾವಿರ ವರುಷಗಳ" ಆರಂಭದ ವೇಳೆ ಒಳ್ಳೇವರ ಪುನರುತ್ಥಾನವಾಗುವದು ಮತ್ತು "ಸಾವಿರ ವರುಷಗಳ" ಅಂತ್ಯದ ವೇಳೆಯಲ್ಲಿ ಕೆಟ್ಟವರ ಪುನರುತ್ಥಾನವಾಗುವದು ಎಂಬ ವಿಚಾರ. ಅನೇಕ ಸಹಸ್ರವರ್ಷಪೂರ್ವವಾದಿಗಳು ಎರಡಕ್ಕಿಂತಲೂ *ಅಧಿಕ* ದೈಹಿಕ ಪುನರುತ್ಥಾನಗಳು ಸಂಭವಿಸುತ್ತವೆಂದು ಕಲಿಸುತ್ತಾರೆ: (1) "ಎತ್ತಲ್ಪಡುವಿಕೆ" ಸಂದರ್ಭದಲ್ಲಿ, ವಿಶ್ವಾಸಿಗಳ ಒಂದು ಪುನರುತ್ಥಾನ; (2) "ಸಂಕಟಕಾಲದ" ಏಳು ವರ್ಷಗಳ ಅಂತ್ಯದ ವೇಳೆಯಲ್ಲಿ, ಆ ಕಾಲಾವದಿಯ ವೇಳೆ ರಕ್ಷಣೆ ಹೊಂದಿ ಮರಣಿಸಿದವರ ಪುನರುತ್ಥಾನ - ಕೆಲವು ಸಾರಿ "ಹಕ್ಕಲಾಯುವ"

ಪುನರುತ್ಥಾನ ಎಂದು ಕರೆಯಲ್ಪಡುತ್ತದೆ; (3) ಸಹಸ್ರವರ್ಷದ ಆಳ್ವಿಕೆಯ ಅಂತ್ಯದ ವೇಳೆ, ಸಹಸ್ರವರ್ಷದ ಆಳ್ವಿಕೆಯ ವೇಳೇ ಪರಿವರ್ತನೆಗೊಂಡು ಮರಣಿಸಿದ್ದವರ ಪುನರುತ್ಥಾನ; (4) ಸೈತಾನನು ಬೆಂಕಿಯ ಕೆರೆಗೆ ಹಾಕಲ್ಪಟ್ಟ ಬಳಿಕ, ದುಷ್ಟರಿಗಾಗುವ ಪುನರುತ್ಥಾನ. ಕೆಲವರು ಈ ಪಟ್ಟಿಗೆ ಇನ್ನಷ್ಟು ಸೇರ್ಪಡೆಗೊಳಿಸುತ್ತಾರೆ; ಒಂದಿಷ್ಟು ಮಂದಿ ಒಟ್ಟು *ಏಳು* ಪುನರುತ್ಥಾನಗಳು ಸಂಭವಿಸುತ್ತವೆಂದು ಕಲಿಸುತ್ತಾರೆ. ಬಹು ಪುನರುತ್ಥಾನಗಳ ವಿಷಯವು ಬಹು ನ್ಯಾಯತೀರ್ಪುಗಳ ವಿಷಯದೊಂದಿಗೆ ಜೋಡಿಸಲ್ಪಡುತ್ತದೆ.

"ಪ್ರಥಮ ಪುನರುತ್ಥಾನ" (20:5, 6) ಎಂಬ ಪದಗುಚ್ಛದ ಕುರಿತಾಗಿ ಅನಂತರದಲ್ಲಿ ಚರ್ಚಿಸಲಾಗುವದು, ಆದರೆ ಈ ಕ್ಷಣದಲ್ಲಿ, ಶಾಸ್ತ್ರದಲ್ಲಿರುವ ಸ್ಪಷ್ಟವಾಗಿರುವ ವಾಕ್ಯಭಾಗಗಳು ಒಂದೇ ಒಂದು ದೈಹಿಕ ಪುನರುತ್ಥಾನದ ಕುರಿತಾಗಿ ಕಲಿಸುತ್ತವೆಂಬುದನ್ನು ಗಮನಕ್ಕೆ ತೆಗೆದುಕೊಳ್ಳುವದು ಪ್ರಾಮುಖ್ಯವಾಗಿರುತ್ತದೆ. ಯೇಸುವು ಹೀಗೆ ಹೇಳಿದನು, "ಸಮಾಧಿಗಳಲ್ಲಿರುವ*ವರೆಲ್ಲರು* ಆತನ ಧ್ವನಿಯನ್ನು ಕೇಳಿ ಎದ್ದು ಹೊರಗೆ ಬರುವ ಕಾಲ ಬರುತ್ತದೆ. ಒಳ್ಳೇದನ್ನು ಮಾಡಿದವರಿಗೆ ಜೀವಕ್ಕಾಗಿ ಪುನರುತ್ಥಾನವಾಗುವದು; ಕೆಟ್ಟದ್ದನ್ನು ನಡಿಸಿದವರಿಗೆ ತೀರ್ಪಿಗಾಗಿ ಪುನರುತ್ಥಾನವಾಗುವದು" (ಯೋಹಾನ 5:28, 29; ಒತ್ತಿ ಹೇಳಿದ್ದು ನನ್ನದು). ಪೌಲನು ಹೇಳಿದ್ದೇನೆಂದರೆ "ಇದಲ್ಲದೆ ನೀತಿವಂತರಿಗೂ ಅನೀತಿವಂತರಿಗೂ ಪುನರುತ್ಥಾನವಾಗುವದೆಂದು ... ನಿರೀಕ್ಷೆಯುಳ್ಳವನಾಗಿದ್ದೇನೆ" (ಅಪೊಸ್ತಲರ ಕೃತ್ಯಗಳು 24:15).

ಯೇಸು ಮತ್ತು ಪೌಲ ನುಡಿದ ಈ ಹೇಳಿಕೆಗಳು ಒಳ್ಳೇಯವರಿಗೂ ಕೆಟ್ಟವರಿಗೂ ಆಗುವ ಒಂದು ಸಾಮಾನ್ಯ ಪುನರುತ್ಥಾನದ ಕುರಿತಾಗಿ ಕಲಿಸುತ್ತವೆ. ಅವುಗಳು ನೀತಿವಂತರಿಗೆ ಪುನರುತ್ಥಾನವಾಗಿ ಸಾವಿರು ವರ್ಷಗಳಾದ ನಂತರ ಕೆಟ್ಟವರಿಗೆ ಪುನರುತ್ಥಾನವಾಗುವದೆಂಬುದಕ್ಕೆ ಅವಕಾಶವನ್ನು ಕೊಡುವದಿಲ್ಲ. ನಾವು "ಯೇಸುವಿನ ಗೋದಿಗಳ ನಡುವೆ ಹಣಜಿಗಳಿರುವ ಸಾಮ್ಯದ ವಾಸ್ತವಿಕತೆಯನ್ನು (ಮತ್ತಾಯ 13:24-30, 36-43), ಏನೆಂದರೆ, ಸುಗ್ಗಿಯ ಕಾಲದ ತನಕವೂ ಒಳ್ಳೇದು ಮತ್ತು ಕೆಟ್ಟದ್ದು ಜೊತೆಜೊತೆಯಾಗಿ ಬೆಳೆಯುವವು, ಆ ಸುಗ್ಗಿಯು ಲೋಕಾಂತ್ಯದ ವೇಳೆ ಸಂಭವಿಸುವದು ಎಂಬುದನ್ನು ಗಂಬೀರವಾಗಿ"[20] ತೆಗೆದುಕೊಳ್ಳುವ ಅಗತ್ಯವಿರುತ್ತದೆ. ಇನ್ನು ಅನೇಕ ವಾಕ್ಯಭಾಗಗಳು ಒಂದೇ ಸಾಮಾನ್ಯ ಪುನರುತ್ಥಾನವು ಸಂಭವಿಸುತ್ತದೆಂಬ ಬಗ್ಗೆ ಕಲಿಸುತ್ತವೆ (ನೋಡಿರಿ ದಾನಿಯೇಲ 12:2). ನಾವು ಕೇವಲ "ಸತ್ತವರಿಗಾಗುವ ಪುನರುತ್ಥಾನ" ಕುರಿತು ಮಾತಾಡುವ ವಾಕ್ಯಭಾಗಗಳನ್ನು ಸಹ ಯೋಚಿಸಬಹುದಾಗಿದೆ (ನೋಡಿರಿ ಮತ್ತಾಯ 22:31; ಅಪೊಸ್ತಲರ ಕೃತ್ಯಗಳು 24:21; ಇಬ್ರಿಯ 6:2).

ರೂಪಕ ಭಾಷೆಯ ಮೇಲೆ ಆಧಾರವಾಗಿರುವ *ಊಹೆಗಳು* ಶಾಸ್ತ್ರದ ಸರಳವಾದ ವಾಕ್ಯಭಾಗಗಳ ಉಪದೇಶಕ್ಕೆ ತದ್ವಿರುದ್ಧವಾಗಿರುವಾಗ, ಅವುಗಳನ್ನು ಸತ್ಯವೆಂದು ಅಂಗೀಕರಿಸಿಕೊಳ್ಳಬೇಕೋ? Daniel Russellನು ಈ ಪ್ರಶ್ನೆಯನ್ನು ಪರಿಗಣಿಸುತ್ತಾನೆ:

> ನೀವು ಯಾವದನ್ನು ನಿಮ್ಮ ಅಧಿಕಾರವಾಗಿ ತೆಗೆದುಕೊಳ್ಳುವಿರಿ, ಸುವಾರ್ತೆಗಳು ಹಾಗೂ ಪತ್ರಿಕೆಗಳಲ್ಲಿನ ಸ್ವಸ್ಥಚಿತ್ತದ ಹೇಳಿಕೆಗಳನ್ನೋ ಅಥವಾ ಪ್ರಕಟನೆ ಪುಸ್ತಕದ ಅತ್ಯಂಥ ಸಾಂಕೇತಿಕವಾದ ಹೇಳಿಕೆಗಳನ್ನೋ? ನಿಮ್ಮ ಮುಂದರೆ ವಿಶ್ವಾಸರ್ಹ [John Bach] McMaster ಅಥವಾ [James Ford] Rhodesರಂತಹ ಇತಿಹಾಸಕಾಲ ನಾಗರೀಕ ಯುದ್ಧದ ವಾಸ್ತವಾಂಶಗಳನ್ನು ಇಡುತ್ತಿದ್ದಾರೆಂದು ಊಹಿಸಿಕೊಳ್ಳಿರಿ. ಬಳಿಕ Stephen Vincent Benétನಂತ ಕವಿಯಂತವನು ಇತಿಹಾಸವನ್ನು ಬರೆಯುವನೆಂದು

ಊಹಿಸಿಕೊಳ್ಳಿರಿ, Benétನು *John Brown's Body* ಎಂಬ ಶಿರ್ಷಿಕೆಯಡಿಯಲ್ಲಿ ಬರೆದಿದ್ದಾನಷ್ಟೆ. ನೀವು ಯಾವುದನ್ನು ನಿಮ್ಮ ಪ್ರಮಾಣಕ ಅಧಿಕಾರವೆಂದು ಪರಿಗಣಿಸಿಕೊಳ್ಳುವಿರಿ? ನೀವು McMaster ಮತ್ತು Rhodes ಬರವಣಿಗೆಗಳು Benétನ ಬರವಣಿಗೆಯನ್ನು ಒಪ್ಪಿಕೊಳ್ಳುವಂತೆ ತಿರುಚುವಿರೋ? ನೀವು ವಿವೇಚಿಸುವ ಸಕಲ ಸಾಮರ್ಥ್ಯವನ್ನು ಕಳೆದುಕೊಂಡಿರುವ ಹೊರತು ಆ ಕೆಲಸವನ್ನು ಮಾಡಲಾರಿರಿ. ನೀವು ತಿರುಚಿದ್ದೇ ಆದಲ್ಲಿ, ನೀವು ಅದನ್ನು ಬೇರೊಂದು ರೀತಿಯಲ್ಲಿ ಮಾಡುವಿರಿ.[21]

ಸರಳವಾಗಿ ಹೇಳುವದಾದರೆ, ಸಾಂಕೇತಿಕ ವಾಕ್ಯಭಾಗಗಳನ್ನು ಕುರಿತು ಮನುಷ್ಯನು ಮಾಡಿರುವ ಅರ್ಥನಿರೂಪಣೆಗಳಿಗೆ ಒಳಪಡುವಂತೆ ಸ್ಪಷ್ಟವಾಗಿರುವ ವಾಕ್ಯಭಾಗಗಳನ್ನು ತಿರುಚುವದಕ್ಕೆ ಬದಲಾಗಿ, ಸ್ಪಷ್ಟವಾದ ವಾಕ್ಯಭಾಗಗಳೊಂದಿಗೆ ಒಳಪಡುವಂತೆ ಸಾಂಕೇತಿಕ ವಾಕ್ಯಭಾಗಗಳ ಅರ್ಥನಿರೂಪಣೆ ಮಾಡತಕ್ಕದ್ದು.

ಯೆಹೂದ್ಯರು ಒಂದು ಶಾರೀರಿಕ ಸಿಂಹಾಸನದಲ್ಲಿ ಕೂತುಕೊಳ್ಳುವ ಹಾಗೂ ಒಂದು ಶಾರೀರಿಕವಾದ ಯುದ್ಧವನ್ನು ಅವರ ಪರವಾಗಿ ಮಾಡುವಂಥ ಒಬ್ಬ ಶಾರೀರಿಕ ಅರಸನನ್ನು ಎದುರುನೋಡುತ್ತಿದ್ದರು. ಯೇಸುವು ಕೇವಲ ಆತ್ಮೀಕ ಅರಸನು "ಮಾತ್ರವೇ" ಆಗಿದ್ದನಾದ್ದರಿಂದ (ಯೋಹಾನ 18:36), ಅವರು ಆತನನ್ನು ತಿರಸ್ಕರಿಸಿದರು. ಯೇಸುವಿನ ದಿನದಲ್ಲಿದ್ದ ಯೆಹೂದ್ಯರ ರೀತಿಯಲ್ಲಿಯೇ, ಕೆಲವು ಸಹಸ್ರವರ್ಷಪೂರ್ವವಾದಿಗಳು ಆತ್ಮೀಕ ಆಶೀರ್ವಾದಗಳನ್ನು ಅಷ್ಟಾಗಿ ತೃಪ್ತಿಕರವೆಂದು ಎಣಿಸಿಕೊಳ್ಳುವದಿಲ್ಲ. ಒಂದು ಮಹಿಮಕರವಾದ ಪರಲೋಕದ ನಿರೀಕ್ಷೆಯು ಸಾಕಾಗುವದಿಲ್ಲ; ಅವರಿಗೆ ನವಚೈತನ್ಯದಿಂದ ಕೂಡಿದ ಭೂಮಿಯು ಇಷ್ಟವಿರುತ್ತದೆ. ಅವರಿಗೆ ಯೇಸುವಿನ ಶಿಲುಬೆಯು ಯೇಸುವಿನ ಕಿರೀಟದಷ್ಟು ರೋಮಾಂಚಕತೆಯನ್ನು ನೀಡುವದಿಲ್ಲ; ಹೃದಯದ ಸಮಾಧಾನಕ್ಕಿಂತಲೂ ಅವರಿಗೆ ಭೂಮಿಯ ಮೇಲಿನ ಸಾಮಾಧಾನವೇ ಆದ್ಯತೆಯಾಗಿರುತ್ತದೆ; ಮತ್ತು ಪಾಪಗಳ ನಿವಾರಣೆಯಾಗುವವೆಂಬ ವಾಗ್ದಾನವು ವ್ಯಾಧಿಯು ನಿರ್ಮೂಲನೆಯಾಗುವ ಸಂಭಾವ್ಯತೆಯ ಪಕ್ಕದಲ್ಲಿ ಮಂಕಾಗಿ ಹೋಗುತ್ತದೆ. Burton Coffmanನು ಹೀಗೆ ಬರೆದನು,

... ಒಂದು ಅತ್ಯದ್ಭುತವಾದ ಸೌಂದರ್ಯದಿಂದ ಕೂಡಿದ ಸುವರ್ಣಯುಗಕ್ಕಾಗಿ ಸಮಾಧಾನ ಮತ್ತು ಬೆಳಕು ತುಂಬಿರುವಂಥ ಆದರ್ಶರಾಜ್ಯವೊಂದು ಭೂಮಿಯ ಮೇಲೆ ಸ್ಥಾಪಿಸಲ್ಪಡುತ್ತದೆಂಬ ಕನಸಿನ ಮೇಲೆ "ನೇತಾಡುವವರ" ವಿಷಯದಲ್ಲಿ ನಮಗೆ ಅತ್ಯಂಥ ಕನಿಕರವಿರುತ್ತದೆ; ಆದರೆ, ಜನರು ಆ ರೀತಿಯಾಗಿ ಭ್ರಮನಿರಸಕ್ಕೊಳಗಾಗಿದ್ದರೆ, ಹೊಸ ಒಡಂಬಡಿಕೆಯಲ್ಲಿ ಅಂತಹ ಯಾವದೇ ವಾಗ್ದಾನಗಳಿರುವದಿಲ್ಲ ಎಂಬುದನ್ನು ಕೇಳಿಸಿಕೊಳ್ಳಲು ತಾಳ್ಮೆಯಿಂದಿರಲಿ. ನಾವು "ಬಹು ಸಂಕಟಗಳನ್ನು" ತಾಳಿ ದೇವರ ರಾಜ್ಯದೊಳಗೆ ಪ್ರವೇಶಿಸಬೇಕು (ಅಪೊಸ್ತಲರ ಕೃತ್ಯಗಳು 14:22); ನಾವು "ಕ್ರಿಸ್ತನಿಗೆ ಸಂಭವಿಸಿದ ಬಾಧೆಗಳಲ್ಲಿ ಪಾಲುಗಾರರಾಗಬೇಕು: (ರೋಮಾ 8:17); "ಸದ್ಭಕ್ತರಾಗಿ ಜೀವಿಸುವದಕ್ಕೆ ಮನಸ್ಸುಮಾಡುವವರೆಲ್ಲರೂ ಹಿಂಸೆಗೊಳಗಾಗುವರು" (2 ತಿಮೊಥೆ 3:12); ಕ್ರಿಸ್ತನನ್ನು ಹಿಂಬಾಲಿಸುವವರೆಲ್ಲರೂ ತಮ್ಮ "ಶಿಲುಬೆಯನ್ನು ದಿನಾಲೂ ಹೊತ್ತುಕೊಳ್ಳಬೇಕು" (ಲೂಕ 9:23) ...[22]

ಹೊಸ ಒಡಂಬಡಿಕೆಯು ಸಮಸ್ಯೆಗಳಿಲ್ಲದ ಲೋಕವೊಂದರ ವಾಗ್ದಾನ ಮಾಡುವದಿಲ್ಲ. ಬದಲಾಗಿ, ದೇವರು "*ಪರಲೋಕದಲ್ಲಿನ* ಸಕಲ *ಆತ್ಮೀಯ*ವರಗಳನ್ನು ನಮಗೆ ಕ್ರಿಸ್ತ ಯೇಸುವಿನಲ್ಲಿ ಅನುಗ್ರಹಿಸಿದ್ದಾನೆ" (ಎಫೆಸ 1:3; ಒತ್ತಿ ಹೇಳಿದ್ದು ನನ್ನದು). ಹಿಂಸೆಗೊಳಗಾಗಿದ್ದ ಕ್ರೈಸ್ತರಿಗೆ ಆದರಣೆಯನ್ನುಂಟು ಮಾಡಿದ್ದು ಕ್ರಿಸ್ತನು ಭೂಮಿಗೆ ಹಿಂದಿರುಗುವದರ ಕುರಿತಾದ

ಯಾವದೋ ಇಂದು ಊಹೆಯಲ್ಲ, ಆದರೆ ಬದಲಾಗಿ ಇಲ್ಲಿಂದ ಹೋಗಿಬಿಟ್ಟು "ಕ್ರಿಸ್ತನ ಜೊತೆಯಲ್ಲಿರಬೇಕೆಂಬ" ನಿರೀಕ್ಷೆಯೇ ಆಗಿತ್ತು. ಇದು "ಅದು ಉತ್ತಮೋತ್ತಮ" ಎಂದು ಪೌಲನು ಹೇಳಿದನು (ಫಿಲಿಪ್ಪಿ 1:23). ಅಮೆನ್! ದೇವರ ಆತ್ಮೀಕ ಆಶೀರ್ವಾದಗಳು ಮನುಷ್ಯರು ಕಲ್ಪನೆ ಮಾಡಿಕೊಳ್ಳುವ ಭೌತಿಕ ಆಶೀರ್ವಾದಗಳಿಗಿಂತಲೂ *ಅಪರಿಮಿತವಾಗಿ ಉತ್ತಮವಾಗಿವೆ.*

ಮಾನವ ಊಹೆಗಳ ಕುರಿತಾಗಿ ಈ ಹಂತದಲ್ಲಿ ಇಷ್ಟೇ ಸಾಕು ಎನ್ನಿಸುತ್ತದೆ. ಈಗ 4ರಿಂದ 6 ವಚನಗಳು ನಿಜವಾಗಿಯೂ ಏನನ್ನು ಹೇಳುತ್ತವೆಂಬುದನ್ನು ತಿಳಿಯಲು ಅವುಗಳನ್ನು ಪರೀಕ್ಷಿಸುವದು ಅತ್ಯಾವಶ್ಯಕವಾಗಿರುತ್ತದೆ. ಈ ವಿಭಾಗಕ್ಕಾಗಿ ಇರುವ ಹಳೆಯ ಒಡಂಬಡಿಕೆಯ ವಾಕ್ಯಭಾಗವು ದಾನಿಯೇಲ 7ನೇ ಅಧ್ಯಾಯವೆಂದು ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುತ್ತದೆ (ನೋಡಿರಿ ದಾನಿಯೇಲ 7:9, 22, 27). ಯಾವಾಗಲೂ ಇರುವ ಪ್ರಕಾರವೇ, ಯೋಹಾನನು ಪ್ರೇರಣೆಯ ಮೂಲಕವಾಗಿ ಈ ವಿಶಿಷ್ಟವಾದ ದೃಷ್ಟಿಕೋನವನ್ನು ಹೊಂದಿದ್ದನು.

**ವಚನ 4.** ಆದಿ ಕ್ರೈಸ್ತರನ್ನು ಕಾಡುತ್ತಿದ್ದ ಒಂದು ಜ್ವಲಂತ ಪ್ರಶ್ನೆಯೆಂದರೆ "ಸಾಯಬೇಕಾದರೂ ನಂಬಿಗಸ್ತರಾಗಿದ್ದ ವ್ಯಕ್ತಿಗಳಿಗೆ ಏನು ಸಂಭವಿರುತ್ತದೆ?" ಅವರು ಸತ್ತು ಜ್ಞಾಪಕದಲ್ಲಿಲ್ಲದವರಾಗಿ ಹೋಗಿದ್ದಾರೋ, ಅಥವಾ ಅವರ ತ್ಯಾಗವು ಸಾರ್ಥಕವಾದದ್ದಾಗಿತ್ತೋ? ಯೋಹಾನನ ಉತ್ತರವು ಇಲ್ಲಿದೆ:

> **ತರುವಾಯ ಸಿಂಹಾಸನಗಳನ್ನು ಕಂಡೆನು. ಅವುಗಳ ಮೇಲೆ ಜನರು ಕೂತಿದ್ದರು; ನ್ಯಾಯತೀರಿಸುವ ಅಧಿಕಾರವು ಅವರಿಗೆ ಕೊಡಲ್ಪಟ್ಟಿತು. ಇದಲ್ಲದೆ ಯೇಸುವಿನ ವಿಷಯವಾದ ಸಾಕ್ಷಿಯ ನಿಮಿತ್ತವಾಗಿಯೂ ದೇವರ ವಾಕ್ಯದ ನಿಮಿತ್ತವಾಗಿಯೂ ತಲೆಹೊಯಿಸಿಕೊಂಡವರ ಆತ್ಮಗಳನ್ನೂ ಮೃಗಕ್ಕೂ ಅದರ ವಿಗ್ರಹಕ್ಕೂ ನಮಸ್ಕರಿಸದೆ ತಮ್ಮ ಹಣೆಯ ಮೇಲೆ ಮತ್ತು ಕೈಯ ಮೇಲೆ ಗುರುತುಹಾಕಿಸಿಕೊಳ್ಳದೆ ಇರುವವರನ್ನೂ ಕಂಡೆನು. ಅವರು ಜೀವಿತರಾಗಿ ಎದ್ದು ಸಾವಿರ ವರುಷ ಕ್ರಿಸ್ತನೊಂದಿಗೆ ಆಳಿದರು.**

**ಯೇಸುವಿನ ವಿಷಯವಾದ ಸಾಕ್ಷಿ** ಮತ್ತು **ದೇವರ ವಾಕ್ಯ**ಗಳೇ ಯೋಹಾನನ ಸೆರೆವಾಸಕ್ಕೂ ಯಜ್ಞವೇದಿಯ ಕೆಳಗಿದ್ದ ಆತ್ಮಗಳು ರಕ್ತಸಾಕ್ಷಿಯಾಗುವದಕ್ಕೂ ಕಾರಣವಾಗಿದ್ದವು (1:9; 6:9ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಎರಡನೆಯ ಮೃಗದ (ಸುಳ್ಳು ಪ್ರವಾದಿ) ಗುರಿಯು ಮನುಷ್ಯರನ್ನು ಮೊದಲನೆಯ ಮೃಗ ಹಾಗೂ ಆತನ ವಿಗ್ರಹಕ್ಕೆ ನಮಸ್ಕರಿಸುವಂತೆ, ಮತ್ತು ತಮ್ಮ ಹಣೆಯ ಮೇಲೆ ಹಾಗೂ ಕೈಗಳ ಮೇಲೆ ಆತನ ಗುರುತನ್ನು ಹಾಕಿಸಿಕೊಳ್ಳಬೇಕೆಂದು ಮನವೊಲಿಸುವದಾಗಿತ್ತು (13:16-18ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಹೀಗೆ ಸುಳ್ಳು ಪ್ರವಾದಿಯಿಂದ ಪ್ರಭಾವಕ್ಕೊಳಗಾಗುವವರು ಕೊನೆಗೆ "ಉಪಶಮನವಿಲ್ಲದೆ" ಹೋಗುತ್ತಾರೆ (14:11), ಅದೇ ವೇಳೆಯಲ್ಲಿ ವಿರೋಧಿಸಿದವರು ಕೊನೆಗೆ ಕ್ರಿಸ್ತನ ಸಂಗಡ ಆಳ್ವಿಕೆ ಮಾಡುತ್ತಾರೆ (20:4).

ಈಗಾಗಲೇ ಒತ್ತಿ ಹೇಳಲ್ಪಟ್ಟಿರುವ ಪ್ರಕಾರ, ಯೋಹಾನನು ದೇಹಗಳನ್ನು ನೋಡಲಿಲ್ಲ, ಆದರೆ ದೇಹವನ್ನು ತೊರೆದಿದ್ದ **ಆತ್ಮಗಳನ್ನು** ಕಂಡಿದ್ದನು. Hendriksenನು ಬರೆದಿದ್ದೇನೆಂದರೆ, "ನಿಜ, 'ಆತ್ಮಗಳು' ಎಂಬ ಪದವು ಕೆಲವು ಸಾರಿ 'ಜನರು' ಎಂದು ಅರ್ಥ ಕೊಡುತ್ತದೆ, ಉದಾಹರಣೆಗೆ ಆದಿಕಾಂಡ 46:27ರಲ್ಲಿ ನೋಡುತ್ತೇವೆ. ಆದರೆ ಆ ವಾಕ್ಯಭಾಗದಲ್ಲಿ ನೀವು 'ಆತ್ಮಗಳು' ಎಂಬುದಕ್ಕೆ ಪರ್ಯಾಯವಾಗಿ 'ಜನರು' ಎಂದು ಬಳಸಬಹುದು. ಪ್ರಕಟನೆ 20ರಲ್ಲಿ ನೀವು ಆ ರೀತಿಯಾಗಿ ಮಾಡುವದಕ್ಕೆ ಸಾಧ್ಯವಿಲ್ಲ!"[23] ವಾಚಕನಿಗೆ 6ನೇ ಅಧ್ಯಾಯವು ಜ್ಞಾಪಕಕ್ಕೆ ಬರುತ್ತದೆ, ಅಲ್ಲಿ ಅಪೊಸ್ತಲನು "ಹತವಾದವರ ಆತ್ಮಗಳು ಯಜ್ಞವೇದಿಯ

ಕೆಳಗಿರುವದನ್ನು ಕಂಡನು" (6:9). 6ನೇ ಅಧ್ಯಾಯದಲ್ಲಿರುವವರ ಪ್ರಕಾರವೇ, ಈ ರಕ್ಷಣೆ ಹೊಂದಿರುವವರು ತಮ್ಮ ಕ್ರಿಸ್ತನಂಬಿಕೆಯ ನಿಮಿತ್ತವಾಗಿ ಕೊಲ್ಲಲ್ಪಟ್ಟಿದ್ದರು. ವಾಚಕನು ಬಹುಶಃ 6 ಮತ್ತು 20 ಅಧ್ಯಾಯಗಳಲ್ಲಿನ ಎರಡು ಗುಂಪುಗಳನ್ನು ಒಂದೇ ಗುಂಪಾಗಿ, ಮತ್ತು 20ನೇ ಅಧ್ಯಾಯವನ್ನು "ಇನ್ನು ಎಷ್ಟು ಕಾಲ?" ಎಂಬ ಪ್ರಶ್ನೆಗೆ ಉತ್ತರವೆಂಬುದಾಗಿ ಕಾಣತಕ್ಕದ್ದು. ಬಹುಶಃ ಪ್ರಕಟನೆ ಪುಸ್ತಕವು ಬರೆಯಲ್ಪಡುವ ವೇಳೆ ತಲೆಯನ್ನು ಒಂದು ಕೊಡಲಿ ಅಥವಾ ಕತ್ತಿಯಿಂದ ಛೇದಿಸುವದು ಅಧಿಕವಾದ ಬಳಕೆಯಲ್ಲಿದ್ದ ರೋಮನ್ ವಿಧಾನವಾಗಿತ್ತಾದ್ದರಿಂದ ಅವರ ವಿಷಯದಲ್ಲಿ **ತಲೆಹೊಯಿಸಿಕೊಂಡವರು** ಎಂದು ಹೇಳಲಾಗಿರುತ್ತದೆ. ಹೇಗೂ, ಅವರ ಸಂಖ್ಯೆಯೊಳಗೆ ನಿಶ್ಚಯವಾಗಿಯೂ ಕೈಸರನನ್ನು ಆರಾಧಿಸಲಿ ನಿರಾಕರಿಸಿದ ನಿಮಿತ್ತವಾಗಿ ಶಿಲುಬೆಗೆ ಹಾಕಲ್ಪಟ್ಟವರು, ಕ್ರೀಡಾಂಗಣಗಳಲ್ಲಿ ಕಾಡು ಮೃಗಗಳ ಕೈಯಲ್ಲಿ ತುಂಡುಗಳಾಗಿ ಮಾಡಲ್ಪಟ್ಟವರು, ಮತ್ತು ಬೇರೆ ದಾರಿಗಳಲ್ಲಿ ಕೊಲ್ಲಲ್ಪಟ್ಟವರು ಸಹ ಸೇರಿದ್ದರು.

20:4ನೇ ವಚನವು ಒಂದು ಗುಂಪನ್ನು ಪ್ರಸ್ತಾಪಿಸುತ್ತದೋ ಅಥವಾ ಎರಡು ಗುಂಪುಗಳನ್ನೋ ಎಂಬ ಪ್ರಶ್ನೆಯು ಇರುತ್ತದೆ. ಯೋಹಾನನು ಕೇವಲ ಒಂದೇ ಒಂದು ಗುಂಪನ್ನು - ರಕ್ತಸಾಕ್ಷಿಗಳು - ಕಂಡನು ಎಂದು ಮತ್ತು **ಮೃಗಕ್ಕೂ ನಮಸ್ಕರಿಸದೆ** ಇರುವವರು ಎಂದು ಆರಂಭವಾಗುವ ವಿಭಾಗವು ಅವರನ್ನು ಬಣ್ಣಿಸುತ್ತದೆಂದು ಕೆಲವರು ಯೋಚಿಸುತ್ತಾರೆ. ಇನ್ನು ಕೆಲವರು ಮೂಲ ವಾಕ್ಯದಲ್ಲಿನ ಪದಬಳಕೆಯು ಎರಡು ಗುಂಪುಗಳನ್ನು ಸೂಚಿಸುತ್ತವೆಂದು ವಾದಿಸುತ್ತಾರೆ. ಇದೊಂದು ಅಮುಖ್ಯವಾದ ಪ್ರಶ್ನೆಯಾಗಿದೆ, ಆದರೆ ಯೋಹಾನನು ದೇಹವನ್ನು ತೊರೆದಿದ್ದ ಆತ್ಮಗಳ ಎರಡು ಗುಂಪುಗಳನ್ನು ಕಂಡನು ಎಂಬುದು ಹೆಚ್ಚು ಅನುಮೋದಕವಾಗಿ ಕಾಣುತ್ತದೆ: ರಕ್ತಸಾಕ್ಷಿಗಳು ಮತ್ತು ಅವರ ಜೊತೆಗೆ ರೋಮನ್ ಸರ್ಕಾರದ ಒತ್ತಡಕ್ಕೆ ಮಣಿಯದಿದ್ದ ಮಿಕ್ಕ ಜನರ ಗುಂಪು. ಪ್ರಕಟನೆ ಪುಸ್ತಕವು ಯಾವ ವಿಧದಲ್ಲಿಯೂ ಬೇರೆ ರೀತಿಗಳಿಂದ ಹಿಂಸೆಯನ್ನು ಅನುಭವಿಸಿ ನಂಬಿಗಸ್ತರಾಗಿ ಉಳಿದ್ದಿದ್ದವರಿಗಿಂತಲೂ ರಕ್ತಸಾಕ್ಷಿಗಳನ್ನು ಉನ್ನತರೆಂದು ಎಣಿಸುವದೇ ಇಲ್ಲ. ಒಂದು ದೃಷ್ಟಾಂತವೆಂದರೆ ಯಾಕೋಬನು ರಕ್ತಸಾಕ್ಷಿಯ ಮರಣವನ್ನು ಅನುಭವಿಸಿದನು (ಅಪೊಸ್ತಲರ ಕೃತ್ಯಗಳು 12:1, 2), ಅದೇ ವೇಳೆಯಲ್ಲಿ ಆತನ ತಮ್ಮನಾದ ಯೋಹಾನನು "ಕೇವಲ" ಪತ್ಮೋಸ್ ದ್ವೀಪಕ್ಕೆ ಸೆರೆಯಾಳಾಗಿ ಗಡಿಪಾರು ಮಾಡಲ್ಪಟ್ಟನಷ್ಟೆ (ಪ್ರಕಟನೆ 1:9). ಹಾಗಿದ್ದರೂ, ಅವರಿಬ್ಬರೂ ಯೇಸುವಿನ (ಶ್ರಮೆಯ) ದೀಕ್ಷಾಸ್ನಾನವನ್ನು ಮಾಡಿಸಿಕೊಂಡಿದ್ದರು (ಮಾರ್ಕ 10:38, 39). ಕರ್ತನ ಪ್ರಕಾರವಾದರೋ, ಎರಡರಲ್ಲಿ ಯಾವದೂ ಮತ್ತೊಂದಕ್ಕಿಂತ ಶ್ರೇಷ್ಠ ತ್ಯಾಗವೇನೂ ಆಗಿರಲಿಲ್ಲ.

William Barclayನು ಹೀಗೆ ಬರೆದನು, "ಹಿಂಸೆಯ ದಿನಗಳಲ್ಲಿ ಪ್ರಾಚೀನ ಸಭೆಯಲ್ಲಿ ಎರಡು ಪದಗಳು ಬಳಸಲ್ಪಡುತ್ತಿದ್ದವು. ವಾಸ್ತವಿಕದಲ್ಲಿ ತಮ್ಮ ಕ್ರಿಸ್ತನಂಬಿಕೆಗೋಸ್ಕರ ಮರಣಿಸುತ್ತಿದ್ದವರು *ರಕ್ತಸಾಕ್ಷಿಗಳು* ಆಗಿದ್ದರು; ಕ್ರಿಸ್ತನಿಗಾಗಿ ತಮಗಿದ್ದ ನಿಷ್ಠೆಗೋಸ್ಕರ ಮರಣವೊಂದನ್ನು ಬಿಟ್ಟು ಮಿಕ್ಕ ಎಲ್ಲವನ್ನೂ ಅನುಭವಿಸುತ್ತಿದ್ದವರು *ಶ್ರದ್ಧಾಳುಗಳು.*"[24] Henry Sweteನು ಶ್ರದ್ಧಾಳುಗಳನ್ನು "ವಾಸ್ತವಿಕದಲ್ಲಿ ರಕ್ತಸಾಕ್ಷಿಗಳಾಗಿ ಕೊಲ್ಲಲ್ಪಡದವರಾದರೂ, ಕ್ರಿಸ್ತನ ನಿಮಿತ್ತವಾಗಿ ಶ್ರಮೆ, ನಿನಂದೆ, ಸೆರೆವಾಸ, ಸ್ವತ್ತುಗಳ ನಷ್ಟ, ಅವರ ಮನೆಗಳನ್ನು ಒಡೆದು ಹಾಕುವಿಕೆ ಇತ್ಯಾದಿಗಳನ್ನು ಮನಃಪೂರ್ವಕವಾಗಿ ಅನುಭವಿಸಿದವರು"[25] ಎಂದು ಗುರುತಿಸುತ್ತಾನೆ. ವಾಕ್ಯಭಾಗದ ತಿರುಳು ಏನೆಂದರೆ, ಮರಣಕ್ಕೆ ಕಾರಣ ಕೊಡಲಿಯೋ ಅಥವಾ ಹೃದಯಾಘಾತವೋ, ಪ್ರತಿಯೊಬ್ಬನು ಸಾಯುವ ವರೆಗೂ ಕರ್ತನಿಗೆ *ನಂಬಿಗಸ್ತರಾಗಿ* ಉಳಿದಿದ್ದರು. ಈ ವಾಕ್ಯಭಾಗದಿಂದ ಪ್ರತಿಯೊಬ್ಬ ಕ್ರೈಸ್ತನಿಗೆ ಒಂದು ಸಾಮಾನ್ಯ

ಅನ್ವಯಿಕೆಯನ್ನು ಮಾಡಬಹುದು, ಆದರೆ ಇಲ್ಲಿ ಒತ್ತು ತಮ್ಮ ನಂಬಿಕೆಗೋಸ್ಕರ ಹಿಂಸೆಯನ್ನು ಅನುಭವಿಸಿದ್ದವರ ಮೇಲೆ, ಮತ್ತು ವಿಶೇಷವಾಗ ರಕ್ತಸಾಕ್ಷಿಗಳಾಗಿ ಕೊಲ್ಲಲ್ಪಟ್ಟವರ ಮೇಲೆ ಇರುತ್ತದೆ.

ಜಯಶಾಲಿಯಾದ ರಕ್ತಸಾಕ್ಷಿಗಳಿಗೆ ಕ್ರಿಸ್ತನ ಸಂಗಡ ಆಳ್ವಿಕೆ ಮಾಡುವ ಭಾಗ್ಯವನ್ನು ಅನುಗ್ರಹಿಸಲಾಗಿತ್ತು. ಆಳ್ವಿಕೆಯನ್ನು ವ್ಯಕ್ತಪಡಿಸುವ ಒಂದು ಮಾತೆಂದರೆ **ನ್ಯಾಯತೀರಿಸುವ ಅಧಿಕಾರವು ಅವರಿಗೆ ಕೊಡಲ್ಪಟ್ಟಿತು.** ದಾನಿಯೇಲ 7:22ರಲ್ಲಿನ ಒಂದು ಇದೇ ರೀತಿಯ ಪದಗುಚ್ಛವು "ಭಕ್ತರಿಗಾಗಿ ನ್ಯಾಯತೀರಿಸಿ" ಎಂಬ ಅರ್ಥವನ್ನು ಹೊಂದಿರುತ್ತದೆ - ಸರಳವಾಗಿ ಹೇಳುವದಾದರೆ, ದೇವಜನರ ನ್ಯಾಯವು ಸ್ಥಾಪಿಸಲ್ಪಟ್ಟಿತ್ತು. ಇಲ್ಲಿ ಅದೇ ಅರ್ಥವು ಇರಬಹುದಾಗಿದೆ, ಆದರೆ ಪ್ರಕಟನೆ 20ರ ಸನ್ನಿವೇಶವು ರಕ್ತಸಾಕ್ಷಿಗಳ ವೈರಿಗಳ ಮೇಲೆ ಜಯಗೊಳ್ಳುವ ವಿಚಾರದ ಪರವಾಗಿ ಒಲವು ತೋರುತ್ತದೆ. ಭೂಮಿಯ ಮೇಲೆ, ಅವರ ವೈರಿಗಳು ಅವರ ಮೇಲೆ ನ್ಯಾಯ ತೀರಿಸುವದಕ್ಕೆ ಕೂತಿದ್ದರು ಮತ್ತು ಅವರಿಗೆ ಮರಣ ದಂಡನೆಯನ್ನು ನೀಡಿದ್ದರು. ಈಗ, ಪಾತ್ರಗಳು ಹಿಮ್ಮೊಗವಾಗಿದ್ದವು, ಮತ್ತು *ಅವರು* ನ್ಯಾಯತೀರಿಸುವ ಆಸನಗಳಲ್ಲಿ ಕೂತಿದ್ದರು.

ಕ್ರೈಸ್ತರು ಕೆಟ್ಟ ಮನುಷ್ಯರಿಗೆ ನ್ಯಾಯತೀರ್ಪು ಮಾಡುವದಕ್ಕೆ ಕೂತುಕೊಳ್ಳುವ ವಿಚಾರವು ಹೊಸದೇನೂ ಆಗಿರಲಿಲ್ಲ. ಯೇಸುವು ತನ್ನ ಶಿಷ್ಯರಿಗೆ "ಸಿಂಹಾಸನಗಳ ಮೇಲೆ ಕೂತುಕೊಂಡು ಇಸ್ರಾಯೇಲಿನ ಹನ್ನೆರಡು ಕುಲಗಳಿಗೆ ನ್ಯಾಯತೀರಿಸುವಿರಿ" ಎಂದು ಹೇಳಿದನು (ಲೂಕ 22:30). ಈ ವಾಗ್ದಾನವು ಅಪೊಸ್ತಲರಿಗೆ ಕೊಡಲ್ಪಟ್ಟಿತ್ತು; ಬಹುಶಃ ಇದು ಅವರು ತಮ್ಮ ಉಪದೇಶ ಹಾಗೂ ಬರಹಗಳ ಮೂಲಕ "ನ್ಯಾಯತೀರಿಸುತ್ತಾರೆ" ಎಂಬ ವಾಸ್ತವಾಂಶಕ್ಕೆ ಸಂಬಂಧ ಪಟ್ಟಿರಬಹುದು. ಪೌಲನು ಬರೆದದ್ದೇನೆಂದರೆ "ದೇವಜನರು ಲೋಕಕ್ಕೆ ತೀರ್ಪುಮಾಡುವರು," ಮಾತ್ರವಲ್ಲದೆ "ದೇವದೂತರಿಗೂ ತೀರ್ಪುಮಾಡುವರು" ಎಂಬುದಾಗಿ ಸೇರ್ಪಡೆಗೊಳಿಸುತ್ತಾನೆ (1 ಕೊರಿಂಥ 6:2, 3). ಇವರು ಬಹುಶಃ 2 ಪೇತ್ರ 2:4ರಲ್ಲಿ ತಿಳಿಸಲಾಗಿರುವ ಪಾಪ ಮಾಡಿದ ದೇವದೂತರಾಗಿರಬಹುದು. 1 ಕೊರಿಂಥ 6:2, 3 ವಾಕ್ಯಭಾಗದ ಸಂಭಾವ್ಯ ಒತ್ತು ಏನೆಂದರೆ ಕ್ರೈಸ್ತರು ಕ್ರಿಸ್ತನ ಆಳ್ವಿಕೆಯಲ್ಲಿ ಪಾಲುಗಾರರಾಗುತ್ತಾರೆ ಎಂಬುದೆ, ಹೀಗೆ ಅವರು ಆತನು ನ್ಯಾಯತೀರಿಸುವಾಗ ಅವರು ಅದರಲ್ಲಿ ಪಾಲುಗಾರರಾಗುತ್ತಾರೆ - ಕ್ರೈಸ್ತರು ಅದನ್ನು ವೈಯಕ್ತಿಕವಾಗಿ ಮಾಡುವರೆಂದಲ್ಲ, ಆದರೆ ಅವರು ಅದನ್ನು ಆತನ ಮೂಲಕವಾಗಿ ಮಾಡುವರು. ಇವುಗಳು ಅರ್ಥಮಾಡಿಕೊಳ್ಳುವದಕ್ಕೆ ಅಷ್ಟೊಂದು ಸುಲಭವಾದ ವಾಕ್ಯಭಾಗಗಳಲ್ಲ, ಆದರೆ ಕ್ರೈಸ್ತರು ಬೇರೆ ವ್ಯಕ್ತಿಗಳ ಅಂತ್ಯಸ್ಥಿತಿಯನ್ನು ವೈಯಕ್ತಿಕವಾಗಿ ನಿರ್ಧರಿಸುವರೆಂದು ವಚನಗಳು ಕಲಿಸುವದಿಲ್ಲ ಎಂಬುದನ್ನು ಬಹಳಷ್ಟು ಮಂದಿ ಒಪ್ಪಿಕೊಳ್ಳುತ್ತಾರೆ; ಅದು ದೇವರ ವಿಶೇಷಾಧಿಕಾರವಾಗಿದೆ. ನಂತರದಲ್ಲಿ ಬರುವ ನ್ಯಾಯತೀರ್ಪಿನ ದೃಶ್ಯದಲ್ಲಿ, ನ್ಯಾಯಾಧಿಪತಿಯು ಒಬ್ಬನೇ *ಒಬ್ಬನು* ಇದ್ದು (20:11) ಆತನೇ ಎಲ್ಲಾ ಮನುಷ್ಯರ ಗತಿಯನ್ನು ನಿರ್ಧರಿಸುತ್ತಾನೆ. ಇನ್ನೊಂದು ಕಡೆಯಲ್ಲಿ, ಕ್ರೈಸ್ತರು ಲೋಕಕ್ಕೆ ಇತರ ಹಲವಾರು ಅರ್ಥಗಳಲ್ಲಿ "ನ್ಯಾಯತೀರಿಸುವ" ಕೆಲಸವನ್ನು ಮಾಡುತ್ತಾರೆ: ಅವರು ವಾಕ್ಯವನ್ನು ಸಾರುತ್ತಾರೆ, ಅದು ನ್ಯಾಯತೀರ್ಪಿಗೆ ಕರ್ತನ ಮಾನದಂಡವಾಗಿದೆ (ಯೋಹಾನ 12:48), ಅದು ಪಾಪವನ್ನು ಬಯಲಿಗೆ ತರುತ್ತದೆ. ಅಲ್ಲದೆ, ಅವರ ಜೀವಿತಗಳ ಮೂಲಕ ನ್ಯಾಯತೀರಿಸುತ್ತಾರೆ, ಜನರು ದೇವರ ಮಾನದಂಡಗಳ ಪ್ರಕಾರ ಜೀವಿಸುವದು ಸಾಧ್ಯವಿದೆ ಎಂದು ಕ್ರೈಸ್ತರು ತೋರಿಸಿ ಕೊಡುತ್ತಾರೆ, ಆ ಮೂಲಕ ಹಾಗೆ ಮಾಡಲು ವಿಫಲರಾಗುವವರನ್ನು ತಪ್ಪಿತಸ್ಥರೆಂದು ಸಾಭಿತುಪಡಿಸುತ್ತಾರೆ.

ಹೇಗೂ, ಪ್ರಕಟನೆ 20ನೇ ಅಧ್ಯಾಯದಲ್ಲಿನ ನ್ಯಾಯತೀರಿಸುವಿಕೆಯು, ಕರ್ತನಿಗೋಸ್ಕರ ಮರಣಿಸಿದ್ದವರು ಆತನ ಸಂಗಡ ಆಳ್ವಿಕೆ ಮಾಡುತ್ತಿದ್ದಾರೆಂಬ ಚರ್ಚೆಯಾಂಶವನ್ನು ವಿಸ್ತರಿಸುತ್ತದೆ: ಅವರು ಜಯಶಾಲಿಯಾಗಿದ್ದರು! ಸೈತಾನನು ಕೆಳಕ್ಕೆ ದೊಬ್ಬಲ್ಪಟ್ಟಿದ್ದನು, ಮತ್ತು ಅವರು ಮೇಲಕ್ಕೆ ಎತ್ತಲ್ಪಟ್ಟಿದ್ದರು!

ಜಯದ ವಿಚಾರವು 4ನೇ ವಚನದ ಕಡೇ ಭಾಗದಲ್ಲಿ ಮುಂದುವರೆಯುತ್ತದೆ: **ಅವರು ಜೀವಿತರಾಗಿ ಎದ್ದು ಸಾವಿರ ವರುಷ ಕ್ರಿಸ್ತನೊಂದಿಗೆ ಆಳಿದರು.** ಸಹಸ್ರವರ್ಷಪೂರ್ವವಾದಿಗಳು ಇದನ್ನು ಕ್ರಿಸ್ತನು ಹಿಂದಿರುಗಿ ಬಂದ ಬಳಿಕ ಸಂಭವಿಸುವಂಥ ಒಂದು ದೈಹಿಕ ಪುನರುತ್ಥಾನದಲ್ಲಿ "ಜೀವಿತರಾಗಿ ಏಳುವದು" ಎಂದಾಗಿಸುವದಕ್ಕೆ ಪ್ರಯತ್ನಿಸುತ್ತಾರೆ. ಹೇಗೂ, ನಾವು ಗಮನಿಸತಕ್ಕದ್ದೇನೆಂದರೆ "ಜೀವಿಸುವದು" "ಆಳ್ವಿಕೆ ಮಾಡುವದರೊಂದಿಗೆ" ಸಂಬಂಧಗೊಳಿಸಲ್ಪಟ್ಟಿದೆ, ಮತ್ತು ದೇಹದಿಂದ ಬೇರ್ಪಟ್ಟಿದ್ದ ಆತ್ಮಗಳು ದೃಶ್ಯದ ಆರಂಭದಲ್ಲಿಯೇ ಪರಲೋಕದಲ್ಲಿನ ಸಿಂಹಾಸನಗಳ ಮೇಲೆ ಕೂತಿದ್ದರು (ಆಳ್ವಿಕೆ ಮಾಡುತ್ತಿದ್ದರು) ಎಂಬದೆ. ಬೈಬಲ್ ಪರಿಭಾಷೆಯಲ್ಲಿ, ಒಂದು "ಸಿಂಹಾಸನ" ಮೇಲೆ "ಕೂತುಕೊಳ್ಳುವದು" ಎಂದರೆ ಆಳ್ವಿಕೆ ಮಾಡುವದು ಎಂದಾಗಿದೆ (ಮತ್ತಾಯ 22:44; 25:31). ಈ ವಾಕ್ಯಭಾಗವು ತಿಳಿಸುವ ಅಂಶವು ಒಂದು ದಿನ ರಕ್ತಸಾಕ್ಷಿಗಳು ಜೀವಿತರಾಗಿ ಎದ್ದು ಯೇಸುವಿನ ಸಂಗಡ ಆಳ್ವಿಕೆ ಮಾಡುವದು ಎಂದಲ್ಲ, ಆದರೆ ನಂಬಿಗಸ್ತರಾಗಿ ಮರಣಿಸಿದ್ದವರು *ಈಗಾಗಲೇ* ಜೀವಿತರಾಗಿ ಆಳ್ವಿಕೆ ಮಾಡುತ್ತಿದ್ದಾರೆ ಎಂಬುದೆ. "ಜೀವಿತರಾಗಿ ಎದ್ದು" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದ ἔζησαν (*ezēsan* from ζάω, *zaō*) ಎಂದಾಗಿದ್ದು, ಇದರ ಅಕ್ಷರಶಃ ಅರ್ಥವು "ಅವರು ಜೀವಿಸಿದರು" ಎಂದಾಗಿದೆ (ನೋಡಿರಿ KJV, ASV). (ವ. 5ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ.)

4ನೇ ವಚನದಲ್ಲಿ ಯಾವದೇ ವಾಗ್ದಾನಗಳು ಸಿಕ್ಕುವದಿಲ್ಲ ಮತ್ತು ತಕ್ಷಣದಲ್ಲಿ ಬರುವ ವಚನಗಳು ಬೇರೊಂದು ಕಡೆಯಲ್ಲಿ ಪ್ರತಿಯೊಬ್ಬ ನಂಬಿಗಸ್ತ ಕ್ರೈಸ್ತನಿಗೆ ಅನ್ವಯಿಸಲ್ಪಟ್ಟಿರುವದಿಲ್ಲ. ಜೀವದ ವಾಗ್ದಾನವು ಕ್ರೈಸ್ತರಿಗೆ ಸಾಮಾನ್ಯವಾಗಿ ಕೊಡಲಾಗಿರುವ ವಾಗ್ದಾನವಾಗಿದೆ (ನೋಡಿರಿ ಯೋಹಾನ 5:24) - ಮತ್ತು ಪಾಪದಿಂದ ಬಿಡಿಸಲ್ಪಟ್ಟು ಸಿಕ್ಕುವ ರಕ್ಷಣೆಯು ಅನೇಕ ಸಾರಿ ಒಂದು ಪುನರುತ್ಥಾನ ಎಂಬಂತೆ (ಜೀವಿತರಾಗಿ ಎದ್ದೇಳುವದು) ಬಣ್ಣಿಸಲ್ಪಟ್ಟಿದೆ. ಪೌಲನು ಹೀಗೆ ಹೇಳಿದನು, "ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು" (ರೋಮಾ 6:4). ಆತನು ಇನ್ನೂ ಬರೆದದ್ದೇನೆಂದರೆ, "ಆದರೆ ಕರುಣಾನಿಧಿಯಾಗಿರುವ ದೇವರು ... ಅಪರಾಧಗಳ ದೆಸೆಯಿಂದ ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದನು ... ಕ್ರಿಸ್ತ ಯೇಸುವಿನಲ್ಲಿರುವ ನಮ್ಮನ್ನು ಆತನೊಂದಿಗೆ ಎಬ್ಬಿಸಿ ಪರಲೋಕದಲ್ಲಿ ಆತನೊಂದಿಗೆ ಕೂಡ್ರಿಸಿದ್ದಾನೆ" (ಎಫೆಸ 2:4-6). ಪುನಃ ಆತನು ಹೇಳಿದ್ದೇನೆಂದರೆ, "ಆದಕಾರಣ ನೀವು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟಿರುವದರಿಂದ ಮೇಲಿರುವವುಗಳನ್ನು ಹುಡುಕಿರಿ; ಅಲ್ಲಿ ಕ್ರಿಸ್ತನು ದೇವರ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ" (ಕೊಲೊಸ್ಸೆ 3:1).

ವಿಷಯವು ಹೀಗಿರುವದರಿಂದ, ಸ್ವಾಭಾವಿಕವಾಗಿ ಏಳುವ ಪ್ರಶ್ನೆಯು ಏನೆಂದರೆ "ಎಲ್ಲಾ ಕ್ರೈಸ್ತರು 'ಎಬ್ಬಿಸಲ್ಪಟ್ಟಿರುವರು' ಮತ್ತು ಜೀವವನ್ನು ಹೊಂದಿದ್ದಾರೆ ಎಂದಾದಲ್ಲಿ, ಏಕೆ ಪವಿತ್ರಾತ್ಮನು ರಕ್ತಸಾಕ್ಷಿಗಳು 'ಜೀವಿತರಾಗಿ ಎದ್ದರು' ಎಂದು ನಿರ್ದಿಷ್ಟವಾಗಿ ಹೇಳಿದನು?" ಈ

ಹೇಳಿಕೆಯು ಒಬ್ಬ ದೇವಮನುಷ್ಯನ ಮರಣವು ಆತನು ಕ್ರಿಸ್ತನಲ್ಲಿ ಹೊಂದಿರುವ "ನೂತನ ಜೀವಿತ"ವನ್ನು ಅಂತ್ಯಗೊಳಿಸುವದಿಲ್ಲ; ಬದಲಾಗಿ, ಆತನ ಮರಣವು ಹಿಂದೆಂದೂ ಆತನಿಗೆ ಗೊತ್ತಿರದ ರೀತಿಯಲ್ಲಿ ಆತನನ್ನು "ಜೀವಿತನಾಗಿ ಎಬ್ಬಿಸುವದು" ಎಂಬುದನ್ನು ಒತ್ತಿ ಹೇಳುತ್ತದೆ.

ರಕ್ತಸಾಕ್ಷಿಗಳು "ಕ್ರಿಸ್ತನೊಂದಿಗೆ ಆಳಿದರು" ಎಂದು ಸಹ ಯೋಹಾನನು ಹೇಳಿದನು, ಆದರೆ ಈ ವಾಗ್ದಾನವು ಈಗಾಗಲೇ *ಪ್ರತಿಯೊಬ್ಬ* ನಂಬಿಗಸ್ತ ಕ್ರೈಸ್ತನಿಗೆ ಸಹ ಕೊಡಲ್ಪಟ್ಟದ್ದಾಗಿತ್ತು. ಉದಾಹರಣೆಗೆ, ಪ್ರಕಟನೆ 3ರಲ್ಲಿ, ಯೇಸುವು ಜಯ ಹೊಂದುವವನ ವಿಷಯದಲ್ಲಿ ಈ ಭರವಸವನ್ನು ಕೊಟ್ಟನು: "ನಾನು ಜಯಹೊಂದಿ ನನ್ನ ತಂದೆಯೊಡನೆ ಸಿಂಹಾಸನದಲ್ಲಿ ಕೂತುಕೊಂಡೆನು; ಹಾಗೆಯೇ ಜಯಹೊಂದುವವನನ್ನು ನನ್ನೊಡನೆ ಸಿಂಹಾಸನದಲ್ಲಿ ಕೂತುಕೊಳ್ಳುವಂತೆ ಮಾಡುವೆನು" (3:21). ಪುನಃ, ಪ್ರಕಟನೆ 5:10ನೇ ವಚನವು 20:4, 6ರಂತೇಯೇ ಮೂಲಭೂತವಾಗಿ ಅದೇ ಪರಿಭಾಷೆಯನ್ನು ಬಳಸುತ್ತದೆ: "ಅವರನ್ನು [ಕ್ರಿಸ್ತನ ರಕ್ತದಿಂದ ರಕ್ಷಣೆ ಹೊಂದಿರುವ ಎಲ್ಲರನ್ನು] ನಮ್ಮ ದೇವರಿಗೋಸ್ಕರ ರಾಜ್ಯವನ್ನಾಗಿಯೂ ಯಾಜಕರನ್ನಾಗಿಯೂ ಮಾಡಿದಿ; ಅವರು ಭೂಮಿಯ ಮೇಲೆ ಆಳುವರು" (ನೋಡಿರಿ 1:6).

5:10ನೇ ವಚನವನ್ನು ಅಧ್ಯಯನ ಮಾಡಿದ ವೇಳೆ, ಕ್ರೈಸ್ತರು ಹಲವಾರು ವಿಧಗಳಲ್ಲಿ ಆಳ್ವಿಕೆ ಮಾಡುತ್ತಾರೆಂಬುದಾಗಿ ಗಮನಕ್ಕೆ ತರಲಾಗಿತ್ತು: (1) ಕ್ರೈಸ್ತರು ಕ್ರಿಸ್ತನ ರಾಜ್ಯವಾಗಿದ್ದಾರೆ (ಪ್ರಕಟನೆ 1:6), ಅದು ಸಭೆಯೇ (ಮತ್ತಾಯ 16:18, 19). (2) ದೇವರು ಅವರ ತಂದೆಯಾಗಿರುವದರಿಂದ (1 ಕೊರಿಂಥ 1:3), ಅವರು ರಾಜವಂಶದ ಭಾಗವಾಗಿರುತ್ತಾರೆ. (3) ಕ್ರಿಸ್ತನು ಈಗ ಪ್ರಸ್ತುತ ಆಳ್ವಿಕೆ ಮಾಡುತ್ತಿರುವದರಿಂದ (ಅಪೊಸ್ತಲರ ಕೃತ್ಯಗಳು 2:33–36; 1 ಕೊರಿಂಥ 15:25), ಮತ್ತು ಕ್ರೈಸ್ತರು "ಕ್ರಿಸ್ತನಲ್ಲಿ" ಇದ್ದಾರಾದ್ದರಿಂದ (2 ಕೊರಿಂಥ 5:17), ಅವರು ಆತನ ಆಳ್ವಿಕೆಯಲ್ಲಿ ಪಾಲುಗಾರರಾಗಿರುತ್ತಾರೆ. (4) ಕ್ರೈಸ್ತರು ರಕ್ಷಿಸಲ್ಪಟ್ಟಿದ್ದಾರಾದ್ದರಿಂದ, ಇನ್ನು ಮೇಲೆ ಅವರನ್ನು ಮರಣವು ಆಳ್ವಿಕೆ ಮಾಡುವದಿಲ್ಲ; ಬದಲಾಗಿ, ಅವರಿಗೆ "ಯೇಸು ಕ್ರಿಸ್ತನ … ಮೂಲಕ ಜೀವಭರಿತರಾಗಿ ಆಳುವದ"ಕ್ಕೆ ಬಲವು ಕೊಡಲ್ಪಟ್ಟಿದೆ (ರೋಮಾ 5:17; ನೋಡಿರಿ ರೋಮಾ 5:14, 21). ಯೋಹಾನನ ದಿನದಲ್ಲಿದ್ದ ಕ್ರೈಸ್ತರ ದೃಷ್ಟಿಕೋನದಿಂದ ಒತ್ತಿ ಹೇಳಲ್ಪಟ್ಟಿದ್ದೇನೆಂದರೆ, ಭೂಮಿಯ ಮೇಲೆ ಆಳ್ವಿಕೆ ಮಾಡುವದು ಎಂಬ ವಿಚಾರದ ಪ್ರಾಥಮಿಕ ಅರ್ಥವು *ವಿಜಯ* ಎಂದಾಗಿರುತ್ತದೆ. ಕ್ರಿಸ್ತನ ಬಲದಿಂದ ಪುಷ್ಟೀಕರಿಸಲ್ಪಟ್ಟವರಾಗಿ, ಕ್ರೈಸ್ತರು ತಮ್ಮ ದಾರಿಗಳಲ್ಲಿ ಜೀವಿತವು ತರುವಂಥ ಸಕಲ ಅಡೆತಡೆಗಳ ಮೇಲೆ ಆಳ್ವಿಕೆ ಮಾಡುವವರಾಗಿ ತಮ್ಮ ಜೀವಿತಗಳು ಹಾಗೂ ಅಂತ್ಯಸ್ಥಿತಿಗಳ ಮೇಲೆ ನಿಯಂತ್ರಣವನ್ನು ಹೊಂದಿದವರಾಗಿ ಉಳಿದರು.

ಪುನಃ ಪ್ರಶ್ನೆಯು ಎದ್ದೇಳುತ್ತದೆ: ಯೇಸುವಿನೊಂದಿಗೆ ಆಳ್ವಿಕೆಯನ್ನು ಮಾಡುವ ವಾಗ್ದಾನವು ಒಟ್ಟಾರೆ ಕ್ರೈಸ್ತರಿಗೆ ಕೊಡಲ್ಪಟ್ಟಿದ್ದಾಗಿದ್ದರೆ, ರಕ್ತಸಾಕ್ಷಿಗಳಾಗಿ ಸತ್ತವರ ವಿಷಯದಲ್ಲಿ ಆ ವಾಗ್ದಾನವನ್ನು ಪುನರುಚ್ಚರಿಸುವದರ ಉದ್ದೇಶವೇನಾಗಿತ್ತು? ಉತ್ತರವು ಮೂಲಭೂತವಾಗಿ ಈ ಮುಂಚೆ ಇದ್ದಂತೆಯೇ ಇರುವದು: ವಾಗ್ದಾನವು ಮರಣದಿಂದ ರದ್ದಾಗಿ ಹೋಗುವದಿಲ್ಲ, ಆದರೆ ಬದಲಾಗಿ ಮರಣವು ಅದನ್ನು ಸಂಪೂರ್ಣತೆಗೆ ತರುತ್ತದೆಂಬುದನ್ನು ಅರಿತುಕೊಳ್ಳುವದು ಆದಿ ಕ್ರೈಸ್ತರಿಗೆ ಅಗತ್ಯವಿತ್ತು. "*ಸಾವಿರ* ವರುಷಗಳ ವರೆಗೆ" ಆಳ್ವಿಕೆ ಮಾಡುವ ಚಿತ್ರಣವು ರಕ್ತಸಾಕ್ಷಿಗಳ ಆಳ್ವಿಕೆಯ *ಸಂಪೂರ್ಣತೆ*ಯನ್ನು, ಅವರ ಜಯದ ಪೂರ್ಣತೆಯನ್ನು ಒತ್ತಿ ಹೇಳುತ್ತದೆ.

**ವಚನ 5. ಮಿಕ್ಕ ಸತ್ತವರು ಆ ಸಾವಿರ ವರುಷ ತೀರುವ ತನಕ ಜೀವಿತರಾಗಿ ಏಳಲಿಲ್ಲ. ಇದೇ ಪ್ರಥಮ ಪುನರುತ್ಥಾನವು.** ವಚನದಲ್ಲಿನ ಕಡೇ ವಾಕ್ಯವು ಸ್ವಲ್ಪ ದ್ವಂದ್ವಾರ್ಥದಿಂದ

ಕೂಡಿದೆ ಯಾಕೆಂದರೆ **ಇದೇ** ಎಂಬುದು ಏನನ್ನು ಸೂಚಿಸುತ್ತದೆಂಬುದನ್ನು ವಾಕ್ಯವು ಸ್ಪಷ್ಟವಾಗಿ ತಿಳಿಸುವದಿಲ್ಲ. ಇದು ಅದಾದ ತಕ್ಷಣ ಬರುವ ವಾಕ್ಯವನ್ನು ಸೂಚಿಸಬಹುದಾಗಿದೆ. ಇದು ಯೇಸುವಿನ ಪುನರುತ್ಥಾನವನ್ನು ಸೂಚಿಸುತ್ತದೆಂದು ಕೆಲವರು ಯೋಚಿಸುತ್ತಾರೆ ("ಪ್ರಥಮ ಫಲಗಳು"; 1 ಕೊರಿಂಥ 15:20), ಅದು ಸ್ವತಃ ನಮ್ಮ ಪುನರುತ್ಥಾನಕ್ಕೆ ಪೂರ್ವಛಾಯೆಯಾಗಿದೆ. ಪ್ರಕಟನೆ ಪುಸ್ತಕದ ಕುರಿತು ಕಟ್ಟುನಿಟ್ಟಾದ preterist ಅಭಿಪ್ರಾಯದ ಕಡೆಗೆ ಒಲವು ತೋರುವವರು ನಂಬುವದೇನೆಂದರೆ "ಪ್ರಥಮ ಪುನರುತ್ಥಾನವು" ಕ್ರೈಸ್ತತ್ವದ ಧ್ಯೇಯಕ್ಕಾಗುವ ಜಯಕ್ಕೆ, ನಿರ್ದಿಷ್ಟವಾಗಿ ರೋಮನ್ ಸಾಮ್ರಾಜ್ಯದ ಮೇಲೆ ಕ್ರೈಸ್ತತ್ವಕ್ಕೆ ದೊರೆತ ಜಯಕ್ಕೆ ಸಂಬಂಧಪಟ್ಟದ್ದಾಗಿದೆ ಎಂಬದೆ. ಅವರು 11ನೇ ಅಧ್ಯಾಯದಲ್ಲಿನ ಇಬ್ಬರು ಸಾಕ್ಷಿಗಳ ಪುನರುತ್ಥಾನದೊಂದಿಗೆ ಸಮಾನಾರ್ಥವನ್ನು ಕಲ್ಪಿಸಿ ಸಾಕ್ಷಿಗಳ "ಪುನರುತ್ಥಾನ"ವು ಅವರು ಧ್ಯೇಯಕ್ಕೆ ಮರಣವಾಗಿರಲಿಲ್ಲ ಎಂಬುದನ್ನು ಸೂಚಿಸುತ್ತದೆಂಬ ಅಭಿಪ್ರಾಯ ಪಡುತ್ತಾರೆ. ಇವರಲ್ಲಿ ಕೆಲವರು ಕಾನ್ಸ್ಟಂಟೈನ್ ಶಾಸನವನ್ನು ಗಮನಕ್ಕೆ ತರುತ್ತಾರೆ, ಅದು ಕ್ರೈಸ್ತತ್ವವನ್ನು ಒಂದು "ಕಾನೂನುಬದ್ಧ" ಧರ್ಮವನ್ನಾಗಿ ಘೋಷಿಸಿತ್ತು. ಬಹುಶಃ "ಇದೇ" ಎಂಬ ಪದವು 20:4ನೇ ವಾಕ್ಯದ ಕಡೇ ಪದಗುಚ್ಛವನ್ನು ಸೂಚಿಸಬಹುದಾಗಿದೆ: "ಅವರು ಜೀವಿತರಾಗಿ ಎದ್ದು ... ಆಳಿದರು." ರಕ್ತಸಾಕ್ಷಿಗಳು ಹಾಗೂ ಮರಣಿಸಿದ್ದ ಇತರ ನಂಬಿಗಸ್ತರು ಈ "ಜೀವಿತರಾಗಿ ಎದ್ದು" ಬರುವಿಕೆಯನ್ನು "ಪ್ರಥಮ ಪುನರುತ್ಥಾನ" ಎಂದು ಕರೆದಿರುವದು ಸೂಕ್ತವಾಗಿ ಸರಿಹೊಂದುತ್ತದೆ.

**ಪ್ರಥಮ ಪುನರುತ್ಥಾನ** ಎಂಬ ಪದಗುಚ್ಛವು ಒಂದು ಕಲ್ಪನಾತ್ಮಕವಾದ ಅಕ್ಷರಶಃ ಸಹಸ್ರವರ್ಷದ ಆರಂಭದಲ್ಲಿ ಒಳ್ಳೇಯವರಿಗಾಗುವ ದೈಹಿಕ ಪುನರುತ್ಥಾನಕ್ಕೆ ಯಾವದೇ ಸಂಬಂಧವಿರುವದಿಲ್ಲ. ಬದಲಾಗಿ, ಸನ್ನಿವೇಶದಲ್ಲಿ, ಒಬ್ಬ ವ್ಯಕ್ತಿಯು ದೀಕ್ಷಾಸ್ನಾನ ಮಾಡಿಸಿಕೊಳ್ಳುವಾಗ ಆರಂಭಗೊಂಡು ಆತನ "ಕರ್ತನ ಭಕ್ತನಾಗಿ" ಸಾಯುವದರಲ್ಲಿ (ಪ್ರಕಟನೆ 14:13) ಪರಾಕಾಷ್ಠೆಯನ್ನು ತಲುಪುವಂಥ ಆತ್ಮೀಕ ಪುನರುತ್ಥಾನವಾಗಿದೆ. ಇದು "ಕರ್ತನ ಜೊತೆಯಲ್ಲಿರುವದಕ್ಕೆ" ಆತನು ಈ ಲೋಕದಿಂದ ಹೊರಟು ಹೋಗುವದರ ಫಲಿತವಾಗಿದೆ (ಫಿಲಿಪ್ಪಿ 1:23), ಹೀಗೆ ಆತನು "ಕರ್ತನ ಬಳಿಯಲ್ಲಿರುವದೇ ಉತ್ತಮವೆಂದು" ಎಣಿಸಿಕೊಳ್ಳುತ್ತಾನೆ (2 ಕೊರಿಂಥ 5:8). ಇದು ಕ್ರಿಸ್ತನ ವಾಗ್ದಾನದ ನೆರವೇರಿಕೆಯಾಗಿದೆ; "ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಕಂಡುಕೊಳ್ಳುವನು" (ಮತ್ತಾಯ 10:39). ಪ್ರಕಟನೆ 2:10 ಅದನ್ನು "ಜೀವವೆಂಬ ಜಯಮಾಲೆ" ಎಂದು ಕರೆಯುತ್ತದೆ. ಸಾಯಬೇಕಾದರೂ ನಂಬಿಗಸ್ತರಾಗಿರುವವರು ದೊಡ್ಡ "L" ಸಮೇತವಾದ "ಜೀವವನ್ನು" ಪಡೆಯುವರು. ಅವರು ಕೊನೆಗೂ ಜೀವವೆಂದರೆ ಏನೆಂಬುದನ್ನು ಅರಿತುಕೊಳ್ಳುವರು.

ಕರ್ತನ ಭಕ್ತರಾಗಿ ಸತ್ತವರಿಗೆ ತದ್ವಿರುದ್ಧವಾಗಿ, "ಮಿಕ್ಕ ಸತ್ತವರು ಆ ಸಾವಿರ ವರುಷ ತೀರುವ ತನಕ ಜೀವಿತರಾಗಿ ಏಳಲಿಲ್ಲ." **ಮಿಕ್ಕ ಸತ್ತವರು** ಎಂಬ ಪದಗುಚ್ಛದ ಅರ್ಥವು ಯೋಹಾನನು 4ನೇ ವಚನದಲ್ಲಿ ಯಾರನ್ನು ಕಂಡನು ಎಂಬುದರ ಮೇಲೆ ಆಧಾರವಾಗಿರುತ್ತದೆ. ಉದಾಹರಣೆಗೆ, ಯೋಹಾನನು 4ನೇ ವಚನದಲ್ಲಿ ಕೇವಲ ರಕ್ತಸಾಕ್ಷಿಗಳನ್ನು ಮಾತ್ರವೇ ಕಂಡಿರುವದಾದರೆ, "ಮಿಕ್ಕ ಸತ್ತವರು" ಎಂಬುದು "ಸ್ವಾಭಾವಿಕ" ರೀತಿಗಳಲ್ಲಿ ಮರಣಿಸಿದ್ದ ನಂಬಿಗಸ್ತ ಕ್ರೈಸ್ತರನ್ನು ಸೂಚಿಸುತ್ತಿರಬಹುದಾಗಿದೆ. ಇದು "ಜೀವಿತರಾಗಿ ಎದ್ದೇಳುವದನ್ನು" ("ಆಳ್ವಿಕೆ ಮಾಡುವದು" ಮತ್ತು "ನ್ಯಾಯತೀರಿಸುವದು" ಇವುಗಳ ಜೊತೆಯಲ್ಲಿ) ರಕ್ತಸಾಕ್ಷಿಗಳಾಗಿ ಸತ್ತವರಿಗಷ್ಟೇ ಅನುಗ್ರಹಿಸಲ್ಪಟ್ಟಿರುವ ವಿಶೇಷ ಆಶೀರ್ವಾದವನ್ನಾಗಿಸುತ್ತದೆ. ಈ ಮುಂಚೆ ಹೇಳಿದ ಪ್ರಕಾರ, **ಜೀವಿತವು** ಎಲ್ಲಾ ನಂಬಿಗಸ್ತರಿಗೆ ವಾಗ್ದಾನ ಮಾಡಲ್ಪಟ್ಟಿರುತ್ತದೆ.

ಸನ್ನಿವೇಶದಲ್ಲಿ, “ಮಿಕ್ಕ ಸತ್ತವರು” ಎಂಬದು “ಯೇಸುವಿನ ವಿಷಯವಾದ ಸಾಕ್ಷಿ ... ದೇವರ ವಾಕ್ಯ” ವನ್ನು ಹಿಡಿದುಕೊಂಡಿ*ರದವರನ್ನು,* “ಮೃಗಕ್ಕೂ ಅದರ ವಿಗ್ರಹಕ್ಕೂ ನಮಸ್ಕಾರ ಮಾಡಿ*ದವರನ್ನು*” ಮತ್ತು “ತಮ್ಮ ಹಣೆಯ ಮೇಲಾಗಲಿ ಕೈಗಳ ಮೇಲಾಗಲಿ [ಮೃಗದ] ಗುರುತನ್ನು” ಹಾಕಿಸಿಕೊಂಡ*ವರನ್ನು* (ವ. 4) ಸೂಚಿಸುತ್ತಿರಬಹುದಾಗಿದೆ. ಹಾಗಾದರೆ, “ಮಿಕ್ಕ ಸತ್ತವರು” ಎಂಬುವವರನ್ನು ಕರ್ತನ ಭಕ್ತರಾಗಿ ಸಾಯದವರು ಎಂಬುದಾಗಿ ಅರ್ಥಮಾಡಿಕೊಂಡರೆ ಉತ್ತಮವೆಂದು ತೋರುತ್ತದೆ.

NASBಯು “ಮಿಕ್ಕ ಸತ್ತವರು ಆ ಸಾವಿರ ವರುಷ ತೀರುವ ತನಕ *ಜೀವಿತರಾಗಿ ಏಳಲಿಲ್ಲ*” ಎಂದು ತಿಳಿಸುತ್ತದೆ (ಒತ್ತಿ ಹೇಳಿದ್ದು ನನ್ನದು). ಪದವಿನ್ಯಾಸದ ಕಾರಣದಿಂದ ಅನೇಕರು ಈ “ಜೀವಿತರಾಗಿ ಏಳುವದನ್ನು” ಒಂದು ದೈಹಿಕ ಪುನರುತ್ಥಾನ ಎಂಬುದಾಗಿ ಅರ್ಥನಿರೂಪಣೆ ಮಾಡುತ್ತಾರೆ. ಕೆಲವೊಂದು ತರ್ಜುಮೆಗಳು “ತಿರುಗಿ” ಎಂಬ ಪದವನ್ನು ಸಹ ಸೇರ್ಪಡೆಗೊಳಿಸುತ್ತವೆ, ಅದು ಇನ್ನಷ್ಟು ಅಧಿಕ ಗೊಂದಲವನ್ನುಂಟು ಮಾಡುತ್ತದೆ - ಆದರೆ “ತಿರುಗಿ” ಎಂಬ ಪದವು ಗ್ರೀಕ್ ವಾಕ್ಯದಲ್ಲಿ ಕಂಡು ಬರುವದಿಲ್ಲ. KJVಯಲ್ಲಿ 5ನೇ ವಚನದೊಳಗೆ “ಬದುಕಲಿಲ್ಲ” ಎಂದಿರುವದು ಸರಿಯಾಗಿಯೇ ಇರುತ್ತದೆ, ಆದರೆ ವಿಷಾದಕರವಾಗಿ “ತಿರುಗಿ” ಎಂಬ ಪದವನ್ನು ಸೇರ್ಪಡೆಗೊಳಿಸುತ್ತದೆ. ಮೂಲ ವಾಕ್ಯವು ಹೇಳುವದೇನೆಂದರೆ “ಮಿಕ್ಕ ಸತ್ತವರು ಸಾವಿರ ವರುಷಗಳು ಪೂರ್ತಿಯಾಗುವ ತನಕ *ಜೀವಿತ*ರಾಗಲಿಲ್ಲ” ಎಂಬದೆ. ಸರಳವಾಗಿ ಹೇಳುವದಾದರೆ, “ಕ್ರಿಸ್ತನ ಭಕ್ತರಾಗಿ” ಸತ್ತವರು ಅನುಭವಿಸಿದ ಆತ್ಮೀಕ ಆಶೀರ್ವಾದಗಳನ್ನು ಇವರು ಅನುಭವಿಸಲಿಲ್ಲ. ಮತ್ತೊಂದಾವರ್ತಿ, ಪವಿತ್ರಾತ್ಮನು ಒಂದು ವಿರುದ್ಧ ಹೋಲಿಕೆಯನ್ನು ಮಾಡುತ್ತಿದ್ದಾನೆ: ಭೂಮಿಯ ಮೇಲೆ, ಕ್ರೈಸ್ತರನ್ನು ಮರಣಕ್ಕೊಳಪಡಿಸಿದರೆ ಅವರ ಹಿಂಸಕರು ಜೀವಿಸುತ್ತಿದ್ದರು; ಮರಣದ ಬಳಿಕ, ಜೀವಿಸುತ್ತಿದ್ದವರು, ನಿಜವಾಗಿಯೂ ಜೀವಿಸುತ್ತಿದ್ದವರು ಕ್ರೈಸ್ತರೇ ಆಗಿದ್ದರೆ, ಅವರ ವೈರಿಗಳು ಸತ್ತಿದ್ದರು, ಸತ್ತಿದ್ದರು, ಸತ್ತೇ ಇದ್ದರು. 5ನೇ ವಚನದ ಸೂಚ್ಯಾರ್ಥವು ಏನೆಂದರೆ “ಮಿಕ್ಕ ಸತ್ತವರು” “ಸಾವಿರ ವರುಷಗಳು” ಪೂರ್ತಿಯಾಗುವಾಗ “ಜೀವಿತರಾಗಿ ಏಳುವದಿಲ್ಲ” ಅಥವಾ “ಜೀವ” ಪಡೆಯುವ*ದಿಲ್ಲ* ಎಂಬದೆ. ಕ್ರಿಸ್ತನು ಹಿಂದಿರುಗಿ ಬರುವ ವೇಳೆ, ದುಷ್ಟರು ಮರಣದಿಂದ ಜೀವಿತರಾಗಿ ಎಬ್ಬಿಸಲ್ಪಡುವರು. ಅವರು ನ್ಯಾಯತೀರ್ಪು ಹೊಂದುವದಕ್ಕೆ ದೇವರ ಮುಂದೆ ನಿಲ್ಲುವರು ಮತ್ತು ಬಳಿಕ “ಎರಡನೆಯ ಮರಣ”ಕ್ಕೆ ಗುರಿಪಡಿಸಲ್ಪಡುವರು (20:14). ಅವರು “ಜೀವಿತ” ಕಾಲಾವದಿಯು - ಅದು ಹಾಗೆ ಕರೆಯಲ್ಪಡಬಹುದಾದಲ್ಲಿ - ಬಹಳ ಕ್ಲುಪ್ತವಾಗಿರಲಿದೆ.

**ಸಾವಿರ ವರುಷ** ಎಂಬುದು ಸೈತಾನನು ಬಂಧನದಲ್ಲಿಡಲ್ಪಡುವ ಹಾಗೂ ಮರಣಿಸಿದ್ದ ಕ್ರೈಸ್ತರು ಜೀವಿತರಾಗಿ ಎದ್ದು ಆಳ್ವಿಕೆ ಮಾಡುವಂಥ ಕಾಲವಾಗಿದೆ - ಅದು ಈಗಲೇ ಆಗಿರುತ್ತದೆ. “ಸಾವಿರ ವರುಷ” ತೀರುವದರ ಕುರಿತ ಹೇಳಿಕೆಯು ಈ ಕಾರಣದಿಂದ ಈ ಯುಗಾಂತ್ಯವನ್ನು ಸೂಚಿಸತಕ್ಕದ್ದು - ಆಗ ಕ್ರಿಸ್ತನು ಹಿಂದಿರುಗಿ ಬರುವನು, ಸತ್ತವರು ಎಬ್ಬಿಸಲ್ಪಡುವರು, ಮತ್ತು ಎಲ್ಲರಿಗೂ ನ್ಯಾಯತೀರ್ಪು ಮಾಡಲ್ಪಡುದು. ಆ ನಾಟಕೀಯವಾದ ಘಟನಾವಳಿಯ ಕುರಿತು 20:11-15 ವಚನಗಳನ್ನು ಪರೀಕ್ಷಿಸುವ ವೇಳೆ ಚರ್ಚಿಸಲಾಗುವದು.

**ವಚನ 6.** ಈ ವಚನವು ಪುಸ್ತಕದಲ್ಲಿರುವ ಐದನೆಯ ಧನ್ಯನುಡಿಯೊಂದಿಗೆ ವಿಭಾಗವನ್ನು ಮುಕ್ತಾಯಗೊಳಿಸುತ್ತದೆ. ಅದು ಹೀಗೆ ಆರಂಭಗೊಳ್ಳುತ್ತದೆ, **ಪ್ರಥಮ ಪುನರುತ್ಥಾನದಲ್ಲಿ ಸೇರಿರುವವನು ಧನ್ಯನೂ ಪರಿಶುದ್ಧನೂ ಆಗಿದ್ದಾನೆ. ಇಂಥವರ ಮೇಲೆ ಎರಡನೆಯ ಮರಣಕ್ಕೆ ಅಧಿಕಾರವಿಲ್ಲ. ಎರಡನೆಯ ಮರಣ**ವು ಏನೆಂಬುದಾಗಿ 14ನೇ ವಚನದಲ್ಲಿ ಗುರುತಿಸಲ್ಪಟ್ಟಿದೆ: “ಆ ಬೆಂಕಿಯ ಕೆರೆಯೇ ಎರಡನೆಯ ಮರಣವು” - ಸರಳವಾಗಿ ಹೇಳುವದಾದರೆ ನರಕ. ತಾವು

ಮರಣಿಸುವ ವೇಳೆಯಲ್ಲಿ ಕರ್ತನಿಗೆ ನಂಬಿಗಸ್ತರಾಗಿರುವವರು ನಾಶನಕ್ಕೆ ಹೋಗುವದರ ಬಗ್ಗೆ ಚಿಂತಿಸಬೇಕಾಗಿಲ್ಲ. ಎಂಥ ಆಶೀರ್ವಾದ!

ಯೋಹಾನನು ಹೀಗೆ ಮುಕ್ತಾಯಗೊಳಿಸುತ್ತಾನೆ, **ಆದರೆ ಅವರು ದೇವರಿಗೂ ಕ್ರಿಸ್ತನಿಗೂ ಯಾಜಕರಾಗಿ ಕ್ರಿಸ್ತನೊಂದಿಗೆ ಆ ಸಾವಿರ ವರುಷ ಆಳುವರು.** *ಎಲ್ಲಾ* ಕ್ರೈಸ್ತರು ಯಾಜಕರು ಎಂಬುದಾಗಿ ಹೊಸ ಒಡಂಬಡಿಕೆಯು ಕಲಿಸುತ್ತದೆ (1 ಪೇತ್ರ 2:5, 9; ಪ್ರಕಟನೆ 1:6; 5:10). ಪುನಃ ನಮಗೆ ಇಲ್ಲಿ ಮರಣವು ಕ್ರೈಸ್ತರನ್ನು ದೇವರಿಂದ ಅಗಲಿಸುವದಿಲ್ಲ, ಅವರು ಯಾರು ಹಾಗೂ ಏನಾಗಿದ್ದಾರೆಂಬುದನ್ನು ಅನುರ್ಜಿತಗೊಳಿಸುವದಿಲ್ಲ, ಮತ್ತು ಆಶೀರ್ವಾದಗಳು ಅಂತ್ಯಗೊಂಡಿವೆ ಎಂಬರ್ಥವನ್ನು ಕೊಡುವದಿಲ್ಲ ಎಂಬುದಕ್ಕೆ ದೃಢವಾದ ನಿಶ್ಚಯವನ್ನು ಕೊಡಲ್ಪಟ್ಟಿರುತ್ತದೆ. ಬದಲಾಗಿ, ಆ ಆಶೀರ್ವಾದಗಳು ಇನ್ನಷ್ಟು ಮನೋಹರವೂ ಅತ್ಯದ್ಭುತವೂ ಆಗಿ ಮಾರ್ಪಡುವವು.

## ಬೆಂಕಿಯ ಕೆರೆ (20:7-10)

**7ಆ ಸಾವಿರ ವರುಷಗಳು ತೀರಿದ ಮೇಲೆ ಸೈತಾನನಿಗೆ ಸೆರೆಯಿಂದ ಬಿಡುಗಡೆಯಾಗುವದು.**
**8ಅವನು ಹೊರಗೆ ಬಂದು ಭೂಮಿಯ ನಾಲ್ಕು ದಿಕ್ಕುಗಳಲ್ಲಿರುವ ಗೋಗ್ ಮಾಗೋಗ್ ಎಂಬ**
**ಜನಾಂಗಗಳನ್ನು ಮರುಳುಗೊಳಿಸಿ ಅವರನ್ನು ಯುದ್ಧಕ್ಕೆ ಕೂಡಿಸುವನು; ಅವರ ಸಂಖ್ಯೆಯು**
**ಸಮುದ್ರದ ಮರಳಿನಷ್ಟಿರುವದು. 9ಅವರು ದೇಶದಲ್ಲೆಲ್ಲಾ ಹರಡಿಕೊಂಡು ದೇವಜನರ ದಂಡಿಗೂ**
**ನಮ್ಮ ಪ್ರಿಯ ಪಟ್ಟಣಕ್ಕೂ ಮುತ್ತಿಗೆಹಾಕಿದರು. ಆಗ ಪರಲೋಕದಿಂದ ಬೆಂಕಿ ಇಳಿದು ಬಂದು**
**ಅವರನ್ನು ದಹಿಸಿಬಿಟ್ಟಿತು. 10ಇದಲ್ಲದೆ ಅವರನ್ನು ಮರುಳುಗೊಳಿಸಿದ ಸೈತಾನನು ಬೆಂಕಿ**
**ಗಂಧಕಗಳುರಿಯುವ ಕೆರೆಯಲ್ಲಿ ದೊಬ್ಬಲ್ಪಟ್ಟನು. ಅಲ್ಲಿ ಮೃಗವೂ ಸುಳ್ಳು ಪ್ರವಾದಿಯೂ ಕೂಡ**
**ಇದ್ದಾರೆ; ಅವರು ಹಗಲಿರುಳು ಯುಗಯುಗಾಂತರಗಳಲ್ಲಿಯೂ ಯಾತನೆಪಡುತ್ತಿರುವರು.**

ಬಹಳ ಕಾಲದ ಹಿಂದೆ, ಸೈತಾನನ ಅಂತ್ಯಾವಸ್ಥೆಯು ನಿಷ್ಕರ್ಷಿಸಲ್ಪಟ್ಟಿತ್ತು. ನ್ಯಾಯತೀರ್ಪಿನ ದಿನದಲ್ಲಿ, ಸಿಂಹಾಸನದ ಮೇಲಿರುವಾತನು ತನ್ನ ಎಡಗಡೆಯಲ್ಲಿರುವವರಿಗೆ "ಶಾಪಗ್ರಸ್ತರೇ, ನನ್ನನ್ನು ಬಿಟ್ಟು *ಪಿಶಾಚನಿಗೂ ಅವನ ದೂತರಿಗೂ* ಸಿದ್ಧಮಾಡಿರುವ ನಿತ್ಯ ಬೆಂಕಿಯೊಳಕ್ಕೆ ಹೋಗಿರಿ" ಎಂದು ಹೇಳುವನು (ಮತ್ತಾಯ 25:41; ಒತ್ತಿ ಹೇಳಿದ್ದು ನನ್ನದು). ಪರಲೋಕವು ಸಹ ಹೇಗೆ ಒಂದು ಸಿದ್ಧಪಡಿಸಲ್ಪಟ್ಟಿರುವ ಸ್ಥಳವಾಗಿದೆಯೋ (ಯೋಹಾನ 14:1–3) ಹಾಗೆಯೇ, ನರಕವು ಒಂದು ಸಿದ್ಧಪಡಿಸಲ್ಪಟ್ಟಿರುವ ಸ್ಥಳವಾಗಿದೆ - ಮೂಲತಃ ಸೈತಾನನಿಗೋಸ್ಕರ ಸಿದ್ಧಪಡಿಸಿರುವ ಸ್ಥಳವಾಗಿದೆ.

ಪ್ರಕಟನೆ 20ನೇ ಅಧ್ಯಾಯವು ಸೈತಾನನು ಆ ಸ್ಥಳದಲ್ಲಿ ಹಾಕಲ್ಪಡುವದರ ಕುರಿತಾಗಿರುತ್ತದೆ. ಪುಸ್ತಕದೊಳಗೆ ಈ ಮುಂಚೆ ಆತನ ಬಂಟರು ಬೀಳಲ್ಪಟ್ಟರು, ಆದರೆ ಅದರಿಂದ ಕೆಟ್ಟತನವು ನಿರ್ಮೂಲನೆಗೊಳ್ಳಲಿಲ್ಲ. ಕೆಟ್ಟತನದ ಉತ್ಪತ್ತಿಸ್ಥಾನವು ನಾಶಗೊಳಿಸಲ್ಪಡುವ ತನಕ ಕೆಟ್ಟತನದ ಮೇಲೆ ಸಂಪೂರ್ಣ ಜಯವು ಸಿಕ್ಕುವದಕ್ಕೆ ಸಾಧ್ಯವಿಲ್ಲ. ಒಬ್ಬ ವ್ಯಕ್ತಿಯು ದಿನವೆಲ್ಲಾ ಜೇಡದ ಬಲೆಗಳನ್ನು ಗುಡಿಸುತ್ತಲೇ ಇರಬಹುದು; ಆದರೆ ಜೇಡ ಹುಳುವನ್ನು ಕೊಲ್ಲುವ ಹೊರತು, ಹೆಚ್ಚೆಚ್ಚು ಜೇಡರ ಬಲೆಗಳು ಆತನಿಗೆ ಬರುತ್ತಲೇ ಇರುವವು.

**ವಚನ 7.** 1ರಿಂದ 3 ವಚನಗಳಲ್ಲಿ, ಸೈತಾನನು ಬಂಧನದಲ್ಲಿಡಲ್ಪಟ್ಟನು. 7ನೇ ವಚನವು ಹೀಗೆ ಹೇಳುತ್ತದೆ, **ಆ ಸಾವಿರ ವರುಷಗಳು ತೀರಿದ ಮೇಲೆ ಸೈತಾನನಿಗೆ ಸೆರೆಯಿಂದ ಬಿಡುಗಡೆಯಾಗುವದು.** ಸೈತಾನನು ಜೈಲಿನಿಂದ ತಪ್ಪಿಸಿಕೊಂಡು ಹೋಗುವದಿಲ್ಲ, ಆದರೆ

ಕರ್ತನು ಅವನಿಗೆ ಪರೋಲ್ ಮೇಲೆ ಬಿಡುಗಡೆಗೊಳಿಸುತ್ತಾನೆ. ಈ ಅಸಾಮಾನ್ಯವಾದ ಹೇಳಿಕೆಯು ಗೊಂದಲಕರವಾದ ಪ್ರಶ್ನೆಗಳ ಪ್ರವಾಹವನ್ನೇ ಉಂಟು ಮಾಡಿರುತ್ತದೆ, ಮತ್ತು ಇದಕ್ಕಿಂತಲೂ ಅಧಿಕವಾಗಿ ಬೇರೆ ಯಾವ ಪ್ರಶ್ನೆಯು ತಬ್ಬಿಬ್ಬುಗೊಳಿಸುವದಿಲ್ಲ: *"ಏಕೆ?"* ಮತ್ತೊಂದಾವರ್ತಿ ಪ್ರಕಟನೆ ಪುಸ್ತಕವು ಅಲಕ್ಷ್ಯ ಮಾಡಕೂಡದ ಒಂದು ಸತ್ಯವನ್ನು ಘೋಷಿಸುತ್ತದೆ - ಏನೇ ಸಂಭವಿಸಿದರೂ ಸರಿಯೇ, *ದೇವರು ಅಧಿಕಾರದಲ್ಲಿದ್ದಾನೆ.* ಸ್ಪಷ್ಟವಾಗಿರುವಂತೆ, ಯಾವದೋ ಒಂದು ದೈವಿಕ ಉದ್ದೇಶವು ಜರುಗಿಸಲ್ಪಡಬೇಕಾಗಿತ್ತು - ಆದರೆ ಅದು ಏನಾಗಿರುವ ಸಾಧ್ಯತೆಯಿದೆ?

ಬಹುಪಾಲು ವ್ಯಾಖ್ಯಾನಕಾರರು ಒಮ್ಮತವನ್ನು ವ್ಯಕ್ತಪಡಿಸುವ ಕೆಲವೇ ವಾಕ್ಯಭಾಗಗಳು ಪ್ರಕಟನೆ ಪುಸ್ತಕದಲ್ಲಿರುತ್ತವೆ, ಆದರೆ ಇದು ಅವುಗಳೊಳಗೆ ಒಂದಾಗಿದೆ. ಈ "ಏಕೆ?" ಎಂಬ ಪ್ರಶ್ನೆಗೆ ಹೆಚ್ಚುಕಡಿಮೆ ಜಾಗತಿಕವಾದ ಉತ್ತರವು *"ನಮಗೆ ಗೊತ್ತಿಲ್ಲ"* ಎಂದಾಗಿದೆ. Donald Guthrieನು ಹೀಗೆ ಬರೆದನು, "ಈ ಕ್ಲುಪ್ತವಾಗಿ ಬಿಡುಗಡೆಗೊಳಿಸಲ್ಪಡುವದು ನಿಗೂಢತೆಗಳಿಂದ ತುಂಬಿರುವಂಥ ಪುಸ್ತಕವೊಂದರಲ್ಲಿರುವಂಥ ಅತ್ಯಂಥ ನಿಗೂಢವಾದ ಘಟನೆಗಳಲ್ಲಿ ಒಂದಾಗಿದೆ."[26] Frank Packನು ಗಮನಕ್ಕೆ ತರುವದೇನೆಂದರೆ, "[ಸೈತಾನನು] ಏಕಾದರೂ 'ಸ್ವಲ್ಪ ಕಾಲ' ಬಿಡುಗಡೆಗೊಳಿಸಲ್ಪಡಬೇಕು ಎಂಬುದೇ ಎಲ್ಲಾ ವ್ಯಾಖ್ಯಾನಕಾರರಿಗೂ ಒಂದು ಮರ್ಮವಾಗಿರುತ್ತದೆ."[27] ಕೆಲವೊಂದಿಷ್ಟು ಲೇಖಕರು ಬಿಡುಗಡೆಯ ಕುರಿತು ಊಹಾಪೋಹಗಳನ್ನು ಮಾಡುತ್ತಾರೆ; ಇನ್ನು ಕೆಲವರು "ನಾವು ಕಾದು ನೋಡಬೇಕಾಗುವದು" ಎನ್ನುತ್ತಾರೆ ಆದರೆ ಬಹಳಷ್ಟು ಮಂದಿ, ಒಂದಿಲ್ಲಾ ಒಂದು ವಿಧದಲ್ಲಿ ಹೇಳುವದೇನೆಂದರೆ, "ನಮಗೆ ಖಚಿತವಾಗಿ ತಿಳಿಯದು" ಎಂಬದೆ. ಪ್ರಕಟನೆ ಪುಸ್ತಕವನ್ನು ಅರ್ಥೈಸುವದಕ್ಕೆ ಯಾವ ದಾರಿಯನ್ನು ಅನುಸರಿಸಿದರೂ ಈ ಅನಿಶ್ಚಿತತೆಯಂತೂ ಸತ್ಯವಾಗಿರುತ್ತದೆ.

ಊಹಾಪೋಹಗಳಲ್ಲಿ ಆಸಕ್ತಿಯಿರುವವರಿಗಾದರೋ, ಸೈತಾನನ ಬಿಡುಗಡೆ ಕುರಿತಾದ ಊಹೆಗಳಿಗೊಂದು ಉದಾಹರಣೆಯು ಇಲ್ಲಿದೆ: *ಬಹುಶಃ* ಯೋಬನನ್ನು ಪರೀಕ್ಷಿಸಿದ ರೀತಿಯಲ್ಲಿ (ಯೋಬನು 1; 2) ಮತ್ತು ಸೈತಾನನು ಪೇತ್ರನನ್ನು ಪರೀಕ್ಷಿಸುವದಕ್ಕೆ ಬಯಸಿದ ರೀತಿಯಲ್ಲಿ (ಲೂಕ 22:31) ಮಾನವರನ್ನು ಪರೀಕ್ಷಿಸುವದಕ್ಕಾಗಿ ದೇವರು ಸೈತಾನನನ್ನು ಬಿಡುಗಡೆಗೊಳಿಸಬಹುದು. *ಬಹುಶಃ* ಈ ಬಿಡುಗಡೆಯು ಯೇಸು ಬರುವಾಗ, ಭೂಮಿಯ ಮೇಲೆ ನಂಬಿಕೆಯನ್ನು ಕಾಣುವದಕ್ಕೆ ಕಷ್ಟಕರವಾಗಿರುವದು (ಲೂಕ 18:8) ಏಕೆಂಬುದನ್ನು ವಿವರಿಸುವದಕ್ಕಾಗಿ ಇರಬಹುದು. 13ನೇ ಅಧ್ಯಾಯದಲ್ಲಿ ಎರಡು ಮೃಗಗಳ ಕುರಿತು ಅಧ್ಯಯನ ಮಾಡುತ್ತಿರುವ ವೇಳೆ, ಸೈತಾನನು "ದೇವತ್ವ," "ಪುನರುತ್ಥಾನ," ಮತ್ತು ಇತ್ಯಾದಿಗಳ ಅನುಕರಣೆಗಳನ್ನು ಹೊಂದಿರುತ್ತಾನೆಂಬುದಾಗಿ ಹೇಳಲಾಯಿತು. ಸೈತಾನನು ಇತರ ದೈವಿಕ ಗುಣಗಳನ್ನು ಅನುಕರಣೆ ಮಾಡಿದ್ದಾನಾದ್ದರಿಂದ, *ಬಹುಶಃ* ಈ ಬಿಡುಗಡೆಯು ಎರಡನೆಯ ಬರೋಣದ ಕುರಿತು ಕೀಳುಮಟ್ಟದ ಅನುಕರಣೆ ಮಾಡುವದಕ್ಕೆ ಸೈತಾನನಿಗೆ ದೊರೆತ ಸದವಕಾಶವಾಗಿರಬಹುದು - ಅದರ ಹಾಸ್ಯಸ್ಪದತನವನ್ನು ತೋರ್ಪಡಿಸುವದಕ್ಕೆ ದೇವರಿಂದ ಅನುಮತಿಸಲ್ಪಟ್ಟದ್ದಾಗಿರಬಹುದು. *ಬಹುಶಃ* ಈ ಬಿಡುಗಡೆಯ ಉಲ್ಲೇಖವು ಮೈಮರೆತು ಹೋಗದಂತೆ ಕ್ರೈಸ್ತರಿಗೆ ಎಚ್ಚರಿಸುವದಾಗಿರಬಹುದಾಗಿದೆ (1 ಪೇತ್ರ 5:8). *ಬಹುಶಃ* ದೇವರು ಸೈತಾನನನ್ನು ಬಿಡುಗಡೆಗೊಳಿಸಿ ದೇವರನ್ನು ಎದುರಿಸಲೇ ಬೇಕಾದಾಗ ಸೈತಾನನಿಗೆ ಅಂತರ್ಗತವಾಗಿರುವ ಬಲಹೀನತೆಯನ್ನು ಬಯಲುಗೊಳಿಸುವ ಉದ್ದೇಶದಿಂದ ಆತನಿಗೆ ಸಾಧ್ಯವಾದ ಘೋರವಾದದ್ದನ್ನು ಮಾಡುವಂತೆ ಸವಾಲು ಹಾಕುವನು ಎಂದು ತೋರುತ್ತದೆ. ಈ ಅಭಿಪ್ರಾಯಗಳೊಳಗೆ ಕೆಲವೊಂದು ಅಸಂಭವನೀಯವೆಂದು ಕಾಣಿಸಿದರೆ, ಇನ್ನು ಕೆಲವು ಸ್ವಲ್ಪ

ಮಟ್ಟಿಗೆ ಸಂಭಾವ್ಯತೆಯನ್ನು ಹೊಂದಿವೆ; ಆದರೆ ಎಲ್ಲವೂ ಊಹೆಗಳ ವರ್ಗದಲ್ಲಿಯೇ ಇರುತ್ತವೆ.

ಮೇಲಿನ ಬಹುತೇಕ ಊಹೆಗಳು ಸೈತಾನನ ಬಿಡುಗಡೆಯು ಕ್ರಿಸ್ತನ ಬರೋಣಕ್ಕೆ ಸ್ವಲ್ಪ ಕಾಲ ಮುಂಚೆ ಸಂಭವಿಸುತ್ತದೆಂಬ ಭಾವಿಸುವಿಕೆಯ ಮೇಲೆ ಆಧಾರವಾಗಿರುತ್ತವೆ. ಜನರು ಈ ವಾಕ್ಯಭಾಗದ *ಜರುಗುವ ಕಾಲ*ದ ಕುರಿತು ತಪ್ಪಾದ ವಿಧದಲ್ಲಿ ನೋಡುತ್ತಿದ್ದಾರೆಂಬುದು ಈ ಸಮಸ್ಯೆಯ ಭಾಗವಾಗಿರುವದ ಸಾಧ್ಯತೆಯಿರುತ್ತದೋ?

ಈ ಬಿಡುಗಡೆಗೊಳಿಸಲ್ಪಡುವಿಕೆ ಕುರಿತಾಗಿ ವಾಚಕನಿಗೆ ಇರುವ ಒಂದು ದೊಡ್ಡ ಸಮಸ್ಯೆಯು ಈ "ಸ್ವಲ್ಪ ಕಾಲ"ವು (ವ. 3) "ಸಾವಿರ ವರುಷಗಳಾದ" *ಮೇಲೆ* ಬರುತ್ತದೆ ಎಂಬುದೇ: ಸೈತಾನನು ಒಂದು ಸಾವಿರ ವರುಷಗಳ ಕಾಲ ಬಂಧನದಲ್ಲಿಡಲ್ಪಟ್ಟರೆ, ಅದೇ ವೇಳೆಯಲ್ಲಿ ರಕ್ತಸಾಕ್ಷಿಗಳಾಗಿ ಸತ್ತ ದೇವಜನರು ಆಳ್ವಿಕೆ ಮಾಡುತ್ತಿರುತ್ತಾರೆ. ಬಳಿಕ, ಎಲ್ಲವೂ ಸುಗಮವಾಗಿ ಸಾಗುತ್ತಿದೆ ಅಂದುಕೊಳ್ಳುವಾಗಲೇ, ಏಕಾಏಕಿ ಸೈತಾನನು ಸ್ವತಂತ್ರನಾಗಿದ್ದಾನೆ, ಯಥಾಃರೀತಿಯಂತೆ ತನ್ನ ಕೆಟ್ಟ ತಂಟೆಯನ್ನು ಉಂಟು ಮಾಡುತ್ತಿದ್ದಾನೆ. ಬಿಡುಗಡೆಗೊಳಿಸಲ್ಪಡುವ *ಕಾಲ* ಗೊಂದಲಕರವಾಗಿದೆ.

ಬಹುಶಃ ವಾಕ್ಯಭಾಗವು ನೋಡಲ್ಪಡುವ ಕಾಲದ ದೃಷ್ಟಿಕೋನವನ್ನು ಸರಿಹೊಂದಿಸಿಕೊಳ್ಳುವ ಅಗತ್ಯವೊಂದು ಇರುತ್ತದೆ ನಾವು ಸಾಂಕೇತಿಕ ಭಾಷೆಯನ್ನು ಬಳಸುವ ದರ್ಶನವೊಂದನ್ನು ನೋಡುತ್ತಿದ್ದೇವೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಅಂತಹ ಒಂದು ಹಿನ್ನಲೆಯಲ್ಲಿ, ನಾವು ಒಂದು ದೀರ್ಘಕಾಲದ ಬಳಿಕ ಬರುವಂಥ ಒಂದು ಅಕ್ಷರಶಃ ಸ್ವಲ್ಪ ಕಾಲ ಎಂದು ಯೋಚಿಸಬೇಕೋ? "ಸಾವಿರ ವರುಷ" ಎಂಬುದು ಒಂದು ಕಾಲಾವದಿ ಎಂಬುದಕ್ಕಿಂತಲೂ ಅಧಿಕವಾಗಿ ಒಂದು *ಭಾವನೆ* ಆಗಿದೆ ಎಂಬುದನ್ನು ಒತ್ತಿ ಹೇಳಿದೆವು. ವಿಷಯವು ಹೀಗಿರುವಾಗ, ಬಹುಶಃ ನಾವು "ಸ್ವಲ್ಪಕಾಲ" ಎಂಬುದನ್ನು ಒಂದು ನಿರ್ದಿಷ್ಟವಾದ ಕಾಲಾವದಿ ಎಂದು ಯೋಚಿಸಬಾರದೆಂದು ತೋರುತ್ತದೆ (ವ. 3ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಬದಲಾಗಿ, ಚಿತ್ರಣದ ಉದ್ದೇಶವು ಇಂದು *ಭಾವನೆ*ಯನ್ನು ತಿಳಿಯಪಡಿಸುವದಾಗಿರಬಹುದು. ಯಾವ ಭಾವನೆ? ಕೆಲವೊಂದು ಸಂಭಾವ್ಯತೆಗಳು ಇಲ್ಲಿವೆ:

3ನೇ ವಚನದ ವ್ಯಾಖ್ಯೆಗಳಲ್ಲಿ ಸೂಚಿಸಿರುವ ಪ್ರಕಾರ, "ಸ್ವಲ್ಪಕಾಲ" ಎಂಬ ಪದಗುಚ್ಛವು "ಸಾವಿರ ವರುಷ" ಎಂಬುದರೊಂದಿಗೆ ವಿರುದ್ಧ ಹೋಲಿಕೆ ಮಾಡುವ ಉದ್ದೇಶದಿಂದ ಬಳಸಲ್ಪಟ್ಟಿರಬಹುದು: ಸೈತಾನನ "ಬಂಧನದಲ್ಲಿಡಲ್ಪಟ್ಟ" ಕಾಲಕ್ಕೆ ಹೋಲಿಸಿದರೆ ಆತನ ಬಿಡುಗಡೆಯು ಕ್ಲುಪ್ತ ಹಾಗೂ ಮಹತ್ವವಿಲ್ಲದ್ದು ಆಗಿತ್ತು. ಸೈತಾನನು ಯಾವಾಗಲೂ ದೈವಿಕ ಕಟ್ಟಳೆಯಿಂದ ಮಿತಿಗೊಳಪಡಿಸಲ್ಪಟ್ಟಿರುತ್ತಾನೆ; ಆತನು ಮಾಡುವದೆಲ್ಲವೂ ದೇವರ ನಿಯಂತ್ರಣದಲ್ಲಿರುತ್ತದೆ.

"ಸ್ವಲ್ಪಕಾಲ" ಎಂಬ ಪದಗುಚ್ಛದ ಅರ್ಥವು ಮೂಲಭೂತವಾಗಿ 12:12ರಲ್ಲಿ ಬಳಸಲ್ಪಟ್ಟಾಗ ಇದ್ದಂತೆಯೇ ಇಲ್ಲಿಯೂ ಇರಬಹುದಾಗಿದೆ; "... ಸೈತಾನನು ತನಗಿರುವ ಕಾಲವು ಸ್ವಲ್ಪವೆಂದು ತಿಳಿದು ಮಹಾ ರೌದ್ರವುಳ್ಳವನಾಗಿ ನಿಮ್ಮ ಕಡೆಗೆ ಇಳಿದುಬಂದಿದ್ದಾನೆ ..." ಈ ಮಾತುಗಳು ಸೈತಾನನ ದಿನಗಳ ಲೆಕ್ಕಿಸಲ್ಪಟ್ಟಿವೆ - ಮತ್ತು ಅದು ಆತನಿಗೆ ಗೊತ್ತಿದೆ - ಎಂಬ ಅರ್ಥವನ್ನು ಕೊಡುತ್ತವೆ. 12ನೇ ಅಧ್ಯಾಯವು ಸೈತಾನನನ್ನು ಸೋಲಿಸಲ್ಪಟ್ಟಿರುವ ವೈರಿ ಎಂಬುದಾಗಿ ಚಿತ್ರಿಸಿತು; 20ನೇ ಅಧ್ಯಾಯವು ಆತನನ್ನು ಬಂಧನದಲ್ಲಿರುವ ವೈರಿಯಾಗಿ ಚಿತ್ರಿಸುತ್ತದೆ. ಎರಡೂ ಪ್ರಕರಣಗಳಲ್ಲಿ, ಆತನು ತನಗೆ ಉಳಿದಿರುವ "ಸ್ವಲ್ಪಕಾಲ"ದಲ್ಲಿ ಸಾಧ್ಯವಾದಷ್ಟು ಹೆಚ್ಚು ಹಾನಿಯನ್ನುಂಟು ಮಾಡುವ ಇಂಗಿತವುಳ್ಳವನಾಗಿದ್ದಾನೆಂಬುದು ಕಂಡು ಬರುತ್ತದೆ.

ಬಹುಶಃ "ಸ್ವಲ್ಪಕಾಲ" ಎಂಬ ಪದವು ಸೈತಾನನ ಮಿತಿಗಳು ಕ್ಷಣ ಕಾಲ ಪರಿಸ್ಥಿತಿಗಳ

ಮೂಲಕವಾಗಿ ರದ್ದುಗೊಳಿಸಲ್ಪಡುವಂಥ ಸಂದರ್ಭಗಳು ಉದ್ಭವವಾಗುವವೆಂಬುದನ್ನು ಸೂಚಿಸುತ್ತದೆ. ಈ ಮುಂಚೆ ಸೈತಾನನು ಶಿಲುಬೆ ಹಾಗೂ ಸುವಾರ್ತೆಗಳಿಂದ ಕಟ್ಟಿ ಹಾಕಲ್ಪಟ್ಟಿದ್ದಾನೆಂಬುದನ್ನು ಗಮನಿಸಲಾಯಿತು. ಜನರು ಶಿಲುಬೆಯ ಕುರಿತು ಸಾರಲ್ಪಡುವದನ್ನು ಕೇಳಿರದಂಥ, ಸುವಾರ್ತೆಯು ಸಾರಲ್ಪಡದೆ ಇರುವ ಸ್ಥಳಗಳ ವಿಷಯವೇನು? ದುಃಖಕರವಾಗಿ, ಅಂಥ ಪರಿಸ್ಥಿತಿಗಳು ಲೋಕದಲ್ಲಿ ಹಿಂದೆ ಅಸ್ತಿತ್ವದಲ್ಲಿದ್ದವು, ಅಸ್ತಿತ್ವದಲ್ಲಿದ್ದಾವೆ, ಮತ್ತು ಅಸ್ತಿತ್ವದಲ್ಲಿರುವವು. ವಿಷಯವು ಹಾಗಿರುವಾಗ, ಸೈತಾನನು ಜನರ ಹೃದಯಗಳು ಹಾಗೂ ಜೀವಿತಗಳ ಮೇಲೆ ನಿರ್ಬಂಧಗಳಿಲ್ಲದ ನಿಯಂತ್ರಣವನ್ನು ಹೊಂದಿರುತ್ತಾನೆ.

ಬಹುಶಃ "ಸ್ವಲ್ಪಕಾಲ" ಎಂಬ ಭಾವನೆಯು ಏನನ್ನು ತಿಳಿಸುವ ಇಂಗಿತವನ್ನು ಹೊಂದಿತ್ತೋ ಅದರ ವಿಷಯದಲ್ಲಿ ಆಳವಾಗಿ ಯೋಚಿಸುವಂತೆ ಕಿಡಿಯನ್ನು ಹೊತ್ತಿಸುವದಕ್ಕೆ ಈ ವಿಚಾರಗಳು ಸಾಕಾಗಿರಬಹುದು.

"ಯಾವಾಗ" ಎಂಬ ವಿಷಯವನ್ನು ಬಿಟ್ಟು ಮುಂದಕ್ಕೆ ಹೋಗುವ ಮುನ್ನ, ಒಂದು ಕಡೇ ಸಾಧ್ಯತೆಯನ್ನು ಪ್ರಸ್ತಾಪಿಸಲೇ ಬೇಕು: 5 ಮತ್ತು 7 ವಚನಗಳೆರಡೂ "ಸಾವಿರ ವರುಷ" ಎಂಬುದನ್ನು "ತೀರಿದ ಮೇಲೆ" ಎಂದು ಸೂಚಿಸುತ್ತವೆಂಬುದನ್ನು ಗಮನಿಸಿರಿ. ಈ ಪದಗುಚ್ಛವು ಆಂಗ್ಲ ಮತ್ತು ಗ್ರೀಕ್ ಭಾಷೆಯಲ್ಲಿ ಒಂದೇ ಆಗಿರುತ್ತದೆ. 5ನೇ ವಚನದ ವಿಷಯದಲ್ಲಿ, "'ಸಾವಿರ ವರುಷ' 'ತೀರುವ' ಕುರಿತಾದ ಹೇಳಿಕೆಯು ... ಯುಗಾಂತ್ಯವನ್ನು ಸೂಚಿಸತಕ್ಕದ್ದು - ಆಗ ಕ್ರಿಸ್ತನು ಹಿಂದಿರುಗಿ ಬರುವನು, ಸತ್ತವರು ಪುನರುತ್ಥಾನಗೊಳ್ಳುವರು, ಮತ್ತು ಎಲ್ಲರಿಗೂ ನ್ಯಾಯತೀರ್ಪು ಆಗುವದು" ಎಂದು ಅಭಿಪ್ರಾಯವನ್ನು ತಿಳಿಸಲಾಗಿರುತ್ತದೆ. ಪದಗುಚ್ಛವು 5ನೇ ವಚನದಲ್ಲಿ ಆ ಅರ್ಥವನ್ನು ಹೊಂದಿರುವದಾದರೆ, ಅದು 7ನೇ ವಚನದಲ್ಲಿ ಸಹ ಅದೇ ಅರ್ಥವನ್ನು ಕೊಡಬಹುದಾಗಿದೆ. ಅದು ಹಾಗೆಯೇ ಇರುವದಾದಲ್ಲಿ, "ಸ್ವಲ್ಪಕಾಲ" ಎಂಬುದು ಕ್ರಿಸ್ತನ ಪುನರಾಗಮನದ ಮುಂಚಿನ ಒಂದು ಕಾಲಾವದಿ ಮಾತ್ರವೇ ಆಗಿರುವದಿಲ್ಲ, ಆದರೆ ಆತನ ಪುನರಾಗಮನದ *ಸಂದರ್ಭದಲ್ಲಿ* ನಡೆಯುವ ಒಂದು ಕಣ್ಣುರೆಪ್ಪೆ ಬಡಿಯುವಿಕೆ ಆಗಿರುತ್ತದೆ. ಸರಳವಾಗಿ ಹೇಳುವದಾದರೆ, ಸೈತಾನನನ್ನು ನಾಶ ಮಾಡುವದಕ್ಕೋಸ್ಕರವೇ ಬಿಡುಗಡೆಗೊಳಿಸಲಾಗುತ್ತದೆ. ನಾವು ಇದರ ಕುರಿತು "ಸೈತಾನನಿಗೆ ನ್ಯಾಯತೀರ್ಪಾಗುವ ದಿನ" ಎಂದು ಯೋಚಿಸಬಹುದು.

ಈ ಅರ್ಥನಿರೂಪಣೆಗೆ ಇರುವ ಆಕ್ಷೇಪಣೆಯು ಏನೆಂದರೆ ಈ ದರ್ಶನದಲ್ಲಿ, ಸೈತಾನನು ಜನಾಂಗಗಳನ್ನು ಮರುಳುಗೊಳಿಸಿ ಭೂಮಿಯ ನಾಲ್ಕು ದಿಕ್ಕುಗಳಿಂದ ಸೇನೆಯನ್ನು ಒಟ್ಟುಗೂಡಿಸುತ್ತಿದ್ದರೆ ಸಮಯವು ಗತಿಸುತ್ತಿರುವಂತೆ ಕಾಣಿಸುತ್ತದೆ. ಹೇಗೂ, ಇದು ಸಾಂಕೇತಿಕವಾದದ್ದು ಮತ್ತು ಅಕ್ಷರಶಃವಾಗಿ ಅರ್ಥೈಸಿಕೊಳ್ಳಬಾರದು ಎಂಬುದನ್ನು ನಾವು ಜ್ಞಾಪಿಸಿಕೊಳ್ಳತಕ್ಕದ್ದು. ನಮಗೆ ತಿಳಿದಿರುವ ಪ್ರಕಾರ, ಇದರಲ್ಲಿ ಸಮಯದ ಪಾತ್ರವೇ ಇಲ್ಲದಿರಬಹುದಾಗಿದೆ. ಬಹುಶಃ ಸಾಂಕೇತಿಕತೆಯ ಉದ್ದೇಶವು "ಸಾವಿರ ವರುಷ" ಸಹ ಸೈತಾನನ್ನು ಮಾರ್ಪಡಿಸಿರುವದಿಲ್ಲ ಎಂಬುದನ್ನು (ಆತನು ವಂಚಕನಾಗಿಯೂ ದೇವರ ವೈರಿಯಾಗಿಯೂ ಉಳಿದುಕೊಳ್ಳುತ್ತಾನೆ), ಮತ್ತು ಆದದರಿಂದ ಅವನು ಬೆಂಕಿಯ ಕೆರೆಯೊಳಗೆ ಹಾಕಲ್ಪಡಲು ಯೋಗ್ಯನಾಗಿದ್ದಾನೆ ಎಂಬುದನ್ನು ತೋರ್ಪಡಿಸುವದಾಗಿರಬಹುದು.

"ಯಾವಾಗ?" ಎಂಬ ಪ್ರಶ್ನೆಯ ಕುರಿತಾಗಿ ಮೂರು ಸಾರಾಂಶದ ಹೇಳಿಕೆಗಳು ಇಲ್ಲಿವೆ: (1) "ಸ್ವಲ್ಪಕಾಲ" ಯಾವಾಗ ಸಂಭವಿಸುತ್ತದೆಂಬ ವಿಷಯದಲ್ಲಿ ಮುಂದಿಡಲಾಗಿರುವ ವಿವಿಧ ಸಂಭಾವ್ಯತೆಗಳನ್ನು ಗ್ರಹಿಸಿಕೊಂಡು ಜ್ಞಾಪಕದಲ್ಲಿಟ್ಟುಕೊಳ್ಳುವ ಅವಶ್ಯಕತೆಯು

ನಮಗಿರುವದಿಲ್ಲ. (2) ವಿವಿಧ ಸಾಧ್ಯತೆಗಳನ್ನು ಪಟ್ಟಿ ಮಾಡುವದರ ಒಂದು ಉದ್ದೇಶವು ಸೈತಾನನ "ಸ್ವಲ್ಪಕಾಲ" ಎಂಬುದು "ಯಾವಾಗ" ಎಂದು ಖಚಿತವಾಗಿ ಮಾತಾಡುವದಕ್ಕೆ ನಮಗೆ ಸಾಧ್ಯವೇ ಇರುವದಿಲ್ಲ ಎಂಬುದನ್ನು ತೋರ್ಪಡಿಸುವದಾಗಿದೆ. (3) ಅಂತಿಮ ವಿಶ್ಲೇಷಣೆಯಲ್ಲಿ, "ಯಾವಾಗ" ಎಂಬುದು ಪವಿತ್ರಾತ್ಮನು ಕ್ರೈಸ್ತರಿಗಾಗಿ ಹೊಂದಿರುವ ಸಂದೇಶಕ್ಕೆ ಮೂಲಭೂತವಾಗಿ ಅಪ್ರಸ್ತುತವಾಗಿರುತ್ತದೆ ಎಂಬುದನ್ನು ಸಮರ್ಥಿಸುವದಕ್ಕೆ ಇದೆಲ್ಲವೂ ಪೂರ್ವತಯಾರಿ ಆಗಿರುತ್ತದೆ ಎಂಬದೆ. 20:7-10ರಲ್ಲಿ "ಯಾವಾಗ?" ಎಂಬುದು ಮಹತ್ವಪೂರ್ಣವಾದದ್ದಲ್ಲ, ಆದರೆ "ಏನು?" ಎಂಬುದೇ ಮಹತ್ವಪೂರ್ಣವಾಗಿದೆ: *ಸೈತಾನನ ಅಂತಿಮ ಗತಿಯು ಏನಾಗಿರಲಿದೆ?*

**ವಚನ 8.** ಯೋಹಾನನ ದರ್ಶನದಲ್ಲಿ, ಸೈತಾನನು ಸಾವಿರ ವರುಷ ಸೆರೆಯಲ್ಲಿ ಇಡಲ್ಪಟ್ಟಿದ್ದನು, ಆದರೆ ಯಾವ ಪಾಠವನ್ನೂ ಕಲಿತುಕೊಂಡಿರಲಿಲ್ಲ. ಆತನು ಬಿಡುಗಡೆಗೊಳಿಸಲ್ಪಟ್ಟ ಕೂಡಲೇ, ತಾನು ಎಲ್ಲಿ ನಿಲ್ಲಿಸಿದ್ದನೋ ಅಲ್ಲಿಂದಲೇ ತನ್ನ ಕೆಲಸವನ್ನು ಪುನಃ ಆರಂಭಿಸಿದ್ದನು: ಸೈತಾನನು **ಹೊರಗೆ ಬಂದು ಭೂಮಿಯ ನಾಲ್ಕು ದಿಕ್ಕುಗಳಲ್ಲಿರುವ ಗೋಗ್ ಮಾಗೋಗ್ ಎಂಬ ಜನಾಂಗಗಳನ್ನು ಮರುಳುಗೊಳಿಸಿ ಅವರನ್ನು ಯುದ್ಧಕ್ಕೆ ಕೂಡಿಸುವನು; ಅವರ ಸಂಖ್ಯೆಯು ಸಮುದ್ರದ ಮರಳಿನಷ್ಟಿರುವದು.**

**ಜನಾಂಗಗಳನ್ನು ಭೂಮಿಯ ನಾಲ್ಕು ದಿಕ್ಕುಗಳಲ್ಲಿರುವ** ಎಂಬುದಾಗಿ ಬಣ್ಣಿಸಲಾಗಿದೆ. ಸಂವೇದನ ಸಿದ್ಧಾಂತಿಗಳು ಸಾಮಾನ್ಯವಾಗಿ ಈ ಜನಾಂಗಗಳನ್ನು ಅಮೆರಿಕದಿಂದ ಬಹಳ ದೂರದಲ್ಲಿರುವಂಥವುಗಳೆಂದು ಅರ್ಥೈಸಿರುತ್ತಾರೆ. ಹೇಗೂ, ಪರಿಭಾಷೆಗೂ ಅಂತರಕ್ಕೂ ಯಾವದೇ ಸಂಬಂಧವಿಲ್ಲ, ಆದರೆ ಜಾಗತಿಕತೆಗೆ ಸಂಬಂಧಿಸಿದೆ. **ನಾಲ್ಕು** ಮಾನವ ಜನಾಂಗದ ಸಂಖ್ಯೆಯಾಗಿದೆ. "ಭೂಮಿಯ ನಾಲ್ಕುದಿಕ್ಕುಗಳಲ್ಲಿರುವ" ಎಂಬ ಪದಗುಚ್ಛವು ಕೇವಲ "ಲೋಕದ ಎಲ್ಲೆಡೆಯಿಂದಲೂ" ಎಂದಷ್ಟೆ ಅರ್ಥವನ್ನು ಸೂಚಿಸುತ್ತದೆ.

ಆ ಜನಾಂಗಗಳು **ಗೋಗ್ ಮಾಗೋಗ್** ಎಂದು ಗುರುತಿಸಲ್ಪಟ್ಟಿವೆ. ಈ ವಿಚಿತ್ರ ಹೆಸರುಗಳು ಮನುಷ್ಯರು ಹೆಸರಿಟ್ಟಿರುವ "ಅರ್ಮಗೆದ್ದೋನ್" ಎಂಬ ಕಾಲ್ಪನಿಕ ಯುದ್ಧದ ಸುತ್ತಲಿನ ಜನಪದ ಕಥೆಗಳ ಭಾಗವಾಗಿರುತ್ತವೆ (16:16ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಹೆಸರುಗಳು ನಮ್ಮ ಕಿವಿಗಳಿಗೆ ಭಯಸೂಚಕವೆಂಬಂತೆ ಕೇಳಿಸುತ್ತವೆ, ಆದರೆ ಪ್ರಥಮ ಶತಮಾನದ ಬುದ್ಧಿವಂತ ಕ್ರೈಸ್ತರಿಗೆ ಆ ಹೆಸರುಗಳು ಪರಿಚಿತವಾಗಿದ್ದವು. ಗೋಗ್ ಮಾಗೋಗ್ ಎಂಬುವುಗಳು "ಯೆಹೂದಿ ವಿಚಾರಧಾರೆಯಲ್ಲಿ ನಿಗೂಢಾತ್ಮಕವಲ್ಲದಿದ್ದರೂ, ಆಳವಾಗಿ ... ಅಚ್ಚೊತ್ತಲ್ಪಟ್ಟಿದ್ದ"[28] ಹೆಸರುಗಳಾಗಿದ್ದವು. ಮಾಗೋಗ್ ಎಂಬವನು ಯೆಫೆತನ ಪುತ್ರರಲ್ಲಿ ಒಬ್ಬನಾಗಿದ್ದನು (ಆದಿಕಾಂಡ 10:2; ನೋಡಿರಿ 1 ಪೂರ್ವಕಾಲವೃತ್ತಾಂತ 1:5). ಸ್ಪಷ್ಟವಾಗಿರುವಂತೆ, ಮಾಗೋಗ್ ಸಂತಾನವು ಒಂದು ಜನಾಂಗವಾಗಿ ಬೆಳೆಯಿತು, ಮತ್ತು "ಮಾಗೋಗ್" ಅವರ ದೇಶದ ಹೆಸರಾಗಿ ಮಾರ್ಪಟ್ಟಿತು (ಯೆಹೆಜ್ಕೇಲ 38:2; 39:6). ಗೋಗ್ ಎಂಬುದು ಯೋವೇಲನ ಮಗನ ಹೆಸರಾಗಿತ್ತು (1 ಪೂರ್ವಕಾಲವೃತ್ತಾಂತ 5:4). ತಿಳಿಯದ ಕಾರಣಗಳಿಂದಾಗಿ, ಪ್ರವಾದಿಯಾದ ಯೆಹೆಜ್ಕೇಲನು ಎರಡು ಪದಗಳನ್ನು ಬಳಕೆ ಮಾಡಿಕೊಂಡಿದ್ದನು ಮತ್ತು ಮಾಗೋಗ್ ಎಂಬುದನ್ನು ಇಸ್ರಾಯೇಲ್ಯರ ವಿರುದ್ಧ ಒಂದುಗೂಡಲ್ಪಟ್ಟ ಶಕ್ತಿಗಳಿಗೆ ಒಂದು ಸಂಕೇತವಾಗಿ ಬಳಸಿದನು, ಅವರ ರಾಜನನ್ನು "ಗೋಗ್" ಎಂದು ಕರೆದನು (ಯೆಹೆಜ್ಕೇಲ 38:2). ಬಹುಶಃ ಮಾಗೋಗ್, ಬೈಬಲಿನಲ್ಲಿ ಪ್ರಕಟಗೊಳಿಸಲ್ಪಡದ ಒಂದು ಕಾಲಘಟ್ಟದಲ್ಲಿ ಇಸ್ರಾಯೇಲ್ಯರನ್ನು ವಿರೋಧಿಸಿರಬಹುದಾಗಿದೆ. ಬಹುಶಃ ಅವರು ಇಸ್ರಾಯೇಲಿನಿಂದ ಬಹಳ ದೂರದಲ್ಲಿ ವಾಸಿಸುವವರಾಗಿದ್ದರಿಂದ ಮತ್ತು

ಗೊತ್ತಿಲ್ಲದ ಸಂಗತಿಯಾಗಿ ಪರಿಗಣಿಸಲ್ಪಟ್ಟಿದ್ದರಿಂದಾಗಿ ಆ ಹೆಸರು ಕೊಡಲ್ಪಟ್ಟಿರಬಹುದು. ಅನೇಕ ವ್ಯಾಖ್ಯಾನಕಾರರು ನಂಬುವದೇನೆಂದರೆ ಯೆಹೆಜ್ಕೇಲ 38 ಮತ್ತು 39 ಅಧ್ಯಾಯಗಳಲ್ಲಿ, "ಗೋಗ್" ಎಂಬುದು ಯೆಹೂದಿ ದೇವಾಲಯವನ್ನು ಹೊಲೆಗೊಳಿಸಿದ್ದ ದ್ವೇಷಿಸಲ್ಪಡುತ್ತಿದ್ದ Seleucid ದೊರೆಯಾದ Antiochus Epiphanesನನ್ನು ಪ್ರತಿನಿಧಿಸುತ್ತದೆ ಎಂಬದೆ. ಆತನ ಕೃತ್ಯಗಳ ಫಲಿತವಾಗಿ Maccabean ಬಂಡಾಯದ ದಂಗೆಯು ಉಂಟಾಗಿತ್ತು ಮತ್ತು ಸ್ವಲ್ಪ ಕಾಲ ಯೆಹೂದ್ಯರಿಗೆ ಒಡಂಬಡಿಕೆಗಳ ಮಧ್ಯದ ಕಾಲಾವದಿಯಲ್ಲಿ ಸ್ವಾತಂತ್ರ್ಯ ಸಿಕ್ಕಿತ್ತು. ಇನ್ನು ಕೆಲವರು ಯೆಹೆಜ್ಕೇಲನು ಮನಸ್ಸಿನಲ್ಲಿ ಪ್ರಾಚೀನ ಬಾಬೆಲನ್ನು ಇಟ್ಟುಕೊಂಡು ಹೇಳಿದನೆಂದು ಯೋಚಿಸುತ್ತಾರೆ.

ಪ್ರೇರಿತವಲ್ಲದ ಅಂತ್ಯಕಾಲಿಕ ಲೇಖಕರು ಯೆಹೆಜ್ಕೇಲನ ಪರಿಭಾಷೆಯನ್ನು ಅಳವಡಿಸಿಕೊಂಡು ಸಾಮಾನ್ಯವಾದ ವಿಧದಲ್ಲಿ ಮೆಸ್ಸೀಯನ ವೈರಿಗಳನ್ನು ಸೂಚಿಸುವದಕ್ಕೆ ಬಳಸಿಕೊಂಡರು. ಹೆಸರುಗಳು ಪ್ರಕಟನೆ 20:8ರಲ್ಲಿ ಈ ಅರ್ಥದಲ್ಲಿ ಬಳಸಲ್ಪಟ್ಟಿವೆ. ಅವುಗಳು ಯೋಹಾನನ ದಿನದಲ್ಲಿ ಅಸ್ತಿತ್ವದಲ್ಲಿದ್ದ ನಿರ್ದಿಷ್ಟವಾದ ಜನಾಂಗಗಳನ್ನು ಸೂಚಿಸುವದಿಲ್ಲ; ಬದಲಾಗಿ, "ದೇವರನ್ನರಿಯದ ... ಕರ್ತನಾ ಯೇಸು ಕ್ರಿಸ್ತನ ಸುವಾರ್ತೆಗೆ ಒಳಪಡದ" (2 ಥೆಸಲೋನಿಕ 1:8) *ಯಾರೇ ಆಗಲಿ ಮತ್ತು ಎಲ್ಲರ* ಸಂಕೇತವಾಗಿರುತ್ತದೆ. Jim McGuigganನು ಹೀಗೆ ಹೇಳಿದನು, "ಅವುಗಳು ಯಾರು ಬೇಕಾದರೂ ಆಗಿರುತ್ತವೆ ಮತ್ತು ಆದಾಗ್ಯೂ ನಿರ್ದಿಷ್ಟವಾಗಿ ಯಾರೂ ಆಗಿರುವದಿಲ್ಲ."[29] G. B. Cairdನು ಹೀಗೆ ಬರೆದನು, "ಗೋಗ್ ಟೊಪ್ಪಿಗೆಯು ಯಾವನಿಗೆ ಸರಿ ಹೊಂದುತ್ತದೋ ಅತನು ಧರಿಸಿಕೊಳ್ಳಬಹುದು."[30]

ಈ ವಾಕ್ಯಭಾಗದಿಂದ ಕಲಿಯುವ ಪಾಠವು ಏನೆಂದರೆ ಸೈತಾನನು ಸೇನೆಗೆ ನೇಮಿಸಿಕೊಳ್ಳುವದಕ್ಕೆ ಯಾವಾಗಲೂ ಯಾರನ್ನಾದರು ಕಂಡುಕೊಳ್ಳುವನು ಎಂಬದೆ. ಆತನ ಇಬ್ಬರು ಪ್ರಮುಖ ಮಿತ್ರರು - ಮೃಗ ಹಾಗೂ ಸುಳ್ಳು ಪ್ರವಾದಿಗಳು - ಪರಾಜಯಗೊಂಡಿರಬಹುದು (ಅಧ್ಯಾಯ 19), ಆದರೆ ಅವರ ಸೋಲು ಅವನನ್ನು ಹಿಂಜರಿಯುವಂತೆ ಮಾಡಲಿಲ್ಲ. ಆತನು ಸುಮ್ಮನೆ ಅವಸರದಿಂದ ಹೊರ ಬಂದು ಗೋಗ್ ಮತ್ತು ಮಾಗೋಗ್ ಜನಾಂಗಗಳನ್ನು ನೇಮಕ ಮಾಡಿಕೊಂಡನು.

ಯೆಹೆಜ್ಕೇಲನ ಪ್ರವಾದಿಯ ವಿಷಯದಲ್ಲಿ ಇನ್ನೊಂದು ವಾಸ್ತವಾಂಶವನ್ನು ಮನಸ್ಸಿನಲ್ಲಿಟ್ಟುಕೊಳ್ಳತಕ್ಕದ್ದು: *ದೇವರ ರೌದ್ರವು* ಗೋಗ್ ಮತ್ತು ಮಾಗೋಗ್ ಮೇಲೆ ಸುರಿಸಲ್ಪಡುವದರ ಮೇಲೆ ಒತ್ತು ಕೊಡಲಾಗಿರುತ್ತದೆ (ನೋಡಿರಿ ಯೆಹೆಜ್ಕೇಲ 39:6). ಹೀಗೆ, ಪ್ರಕಟನೆ 20ರಲ್ಲಿ, "ಗೋಗ್" ಮತ್ತು "ಮಾಗೋಗ್" ಎಂಬವುಗಳು ದೇವರ ವೈರಿಗಳನ್ನು ಪ್ರತಿನಿಧಿಸುವದಷ್ಟೇ ಅಲ್ಲ, ಆದರೆ ದೇವರ *ಶೀಘ್ರವೇ ಸೋಲಿಸಲ್ಪಡಲಿದ್ದ* ವೈರಿಗಳನ್ನು ಸಹ ಪ್ರತಿನಿಧಿಸುತ್ತವೆ.

ಸೈತಾನನು ಜನಾಂಗಗಳನ್ನು ಮರುಳುಗೊಳಿಸುವದಕ್ಕೆ ಹೊಂದಿದ್ದ ಉದ್ದೇಶವು **ಅವರನ್ನು ಯುದ್ಧಕ್ಕೆ ಕೂಡಿಸುವದು** ಆಗಿತ್ತು. ಈ ಯುದ್ಧವು 16:14-16 ಮತ್ತು 19:19ರಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಅದೇ ಯುದ್ಧವೇ ಆಗಿದೆ - ಒಳ್ಳೇದು ಮತ್ತು ಕೆಟ್ಟದ್ದರ ನಡುವಿನ ಅಂತಿಮ ನಿರ್ಣಾಯಕವಾದ "ಯುದ್ಧ" (16:16; 19:19ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). 8ನೇ ವಚನದ ಅಂತ್ಯಭಾಗವು ಹೇಳುವದೇನೆಂದರೆ ಸೈತಾನನಿಂದ ಶೇಖರಣೆ ಮಾಡಿದವರ **ಸಂಖ್ಯೆಯು ಸಮುದ್ರದ ಮರಳಿನಷ್ಟಿರುವದು** ಎಂಬದೆ.

**ವಚನ 9.** ವಾಕ್ಯಭಾಗವು ಪರಾಕಾಷ್ಠೆಯ ಕಡೆಗೆ ಸಾಗುತ್ತಿರುವ ವೇಳೆ, ವಾಚಕನು ಸಾಧ್ಯವಾದಷ್ಟು ಬೃಹತ್ ಸೇನೆಯೊಂದರ ಕಲ್ಪನೆಯನ್ನು ಮಾಡಿಕೊಳ್ಳುವನು. ಬೃಹತ್ತಾಕಾರದ

ಸೈನ್ಯವು **ದೇಶದಲ್ಲೆಲ್ಲಾ ಹರಡಿಕೊಂಡು** ಇತ್ತು. ಈ ಬಣ್ಣನೆಯು ಭೌಗೋಳಿಕ ಸ್ಥಳವಾಗಿರುವದಿಲ್ಲ, ಆದರೆ ಸಾಂಕೇತಿಕತೆಯ ಇನ್ನೊಂದು ಭಾಗವಾಗಿದೆ (16:16ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಸೈನ್ಯವು **ದೇವಜನರ ದಂಡಿಗೂ ನಮ್ಮ ಪ್ರಿಯ ಪಟ್ಟಣಕ್ಕೂ ಮುತ್ತಿಗೆಹಾಕಿದರು. ದಂಡು** ಮತ್ತು **ಪಟ್ಟಣ** ಎಂಬವುಗಳು ಎರಡು ಪ್ರತ್ಯೇಕ ಗುಂಪಿನ ಜನರನ್ನು ಸಂಕೇತಿಸುವದಿಲ್ಲ, ಆದರೆ ಒಂದೇ ಗುಂಪಿಗೆ ಸಂಕೇತವಾಗಿವೆ: ದೇವರ ಜನರು. Haileyನು ಬರೆದದ್ದೇನೆಂದರೆ “ಎರಡು ಪದಗಳು ಒಂದೇ ಗುಂಪಿನ, ಅಂದರೆ ಕರ್ತನ ಸಭೆಯ ಬೇರೆ ಬೇರೆ ಅಂಶಗಳನ್ನು ಸೂಚಿಸುತ್ತವೆ.”[31] Sweteನು ಹೀಗೆ ಹೇಳುತ್ತಾನೆ, “‘ದೇವಜನರ ದಂಡು’ ಮತ್ತು ‘ಪ್ರಿಯ ಪಟ್ಟಣ’ ಒಂದೇ ದೇಹವಾಗಿರುವ, ಜಾಗತಿಕ ಸಭೆಯ ಎರಡು ಅಂಶಗಳಾಗಿವೆ ...”[32] 12ನೇ ಅಧ್ಯಾಯವು ವರದಿ ಮಾಡಿದ್ದೇನೆಂದರೆ “ಘಟಸರ್ಪನು ... ಕೋಪಿಸಿಕೊಂಡು ... ದೇವರ ಆಜ್ಞೆಗಳನ್ನು ಕೈಕೊಂಡು ನಡೆದು ಯೇಸುವಿನ ವಿಷಯವಾದ ಸಾಕ್ಷಿಯನ್ನು ಹೇಳಿರುವವರ ಮೇಲೆ ಯುದ್ಧ ಮಾಡುವದಕ್ಕೆ ಹೊರಟನು” (12:17). ಅಂತ್ಯದ ವರೆಗೂ, ಯೇಸುವಿನ ಹಿಂಬಾಲಕರೇ ಸೈತಾನನ ಹಗೆತನದ ಮುಖ್ಯ ಗಮನ ಹಾಗೂ ದೇವರ ಪ್ರೀತಿಗೆ ಮುಖ್ಯ ಗಮನ ಆಗಿರುತ್ತಾರೆ.

ಪಟ್ಟಣದಿಂದ ಪಟ್ಟಣಕ್ಕೆ ದಂಡು ವ್ಯತ್ಯಾಸವಾಗಿರುತ್ತದೆ, ಆದರೆ ಪದವು ಸಭೆಯ ವಿಷಯದಲ್ಲಿ ಅಂತರ್ದೃಷ್ಟಿಗಳನ್ನು ಒದಗಿಸುತ್ತದೆ. “ದಂಡು” ಎಂಬ ಪದವು *ಜವಾಬ್ದಾರಿಕೆ* ಕುರಿತು ಮಾತಾಡುತ್ತದೆ: ಇದು ಅರಣ್ಯದಲ್ಲಿನ ಅಲೆದಾಟಗಳಿಗೆ ಸಂಬಂಧ ಪಟ್ಟ ಪದವಾಗಿದೆ (ನೋಡಿರಿ ಇಬ್ರಿಯ 13:11, 13). ಇದು ಕ್ರೈಸ್ತರಿಗೆ ಅವರು ಒಂದು ಪರದೇಶದಲ್ಲಿ ಪ್ರವಾಸಿಗಳಾಗಿದ್ದಾರೆಂಬುದನ್ನು ಜ್ಞಾಪಿಸುವದಾಗಿದೆ (ಇಬ್ರಿಯ 11:13). “ದಂಡು” ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು ಕೆಲವು ಸಾರಿ ಹೊಸ ಒಡಂಬಡಿಕೆಯಲ್ಲಿ ಮಿಲಿಟರಿ ದಂಡುನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿರುತ್ತದಾದ್ದರಿಂದ, ಈ ಪದವು ಕ್ರೈಸ್ತರು ನಡಿಸಬೇಕಾಗಿರುವ ಆತ್ಮೀಕ ಯುದ್ಧಕ್ಕೆ ಒಂದು ಸೂಚನೆಯಾಗಿರಬಹುದಾಗಿದೆ (ಎಫೆಸ 6:10-18). “ಪಟ್ಟಣ” ಎಂಬ ಪದವು *ಪ್ರತಿಫಲ*ವನ್ನು ಸೂಚ್ಯಾರ್ಥಗೊಳಿಸುತ್ತದೆ: ಯೆಹೂದ್ಯರಿಗಾದರೋ, “ಪ್ರಿಯ ಪಟ್ಟಣ” ಶಾರೀರಿಕ ಯೆರೂಸಲೇಮ್ ಆಗಿತ್ತು; ಆದರೆ ಕ್ರೈಸ್ತರು “ನೀವು ಚೀಯೋನ್ ಪರ್ವತಕ್ಕೂ ಜೀವಸ್ವರೂಪನಾದ ದೇವರ ಪಟ್ಟಣವಾಗಿರುವ *ಪರಲೋಕದ* ಯೆರೂಸಲೇಮಿಗೂ” ಬಂದಿರುವರು (ಇಬ್ರಿಯ 12:22; ಒತ್ತಿ ಹೇಳಿದ್ದು ನನ್ನದು; ನೋಡಿರಿ ಗಲಾತ್ಯ 4:26). ಈ ಸ್ಥಳವು ಕ್ರೈಸ್ತರು ಕರ್ತನ ಸಂಗಡ ಸಹವಾಸವನ್ನಿಟ್ಟುಕೊಳ್ಳುವ ಸ್ಥಳವಾಗಿದೆ. “ಪರಲೋಕದ ಯೆರೂಸಲೇಮ್” ಕುರಿತು 21 ಮತ್ತು 22 ಅಧ್ಯಾಯಗಳನ್ನು ಹೆಚ್ಚು ವಿವರವಾಗಿ ಚರ್ಚಿಸಲಾಗುವದು.

ವಾಚಕನು ಸೈತಾನನ ಅಪಾರವಾದ ಸೈನ್ಯವು ದಂಡು/ಪಟ್ಟಣವನ್ನು ಸುತ್ತವರೆದಿರುವ ಚಿತ್ರಣವನ್ನು ಕಲ್ಪಿಸಿಕೊಳ್ಳಬಹುದಾಗಿದೆ. ಭೂಲೋಕದ ದೃಷ್ಟಿಕೋನದಿಂದ ನೋಡುವದಾದರೆ, ದೇವರ ಜನರ ವಿರುದ್ಧ ವಿರುವ ಗೆಲ್ಲುವ ಸಾಧ್ಯತೆಯು ಬಹಳ ದುಸ್ತರವಾಗಿತ್ತು. ನಾವು ಅಸಹಾಯಕತೆಯಂತೆ ತೋರುವ ಸ್ಥಿತಿಯನ್ನು ಗ್ರಹಿಸಿಕೊಳ್ಳದೆ ಮುಂದೆ ಸಂಭವಿಸುವಂಥದ್ದನ್ನು ಸಂಪೂರ್ಣವಾಗಿ ಶ್ಲಾಘಿಸುವದಕ್ಕೆ ಸಾಧ್ಯವಾಗುವದಿಲ್ಲ. ಸೈತಾನನು ತನ್ನ *ಕಡೇ* ಮಹಾ ಆಕ್ರಮಣವನ್ನು ಆರಂಭಿಸಿದ್ದನು.

ಸೈತಾನನ ಸೇನೆಗಳು ಒಂದು ಕುಂಟಿತಗೊಳಿಸುವಂಥ ಹೊಡೆತವನ್ನು ನೀಡುವದಕ್ಕೆ ಇನ್ನೇನು ಸಿದ್ಧವಾಗಿರುವ ವೇಳೆ, ಏನು ಸಂಭವಿಸಿತು? **ಆಗ ಪರಲೋಕದಿಂದ ಬೆಂಕಿ ಇಳಿದು ಬಂದು ಅವರನ್ನು ದಹಿಸಿಬಿಟ್ಟಿತು.** ಕೆಲವು ಪ್ರಾಚೀನ ಹಸ್ತಪ್ರತಿಗಳಲ್ಲಿ “ಪರಲೋಕದೊಳಗಿಂದ

*ದೇವರ ಬಳಿಯಿಂದ ಬೆಂಕಿಯು ಬಂದು"* ಎಂದಿರುತ್ತದೆ. ಇದು ಬಹುಶಃ ಮೂಲ ಪ್ರತಿಗಳಲ್ಲಿರುವಂಥದ್ದು ಆಗಿಲ್ಲವಾದರೂ, ಅದು ಸರಿಯಾದ ವಿಚಾರವನ್ನೇ ವ್ಯಕ್ತಪಡಿಸುತ್ತದೆ. ದೇವರು ಸೊದೋಮ್ ಹಾಗೂ ಗೊಮೋರ ಪಟ್ಟಣಗಳ ಮೇಲೆ ಬೆಂಕಿಯನ್ನು ಸುರಿಸಿದನು (ಆದಿಕಾಂಡ 19:24), ಆತನು ನಾದಾಬ್ ಮತ್ತು ಅಬೀಹು ಎಂಬುವರನ್ನು ದಂಡಿಸುವದಕ್ಕೆ ಆತನು ಬೆಂಕಿಯನ್ನು ಬಳಸಿದನು (ಯಾಜಕಕಾಂಡ 10:1, 2), ಮತ್ತು ಆತನು ಯೆಹೆಜ್ಕೇಲನ ಪುಸ್ತಕದಲ್ಲಿರುವ ಮಾಗೋಗ್ ಮೇಲೆ ಬೆಂಕಿಯನ್ನು ಕಳುಹಿಸುತ್ತೇನೆಂದು ವಾಗ್ದಾನ ಮಾಡಿದನು (ಯೆಹೆಜ್ಕೇಲ 39:6). ಅದೇ ರೀತಿಯಲ್ಲಿಯೇ, ಒಂದು ನೇಮಿತವಾಗಿರುವ ಕಾಲದಲ್ಲಿ, ಕರ್ತನು "ಶಕ್ತಿಯನ್ನು ತೋರ್ಪಡಿಸುವ ... ಉರಿಯುವ ಬೆಂಕಿಯಲ್ಲಿ ಆಕಾಶದಿಂದ ಪ್ರತ್ಯಕ್ಷನಾಗುವ ... ಪ್ರತೀಕಾರವನ್ನು ಸಲ್ಲಿಸುವನು" (2 ಥೆಸಲೋನಿಕ 1:7, 8).

ಗಮನಿಸಬೇಕಾದದ್ದೇನೆಂದರೆ, ಈ "ಯುದ್ಧ"ವನ್ನು ಬಣ್ಣಿಸುವ ಪ್ರತಿ ಸಾರಿ ಸಂಭವಿಸುವ ಪ್ರಕಾರವೇ, ನಿಜವಾದ ಯುದ್ಧವೊಂದು ನಡೆಯುವದೇ ಇಲ್ಲ. Coffmanನು ಹೀಗೆ ವ್ಯಾಖ್ಯಾನಿಸಿದನು, "ಅದು ಅಷ್ಟೇನೂ ಒಂದು 'ಯುದ್ಧ'ದಂತೆ ಇರಲಿಲ್ಲ? ದೇವರು ಮಾತಾಡಿದನು, ಮತ್ತು ಅದು ಮುಗಿದು ಹೋಗಿತ್ತು. ದೇವರು ಒಂದೇ ಒಂದು ಅಗ್ನಿಮಯವಾದ ಸ್ಫೋಟದೊಂದಿಗೆ ಸೈತಾನನ ಪೂರ್ತಿ ಲೆಕ್ಕವನ್ನು ಇತ್ಯರ್ಥಗೊಳಿಸಿದನು."[33] "ದೇವರ ಶಕ್ತಿಯು ಎಷ್ಟೊಂದು ಪ್ರಚಂಡವಾ[ಗಿದೆ] ಎಂದರೆ ಆತನು ಕೆಟ್ಟದ್ದನ್ನು ನಾಶಗೊಳಿಸಬೇಕೆಂದು ಮನಸ್ಸು ಮಾಡುವಾಗ ಅಲ್ಲೊಂದು ಯುದ್ಧ ನಡೆಯುವಂತೆ ತೋರುವದಕ್ಕೂ ಸಾಧ್ಯವಿರುವದಿಲ್ಲ."[34]

**ವಚನ 10.** ಸ್ವತಃ ಸೈತಾನನಿಗೆ ಏನು ಸಂಭವಿಸಿತು? **ಇದಲ್ಲದೆ ಅವರನ್ನು ಮರುಳುಗೊಳಿಸಿದ ಸೈತಾನನು ಬೆಂಕಿ ಗಂಧಕಗಳುರಿಯುವ ಕೆರೆಯಲ್ಲಿ ದೊಬ್ಬಲ್ಪಟ್ಟನು. ಅಲ್ಲಿ ಮೃಗವೂ ಸುಳ್ಳು ಪ್ರವಾದಿಯೂ ಕೂಡ ಇದ್ದಾರೆ; ಅವರು ಹಗಲಿರುಳು ಯುಗಯುಗಾಂತರಗಳಲ್ಲಿಯೂ ಯಾತನೆಪಡುತ್ತಿರುವರು** (ನೋಡಿರಿ 19:20).

ಪ್ರಕಟನೆ ಪುಸ್ತಕದ ಚಿತ್ರಣದಲ್ಲಿ, ಘಟಸರ್ಪನು ಮೊದಲು "ದೊಬ್ಬಲ್ಪಟ್ಟು ಭೂಮಿಗೆ ಬಿದ್ದನು" (12:9) ಬಳಿಕ "ಅಧೋಲೋಕದಲ್ಲಿ" ದೊಬ್ಬಲ್ಪಟ್ಟನು (20:3). ಅಂತಿಮವಾಗಿ, 10ನೇ ವಚನದಲ್ಲಿ, ಆತನು **ಬೆಂಕಿಯ ಕೆರೆಯಲ್ಲಿ ದೊಬ್ಬಲ್ಪಟ್ಟನು**. "ದೊಬ್ಬಲ್ಪಡು" ಎಂಬ ಅರ್ಥ ಬರುವ βάλλω (*ballō*) ಎಂಬ ಗ್ರೀಕ್ ಕ್ರಿಯಾಪದವಾಗಿದ್ದು, ಈ ಪ್ರತಿಯೊಂದು ಉಲ್ಲೇಖನಗಳಲ್ಲಿಯೂ ಬಳಸಲ್ಪಟ್ಟಿದೆ. ಖಂಡಿತವಾಗಿಯೂ, ಈ ಭಾಷೆಯು ಸಾಂಕೇತಿಕವಾಗಿದೆ, ಆದರೆ ಪ್ರಗತಿಯು ಆಸಕ್ತಿಕರವಾಗಿದೆ. "ಹೂಗೆ ಇಷ್ಟು ಕಾಲ ಮಾನವರನ್ನು ಮರುಳುಗೊಳಿಸುವದನ್ನೂ ಭಯಭೀತಗೊಳಿಸುವದನ್ನೂ ಮಾಡಿದ್ದ ಗರ್ವಿಷ್ಠ ಆತ್ಮನೊಬ್ಬನ ಇತಿಹಾಸವು ಅಂತ್ಯಗೊಂಡಿತ್ತು"[35] – "ಯಾರ ಸ್ವರೂಪವು ಮಾನವ ಇತಿಹಾಸದ ದೀರ್ಘವಾದ ದುರಂತ ಕಣಿಯ ಮೇಲೆ ಕರಾಳ ಛಾಯೆಯನ್ನು ಬೀರುವಂಥ"[36] ಆ ವ್ಯಕ್ತಿಯೇ.

10ನೇ ವಚನವನ್ನು ಬಿಟ್ಟು ಮುಂದಕ್ಕೆ ಹೋಗುವ ಮುನ್ನ, ನಾಲ್ಕು ವ್ಯಾಖ್ಯೆಗಳನ್ನು ಸೂಕ್ತವಾಗಿರುತ್ತವೆ:

1. ಸೈತಾನನು ಈಗ ನರಕದಲ್ಲಿ ಇರುವದಿಲ್ಲ. ಆತನು ಯುಗಾಂತ್ಯದ ವರೆಗೂ ನರಕದೊಳಗೆ ದೊಬ್ಬಲ್ಪಡುವದಿಲ್ಲ. ರೋಮ್ ನಗರಿಯಂತಹ, ಆತನ ಮಿತ್ರರು ಇತಿಹಾಸದಲ್ಲಿ ಕ್ರಮೇಣ ತೊಲಗಿಸಲ್ಪಡುತ್ತಿವೆ, ಆದರೆ ಸ್ವತಃ ಸೈತಾನನಾದರೋ ಕರ್ತನು ಬರುವ ವೇಳೆ ಇನ್ನೂ ಇರುವನು.

2. ಸೈತಾನನು *ದಂಡಿಸಲ್ಪಡುವದಕ್ಕೆ* ನರಕದೊಳಗೆ ದೊಬ್ಬಲ್ಪಡುವನು. ಸಾಮಾನ್ಯವಾಗಿರುವ ಒಂದು ತಪ್ಪು ತಿಳುವಳಿಕೆಯು ಏನೆಂದರೆ ಸೈತಾನನು ನರಕದ ಮುಖ್ಯ

ಮೇಲ್ವಿಚಾರಕನು ಮತ್ತು ಆತನು ಅಲ್ಲಿ ಸೇರುವವರನ್ನು ಪೀಡಿಸುವದರಲ್ಲಿ ಸಂತೋಷ ಪಡುತ್ತಾನೆ ಎಂಬದೆ. *Paradise Lost* ಎಂಬ ಪುಸ್ತಕದಲ್ಲಿ, John Miltonನು ಸೈತಾನನನ್ನು ಹೀಗೆ ಹೇಳುತ್ತಿರುವವನಂತೆ ಚಿತ್ರಿಸಿದ್ದನು, "ಪರಲೋಕದಲ್ಲಿ ಸೇವೆ ಮಾಡುವದಕ್ಕಿಂತ ನರಕದಲ್ಲಿ ಆಳ್ವಿಕೆ ಮಾಡುವದೇ ಲೇಸು."[37] Miltonನು ಒಬ್ಬ ಶ್ರೇಷ್ಠ ಕವಿಯಾಗಿದ್ದಿರಬಹುದು, ಆದರೆ ಆತನು ಒಬ್ಬ ಕಳಪೆ ದೈವಶಾಸ್ತ್ರಜ್ಞನಾಗಿದ್ದನು. ಸೈತಾನನು ನರಕವನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಅಲ್ಲಿಗೆ ಹೋಗುವದಿಲ್ಲ, ಆದರೆ ಆತನು ದಂಡನೆ ಅನುಭವಿಸಲು ಹೋಗುತ್ತಾನೆ. ಆತನು ಪೀಡಿಸುವವನಾಗಿರುವದಿಲ್ಲ; ಆತನು ಪೀಡೆಗೊಳಗಾಗುವವರೊಳಗೆ ಒಬ್ಬನಾಗಿರಲಿದ್ದಾನೆ.

3. ನರಕವು ಭಯಾನಕವಾಗಿರುತ್ತದೆ. ಈ ವಾಕ್ಯಭಾಗದಲ್ಲಿರುವ ಚಿತ್ರವು **ಬೆಂಕಿ ಗಂಧಕಗಳುರಿಯುವ ಕೆರೆ** ಎಂದಾಗಿರುತ್ತದೆ (19:20ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಬೇರೊಂದು ಕಡೆಯಲ್ಲಿ, ಅದು "ಗೋಳಾಟವೂ ಕಟಕಟನೆ ಹಲ್ಲುಕಡಿಯೋಣವೂ ಇರುವ" "ಹೊರಗೆ ಕತ್ತಲೆ" ಎಂದು ಬಣ್ಣಿಸಲ್ಪಟ್ಟಿದೆ (ಮತ್ತಾಯ 22:13). ಈ ಸ್ಥಳದಲ್ಲಿ "ಕಡಿಯುವ ಹುಳ ಸಾಯುವದಿಲ್ಲ, ಬೆಂಕಿ ಆರುವದಿಲ್ಲ" (ಮಾರ್ಕ 9:48). H. L. Ellisonನು ಹೇಳಿದ ಪ್ರಕಾರ, ಬಣ್ಣನೆಯಲ್ಲಿ ಸಾಂಕೇತಿಕತೆಯನ್ನು ಬಳಸಲಾಗಿದೆ ಎಂದ ಮಾತ್ರಕ್ಕೆ "ನಮಗೆ ಅದರ ಅರ್ಥವನ್ನು ಕಿತ್ತು ಹಾಕುವ ಹಕ್ಕನ್ನು ಕೊಡುವದಿಲ್ಲ. ಸಾಂಕೇತಿಕೆಯು ಯಾವಾಗಲೂ ಇಡೀ ಸತ್ಯಕ್ಕಿಂತಲೂ *ಕಡಿಮೆ*ಯಾದದ್ದನ್ನು ವ್ಯಕ್ತಪಡಿಸುತ್ತದೆ."[38] ನಾವು ಶಾಸ್ತ್ರಗಳಲ್ಲಿ ಬಳಸಲಾಗಿರುವ ಮೈನಡುಕು ಹುಟ್ಟಿಸುವ ಪದಗಳನ್ನು ಓದುವ ವೇಳೆ, ನಾವು ನರಕವು ಎಷ್ಟೊಂದು ಘೋರವಾದದ್ದೆಂದು ಯೋಚಿಸುವದಕ್ಕೆ ಜಿಗುಪ್ಸೆ ಪಡುತ್ತೇವೆ.

4. ನರಕವು ಶಾಶ್ವತವಾಗಿರುವದು. ಕೆಲವರು ನರಕವನ್ನು ಸರ್ವನಾಶನ ಎಂದು ಅರ್ಥನಿರೂಪಣೆ ಮಾಡುವದಕ್ಕೆ ಪ್ರಯತ್ನಿಸುತ್ತಾರೆ, ಆದರೆ ಸೈತಾನನು ಹಾಗೂ ಆತನ ಮಾಜಿ ಮಿತ್ರರು **ಹಗಲಿರುಳು ಯುಗಯುಗಾಂತರಗಳಲ್ಲಿಯೂ ಯಾತನೆಪಡುತ್ತಿರುವರು** ಎಂದು ಹೇಳುತ್ತದೆ.[39] Leon Morrisನು ಗಮನಕ್ಕೆ ತರುವದೇನೆಂದರೆ, "ಅಲ್ಲಿ ಯಾವದೇ ಮಧ್ಯಂತರವಾಗಲಿ ಅಥವಾ ಅಂತ್ಯವಾಗಲಿ ಇರುವದಿಲ್ಲ."[40] ಈ ವ್ಯಾಖ್ಯಾನ ಗ್ರಂಥದಲ್ಲಿ ಕೆಲ ಸಂದರ್ಭದಲ್ಲಿ, ಸೈತಾನನ ಅಂತ್ಯಾವಸ್ಥೆಗೆ ಸಂಬಂಧಪಟ್ಟಂತೆ "ಅಂತ್ಯಸ್ಥಿತಿ" ಅಥವಾ "ನಾಶನ" ಎಂಬ ಪದಗಳು ಬಳಸಲ್ಪಟ್ಟಿವೆ. ವಾಚಕರಲ್ಲಿ ಯಾರೂ ಈ ಪದಗಳನ್ನು ಸರ್ವನಾಶನ ಎಂಬುದಾಗಿ ಅರ್ಥನಿರೂಪಣೆ ಮಾಡಿರುವದಿಲ್ಲ ಎಂದು ನಿರೀಕ್ಷಿಸುತ್ತೇವೆ. ಒಬ್ಬ ಮನುಷ್ಯನು ಬೇರೊಬ್ಬನಿಗೆ, "ನಾನು ನಿನ್ನನ್ನು ನಾಶಮಾಡುವೆನು!" ಎಂದು ಹೇಳಬಹುದು, ಆದರೆ ಈ ಹೇಳಿಕೆಯು ಸಾಮಾನ್ಯವಾಗಿ ಆತನನ್ನು ಇವನು ಅಸ್ತಿತ್ವದಲ್ಲಿರದಂತೆ ಮಾಡುವ ಉದ್ದೇಶ ಹೊಂದಿದ್ದಾನೆಂಬ ಅರ್ಥವನ್ನು ಕೊಡುವದಿಲ್ಲ. ಬದಲಾಗಿ, ಆತನು ಅವನ ಕೆಲಸ ಅಥವಾ ಜೀವನದ ಯಾವದೋ ಅಂಶವೊಂದನ್ನು ನಾಶ ಮಾಡುವದಕ್ಕೆ ಉದ್ದೇಶಿಸುತ್ತಾನೆಂದು ಅರ್ಥವಾಗಿದೆ. ಅದೇ ರೀತಿಯಲ್ಲಿಯೇ, ಅಂತಿಮವಾಗಿ ಸೈತಾನನ ಕೆಲಸವು ಅಂತ್ಯಗೊಳಿಸಲ್ಪಡುವದು. ಆತನ ಪ್ರಭಾವವು ನಿಂತುಹೋಗುವದು, ಆದರೆ ಆತನು ಸ್ವತಃ ಜೀವಿಸುವದನ್ನು ಮುಂದುವರೆಸುವನು - ನರಕದಲ್ಲಿ.

ಸೈತಾನನ ಅಂತ್ಯವು ಈ ವಿಧದಲ್ಲಿ ಬಣ್ಣಿಸಲ್ಪಟ್ಟಿದೆ: ಆತನ ಕೆಲಸದ ಅಂತ್ಯ, ಆತನ ಪ್ರಭಾವದ ಅಂತ್ಯ, ಆತನ ಶೋಧನೆಗಳ ಅಂತ್ಯ, ಮತ್ತು ಆತನಿಂದ ಮಾನವರಿಗಾಗುವ ಪೀಡೆಯ ಅಂತ್ಯ. "ವಿದಾಯ, ಸೈತಾನನೇ, ಮತ್ತು ತೊಲಗಿದ್ದು ಒಳ್ಳೇದಾಯಿತು!" Packನು 1ರಿಂದ 10 ವಚನಗಳಲ್ಲಿನ ಸಂದೇಶವನ್ನು ಈ ಮಾತುಗಳಲ್ಲಿ ಸಾರಾಂಶಗೊಳಿಸುತ್ತಾನೆ:

... ಹೊರಗೆ ತರಲ್ಪಟ್ಟ ಶ್ರೇಷ್ಠ ಕೇಂದ್ರಿಯ ಸತ್ಯವು ಏನೆಂದರೆ ಕರ್ತನಿಗೆ ನಿಷ್ಠೆಯಿಂದಿರುವವರು ಮರಣಾನಂತರ ಆತನ ಮಹಿಮೆಯಲ್ಲಿ ಪಾಲುಗಾರರಾಗುವರು, ಮತ್ತು ಸೈತಾನನನ್ನು ಆತನ ಸಕಲ ಮಧ್ಯವರ್ತಿಗಳ ಸಮೇತವಾಗಿ ಪತನಗೊಳಿಸುವದು ಖಚಿತವಾಗಿರುತ್ತದೆ. ಈ ಮಹಾನ್ ವಾಗ್ದಾನವನ್ನು ನಮ್ಮದಾಗಿಸಿಕೊಳ್ಳುವವರಾಗಿ, ಕರ್ತನು ನಮಗೆ ಭರವಸವನ್ನು ಕೊಡುವ ಜಯದ ನಿರೀಕ್ಷೆಯಲ್ಲಿ ಮತ್ತು ಪ್ರತೀಕ್ಷೆಯೊಂದಿಗೆ ಜೀವಿಸಬಲ್ಲೆವು.[41]

## ಸತ್ತವರಿಗಾಗುವ ನ್ಯಾಯತೀರ್ಪು (20:11-15)

**11ಆಮೇಲೆ ಬೆಳ್ಳಗಿರುವ ಮಹಾ ಸಿಂಹಾಸನವನ್ನೂ ಅದರ ಮೇಲೆ ಕೂತಿದ್ದಾತನನ್ನೂ ಕಂಡೆನು. ಆತನೆದುರಿನಿಂದ ಭೂಮ್ಯಾಕಾಶಗಳು ಓಡಿಹೋಗಿ ಇನ್ನು ಕಾಣಿಸದ ಹಾಗಾದವು.**
**12ಇದಲ್ಲದೆ ಸತ್ತವರಾದ ದೊಡ್ಡವರೂ ಚಿಕ್ಕವರೂ ಸಿಂಹಾಸನದ ಮುಂದೆ ನಿಂತಿರುವದನ್ನು ಕಂಡೆನು. ಆಗ ಪುಸ್ತಕಗಳು ತೆರೆಯಲ್ಪಟ್ಟವು; ಮತ್ತು ಜೀವಬಾಧ್ಯರ ಪಟ್ಟಿ ಎಂಬ ಇನ್ನೊಂದು ಪುಸ್ತಕವು ತೆರೆಯಲ್ಪಟ್ಟಿತು; ಆ ಪುಸ್ತಕಗಳಲ್ಲಿ ಬರೆದಿದ್ದ ಸಂಗತಿಗಳ ಆಧಾರದಿಂದ ಅವರವರ ಕೃತ್ಯಗಳ ಪ್ರಕಾರ ಸತ್ತವರಿಗೆ ನ್ಯಾಯತೀರ್ಪಾಯಿತು. 13ಸಮುದ್ರವು ತನ್ನೊಳಗಿದ್ದ ಸತ್ತವರನ್ನು**
**ಒಪ್ಪಿಸಿತು; ಮೃತ್ಯುವೂ ಪಾತಾಳವೂ ತಮ್ಮ ವಶದಲ್ಲಿದ್ದ ಸತ್ತವರನ್ನು ಒಪ್ಪಿಸಿದವು. ಅವರಲ್ಲಿ ಪ್ರತಿಯೊಬ್ಬನಿಗೆ ಅವನವನ ಕೃತ್ಯಗಳ ಪ್ರಕಾರ ನ್ಯಾಯತೀರ್ಪಾಯಿತು. 14ಆಮೇಲೆ ಮೃತ್ಯುವೂ**
**ಪಾತಾಳವೂ ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟವು; ಆ ಬೆಂಕಿಯ ಕೆರೆಯೇ ಎರಡನೆಯ ಮರಣವು.**
**15ಯಾವನ ಹೆಸರು ಜೀವಬಾಧ್ಯರ ಪಟ್ಟಿಯಲ್ಲಿ ಬರೆದದ್ದಾಗಿ ಕಾಣಲಿಲ್ಲವೋ ಅವನು ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟನು.**

ಶ್ರೇಷ್ಠ ಮುತ್ಸದ್ಧಿಯಾದ Daniel Websterನಿಗೆ ಒಂದು ಸಾರಿ ಆತನು ಸರ್ವಕಾಲಕ್ಕೂ ಯೋಚಿಸಿದ ಒಂದು ಅತ್ಯಂಥ ಮಹತ್ವಪೂರ್ಣ ವಿಚಾರವನ್ನು ಹಂಚಿಕೊಳ್ಳಬೇಕೆಂದು ಕೇಳಲಾಯಿತು. ಆತನು ಪ್ರತ್ಯುತ್ತರವಾಗಿ ಹೀಗೆ ಹೇಳಿದನು, "ನನ್ನ ಮನಸ್ಸಿನಲ್ಲಿ ಸರ್ವಕಾಲಕ್ಕೂ ಆವರಿಸಿಕೊಂಡಿದ್ದ ಅತ್ಯಂಥ ಮಹತ್ವಪೂರ್ಣ ವಿಚಾರವೆಂದರೆ ದೇವರ ಕಡೆಗಿರುವ ನನ್ನ ವ್ಯಕ್ತಿಗತವಾದ ಜವಾಬ್ದಾರಿಯೇ."[42] ಸೊಲೊಮೋನನು ಹೀಗೆ ಬರೆದನು, "ಯೌವನಸ್ಥನೇ, ಪ್ರಾಯದಲ್ಲಿ ಆನಂದಿಸು ... ಹೃದಯವು ನಿನ್ನನ್ನು ಹರ್ಷಗೊಳಿಸಲಿ; ಮನಸ್ಸಿಗೆ ತಕ್ಕಂತೆಯೂ ಕಣ್ಣಿಗೆ ಸರಿಬೀಳುವ ಹಾಗೆಯೂ ನಡೆದುಕೋ; ಆದರೆ ಈ ಎಲ್ಲಾ ವಿಷಯಗಳಲ್ಲಿಯೂ ದೇವರು ನಿನ್ನನ್ನು ನ್ಯಾಯವಿಚಾರಣೆಗೆ ಗುರಿಮಾಡುವನೆಂದು ತಿಳಿದಿರು" (ಪ್ರಸಂಗಿ 11:9). ಪೌಲನು ಅರಿಯೋಪಾಗದಲ್ಲಿನ ತತ್ವಜ್ಞಾನಿಗಳಿಗೆ ಹೀಗೆ ಹೇಳಿದನು, "ಈಗಲಾದರೋ ಆತನು ನಾಲ್ಕು ದಿಕ್ಕಿನಲ್ಲಿರುವ ಮನುಷ್ಯರೆಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪ್ಪಣೆಕೊಡುತ್ತಾನೆ. ಯಾಕಂದರೆ ಆತನು ನಿಷ್ಕರ್ಷೆಮಾಡಿದ ಪುರುಷನ ಕೈಯಿಂದ ನೀತಿಗನುಸಾರವಾಗಿ ಭೂಲೋಕದ ನ್ಯಾಯವಿಚಾರಣೆ ಮಾಡುವದಕ್ಕೆ ಒಂದು ದಿವಸವನ್ನು ಗೊತ್ತುಮಾಡಿದ್ದಾನೆ ..." (ಅಪೊಸ್ತಲರ ಕೃತ್ಯಗಳು 17:30, 31). ಆತನು ಕೊರಿಂಥದ ಕ್ರೈಸ್ತರಿಗೆ ಹೀಗೆ ಬರೆದನು, "ಯಾಕಂದರೆ ... ಸರಿಯಾಗಿ ಪ್ರತಿಫಲವನ್ನು ಹೊಂದುವದಕ್ಕೋಸ್ಕರ ನಾವೆಲ್ಲರೂ ಕ್ರಿಸ್ತನ ನ್ಯಾಯಾಸನದ ಮುಂದೆ ಯಥಾಸ್ಥಿತಿಯಲ್ಲಿ ಕಾಣಿಸಿಕೊಳ್ಳಬೇಕು ..." (2 ಕೊರಿಂಥ 5:10). ಇಬ್ರಿಯರಿಗೆ ಪತ್ರಿಕೆಯ ಲೇಖಕನು ಹೇಳಿದ್ದೇನೆಂದರೆ "ಒಂದೇ ಸಾರಿ ಸಾಯುವದೂ ಆಮೇಲೆ ನ್ಯಾಯತೀರ್ಪೂ ಮನುಷ್ಯರಿಗೆ ಹೇಗೆ ನೇಮಕವಾಗಿದೆ" (ಇಬ್ರಿಯ 9:27).

ನ್ಯಾಯತೀರ್ಪಿನ ಕುರಿತು ಹಲವಾರು ಬಣ್ಣನೆಗಳು ಶಾಸ್ತ್ರಗಳಲ್ಲಿ ಕಂಡು ಬರುತ್ತವೆ,

ಉದಾಹರಣೆಗೆ ಮತ್ತಾಯ 25:31-46ರಲ್ಲಿರುವ ಪ್ರಕಾರ. ಪ್ರಕಟನೆ 20ನೇ ಅಧ್ಯಾಯದ ನ್ಯಾಯತೀರ್ಪಿನ ದಿನವು "ಒಂದು ಪೂರ್ತಿ ಅಂದಾಜಿನಲ್ಲಿ ಬಣ್ಣಿಸಲ್ಪಟ್ಟಿದೆ"[43] T. F. Glassonನು ಹೇಳಿದ್ದೇನೆಂದರೆ, "ಇದು ಅದರ ಸಂಕ್ಷಿಪ್ತತೆಯ ಹೊರತಾಗಿಯೂ, ಕಡೇ ನ್ಯಾಯತೀರ್ಪಿನ ಕುರಿತು ಇರುವರೆಗೂ ಬರೆಯಲ್ಪಟ್ಟಿರುವ ಬಣ್ಣನೆಗಳಲ್ಲಿಯೇ ಅತ್ಯಂಥ ಮನಸೆಳೆಯುವ ಬಣ್ಣನೆಯಾಗಿದೆ."[44]

ಪ್ರಕಟನೆ 20:11-15 ವಾಕ್ಯಭಾಗವು ಅಂತಿಮ ನ್ಯಾಯತೀರ್ಪಿನ ಕುರಿತು ಮಾತಾಡು*ತ್ತಿದೆ* ಎಂಬುದನ್ನು ಬಹುಶಃ ಮೊದಲು ಸ್ಥಾಪಿಸಬೇಕಾಗಿರುತ್ತದೆ. ಕೆಲವರು ಇದು ರೋಮಿನ ಮೇಲೆ ಬಂದಂಥ ತಾತ್ಕಾಲಿಕ ನ್ಯಾಯತೀರ್ಪಿನ ಇನ್ನೊಂದು ಸಾಂಕೇತಿಕ ಪ್ರತಿನಿಧಿಸುವಿಕೆಯಾಗಿದೆ ಅಷ್ಟೇ ಎಂದು ಯೋಚಿಸುತ್ತಾರೆ, ಆದರೆ ಇಲ್ಲಿ ಅಂತಿಮ ನ್ಯಾಯತೀರ್ಪು ದೃಶ್ಯದಲ್ಲಿರುತ್ತದೆಂದು ಬಹುಪಾಲು ಲೇಖಕರು ನಂಬುತ್ತಾರೆ. ಈ ಕೆಳಗಿನವುಗಳನ್ನು ಪರಿಗಣಿಸಿರಿ:

1. ನ್ಯಾಯತೀರ್ಪಿನ ದೃಶ್ಯದ ಮುಂಚೆ ಪ್ರಕಟನೆ ಪುಸ್ತಕದಲ್ಲಿ ಬೇರೆ ಯಾವದೇ ನ್ಯಾಯತೀರ್ಪಿನ ಮುಂಚೆ ಬರದಂಥ ಒಂದು ಅಂಶವು ಇರುತ್ತದೆ: ಸೈತಾನನನ್ನು ತೊಲಗಿಸುವದು (20:10). ಸೈತಾನನು ಈ ಪ್ರಸ್ತುತ ಯುಗದ ಅಂತ್ಯದ ವರೆಗೂ ನರಕದೊಳಗೆ ಹಾಕಲ್ಪಡುವದಿಲ್ಲ.

2. ಈ ವಾಕ್ಯಭಾಗವು ಅಂತಿಮ ನ್ಯಾಯತೀರ್ಪಿನ ದಿನದ ಮೂಲಭೂತ ಅಂಶಗಳನ್ನು ಒಳಗೊಂಡಿರುತ್ತದೆ: ಸತ್ತವರು ಎಬ್ಬಿಸಲ್ಪಡುತ್ತಾರೆ; ನ್ಯಾಯತೀರಿಸಲ್ಪಡುವದಕ್ಕೆ ಪ್ರತಿಯೊಬ್ಬರೂ ಕರ್ತನ ಮುಂದೆ ನಿಲ್ಲುತ್ತಾರೆ. ದುಷ್ಟರು ನರಕಕ್ಕೆ ಹೋದರೆ, ನೀತಿವಂತರು ಪರಲೋಕಕ್ಕೆ ಹೋಗುವರು (ನೋಡಿರಿ ಮತ್ತಾಯ 25:34, 41, 46). ಇಲ್ಲಿರುವ ನ್ಯಾಯತೀರ್ಪಿನ ದೃಶ್ಯವು ಆ ಮಹಾ ದಿನದ ಕುರಿತು ಹೊಸ ಒಡಂಬಡಿಕೆಯಲ್ಲಿ ಸಿಕ್ಕುವ ಬೇರೆ ಎಲ್ಲಾ ಹೇಳಿಕೆಗಳೊಂದಿಗೆ ಸಂಪೂರ್ಣ ಸಾಮಂಜಸ್ಯತೆಯನ್ನು ಹೊಂದಿದೆ.

3. ಈ ನ್ಯಾಯತೀರ್ಪಿನ ದೃಶ್ಯವು ಪ್ರಕಟನೆ ಪುಸ್ತಕದಲ್ಲಿ ಬೇರೆ ಯಾವ ನ್ಯಾಯತೀರ್ಪಿನ ದೃಶ್ಯದಲ್ಲಿಯೂ ಇಲ್ಲದಂಥ ಇನ್ನೊಂದು ಅಂಶವನ್ನೊಳಗೊಂಡಿದೆ: ಮರಣವನ್ನು ನಿರ್ಮೂಲನೆ ಮಾಡುವದು (20:14). ಮರಣವು ಕ್ರಿಸ್ತನ ಈಗಿನ ಆಳ್ವಿಕೆಯು ಮುಕ್ತಾಯಕ್ಕೆ ಬರುವ ತನಕವೂ ನಿರ್ಮೂಲಗೊಳಿಸಲ್ಪಡುವದಿಲ್ಲ (1 ಕೊರಿಂಥ 15:25, 26).

4. ಪ್ರಕಟನೆ ಪುಸ್ತಕವು ಇಂದು ಅಂತಿಮಘಟ್ಟದ ಕಡೆಗೆ ಪ್ರಗತಿ ಹೊಂದುತ್ತಿದೆ. 20ರಿಂದ 22 ಅಧ್ಯಾಯಗಳು "ಬಹಳ ಮಟ್ಟಿಗೆ ಒಂದೇ" ಆಗಿರುವದಾದರೆ, ಪುಸ್ತಕವು ಒಂದು ಪ್ರತಿಕಾಷ್ಠೆಯೊಂದಿಗೆ ಮುಕ್ತಾಯಗೊಳ್ಳುತ್ತದೆ. Westನು ಹೀಗೆ ಬರೆದನು, "ಇಡೀ ಪ್ರಕಟನೆ ಪುಸ್ತಕದ ಅಂತಿಮಘಟ್ಟವು 20ನೇ ಅಧ್ಯಾಯದ ಕಡೇ ಭಾಗ ಮತ್ತು ಪೂರ್ತಿಯಾಗಿ 21 ಹಾಗೂ 22 ಅಧ್ಯಾಯಗಳಲ್ಲಿ ಇರುತ್ತದೆ. ಅವುಗಳು ಸಂಪೂರ್ಣ ಪರಾಕಾಷ್ಠೆಯನ್ನು ಪ್ರತಿನಿಧಿಸುತ್ತವೆ. ಅವುಗಳಿಲ್ಲದೆ ಪುಸ್ತಕವು ಅಪೂರ್ಣವಾಗುತ್ತದೆ."[45] ಈ ಕಾರಣಗಳಿಗಾಗಿ, 20:11-15 ವಚನಗಳು ನ್ಯಾಯತೀರ್ಪಿನ ಅಂತಿಮ ದಿನದ ಕುರಿತು ಮಾತಾಡುವ ಸಾಧ್ಯತೆಯು ಅಧಿಕವಾಗಿರುತ್ತದೆ.

ಬೈಬಲ್ ಕೇವಲ ಒಂದೇ *ಒಂದು* ಮಹಾ ನ್ಯಾಯತೀರ್ಪಿನ ದಿನದ ಕುರಿತು ಮಾತಾಡುತ್ತದೆಂಬುದನ್ನು ಒತ್ತಿ ಹೇಳುವದು ಪ್ರಾಮುಖ್ಯವಾಗಿರುತ್ತದೆ. ಸಹಸ್ರವರ್ಷಪೂರ್ವವಾದಿಗಳು ಬಹು ಪುನರುತ್ಥಾನ ದಿನಗಳ ಕುರಿತು ಉಪದೇಶಿಸುತ್ತಾರೆಂಬುದನ್ನು ಈ ಮುಂಚೆ ಪ್ರಸ್ತಾಪಿಸಲಾಗಿತ್ತು. ಬಹಳಷ್ಟು ಮಂದಿ ಬಹು ನ್ಯಾಯತೀರ್ಪಿನ ದಿನಗಳ ಬಗ್ಗೆ ಸಹ ಉಪದೇಶಿಸುತ್ತಾರೆ. ಅನೇಕ ಕಾಲಹಂಚಿಕೆವಾದಿಗಳು ನಾಲ್ಕು ಅಥವಾ ಅಧಿಕವಾದ ನ್ಯಾಯತೀರ್ಪುಗಳ ಬಗ್ಗೆ ಕಲಿಸುತ್ತಾರೆ.[46] ಹೇಗೂ, ಬೈಬಲ್

ಒಂದೇ ಒಂದು ನ್ಯಾಯತೀರ್ಪಿನ ಕುರಿತು ಕಲಿಸುತ್ತದೆ. ಯೇಸು ಹಲವಾರು ಬಾರಿ "*ಕಡೇ* ದಿನದ" ಕುರಿತು ಮಾತಾಡಿದನು (ಯೋಹಾನ 6:39, 40, 44, 54; ಒತ್ತಿ ಹೇಳಿದ್ದು ನನ್ನದು): ನೀತಿವಂತರು "ಕಡೇ ದಿನದಲ್ಲಿ" ಎಬ್ಬಿಸಲ್ಪಡುವರು (ಯೋಹಾನ 11:24), ಮತ್ತು ಸೈತಾನನಿಗೆ "ಕಡೇ ದಿನದಲ್ಲಿ" ನ್ಯಾಯತೀರ್ಪಾಗುವದು (ಯೋಹಾನ 12:48). "ಕಡೇ ದಿನ" ಒಂದೇ *ಒಂದು* ಮಾತ್ರವೇ ಇರುವದಕ್ಕೆ ಸಾಧ್ಯ - ಸತ್ತವರು ಎಬ್ಬಿಸಲ್ಪಡುವ, ಪ್ರತಿಯೊಬ್ಬರು ನ್ಯಾಯತೀರ್ಪನ್ನು ಎದುರಿಸುವ ದಿನ.

ಪ್ರಕಟನೆ 20ನೇ ಅಧ್ಯಾಯದ ಮೊದಲ ಭಾಗದಲ್ಲಿ, ಸೈತಾನನ ಅಂತ್ಯಾವಸ್ಥೆಯ ಕುರಿತು ಬಣ್ಣಿಸಲ್ಪಟ್ಟಿದ್ದನ್ನು ನೋಡಿದೆವು. ಬಳಿಕ, 21 ಹಾಗೂ 22 ಅಧ್ಯಾಯಗಳಲ್ಲಿ, ದೇವರನ್ನು ಅನುಸರಿಸುವವರ ಅಂತ್ಯಾವಸ್ಥೆಯ ಕುರಿತು ಕಲಿಯಲಾಗುವದು. 20ನೇ ಅಧ್ಯಾಯದ ಕಡೇ ಭಾಗವು 20:1-10 ಮತ್ತು ಪ್ರಕಟನೆ ಪುಸ್ತಕದ ಕೊನೆಯ ಎರಡು ಅಧ್ಯಾಯಗಳ ನಡುವಿನ ಸೇತುವೆಯಾಗಿರುತ್ತದೆ: ಅದು ಸೈತಾನನನ್ನು ಹಿಂಬಾಲಿಸುವದರಲ್ಲೇ ಅಚಲವಾಗಿ ಮುಂದುವರೆಯುವವರ ಅಂತ್ಯಾವಸ್ಥೆಯನ್ನು ಪ್ರಕಟಗೊಳಿಸುವದು.

**ವಚನ 11.** ಯೋಹಾನನು ಆ ದಿನದ ಕುರಿತು ತನ್ನ ಬಣ್ಣನೆಯನ್ನು ಆರಂಭಿಸುವವನಾಗಿ, ಹೀಗೆ ಹೇಳುತ್ತಾನೆ, **ಆಮೇಲೆ ಬೆಳ್ಳಗಿರುವ ಮಹಾ ಸಿಂಹಾಸನವನ್ನೂ ಅದರ ಮೇಲೆ ಕೂತಿದ್ದಾತನನ್ನೂ ಕಂಡೆನು.** ಈ **ಸಿಂಹಾಸನ**ವು ಮೊದಲು 4ನೇ ಅಧ್ಯಾಯದಲ್ಲಿ ಕಂಡು ಬಂದಿತ್ತು: ವಿಶ್ವದ ಮಧ್ಯಭಾಗದಲ್ಲಿರುವ ಸಿಂಹಾಸನ. ಅದು ಇಲ್ಲಿ **ಬೆಳ್ಳಗಿರುವ** ಎಂದು ಬಣ್ಣಿಸಲ್ಪಟ್ಟಿದೆ ಯಾಕೆಂದರೆ ಅದರ ಮೇಲೆ ಕೂತಿರುವಾತನು ಪರಿಶುದ್ಧನಾಗಿದ್ದಾನೆ. ಅದು **ಮಹಾ** ಎಂದು ಕರೆಯಲ್ಪಟ್ಟಿದೆ ಯಾಕೆಂದರೆ ಅದು ಬೇರೆ ಎಲ್ಲಾ ಸಿಂಹಾಸನಗಳಿಗಿಂತ ಉನ್ನತದಲ್ಲಿದೆ.

**ಅದರ ಮೇಲೆ ಕೂತಿದ್ದಾತನು** ಯಾರು? ಸಿಂಹಾಸನವು "ದೇವರ ನ್ಯಾಯಾಸನ" (ರೋಮಾ 14:10), ಮತ್ತು ಅದು "ಕ್ರಿಸ್ತನ ನ್ಯಾಯಾಸನ" (2 ಕೊರಿಂಥ 5:10) ಎಂದು ಕರೆಯಲ್ಪಟ್ಟಿದೆ. ತಂದೆ ಮತ್ತು ಮಗ ಇಬ್ಬರೂ ಸಿಂಹಾಸನದ ಮೇಲೆ ಕೂತವರಾಗಿ ಚಿತ್ರಿಸಲ್ಪಟ್ಟಿದ್ದಾರೆ (ನೋಡಿರಿ ಮತ್ತಾಯ 19:28; ಲೂಕ 1:32; ಅಪೊಸ್ತಲರ ಕೃತ್ಯಗಳು 2:30; ಇಬ್ರಿಯ 1:8; 12:2; ಪ್ರಕಟನೆ 3:21; 12:5), ಮತ್ತು ಇಬ್ಬರೂ ನ್ಯಾಯತೀರಿಸುವಿಕೆಯಲ್ಲಿ ಭಾಗಿಯಾಗಿರುತ್ತಾರೆ. ಪೌಲನು ಹೇಳಿದ್ದೇನೆಂದರೆ ದೇವರು ತಾನು "ನಿಷ್ಕರ್ಷೆಮಾಡಿದ ಪುರುಷನ *ಕೈಯಿಂದ* ನೀತಿಗನುಸಾರವಾಗಿ ಭೂಲೋಕದ ನ್ಯಾಯವಿಚಾರಣೆ ಮಾಡುವದಕ್ಕೆ ಒಂದು ದಿವಸವನ್ನು ಗೊತ್ತುಮಾಡಿ*ದ್ದಾನೆ.* ಅವನನ್ನು ಸತ್ತವರೊಳಗಿಂದ ಎಬ್ಬಿಸಿದ್ದರಲ್ಲಿ ಇದನ್ನು ನಂಬುವದಕ್ಕೆ ಎಲ್ಲರಿಗೂ ಆಧಾರ ಕೊಟ್ಟಿದ್ದಾನೆ" (ಅಪೊಸ್ತಲರ ಕೃತ್ಯಗಳು 17:31; ಒತ್ತಿ ಹೇಳಿದ್ದು ನನ್ನದು). ಪುನಃ, ಪೌಲನು ಹೀಗೆ ಬರೆದನು, "*ದೇವರು* ಯೇಸು ಕ್ರಿಸ್ತನ *ಮೂಲಕವಾಗಿ* ಮನುಷ್ಯರ ಗುಟ್ಟುಗಳನ್ನು ಹಿಡಿದು ವಿಚಾರಿಸುವ ದಿನವು ಬರುತ್ತದೆ" (ರೋಮಾ 2:16; ಒತ್ತಿ ಹೇಳಿದ್ದು ನನ್ನದು; ನೋಡಿರಿ ಮತ್ತಾಯ 25:31; ಯೋಹಾನ 5:22, 23; 2 ತಿಮೊಥೆ 4:1; ಪ್ರಕಟನೆ 19:11). ಪ್ರಕಟನೆ 2:7, 10 ವಚನಗಳು ಯೇಸುವು ನೀತಿವಂತರಿಗೆ ಜೀವವೆಂಬ ಜಯಮಾಲೆಯನ್ನು ಮತ್ತು ಜೀವವೃಕ್ಷ ಫಲವನ್ನು ತಿನ್ನುವ ಅಧಿಕಾರವನ್ನು ಕೊಡುವನೆಂದು ತಿಳಿಸುತ್ತವೆ. ಯೇಸುವು ನ್ಯಾಯಾಧಿಪತಿಯಾಗಿರುವ ವಿಷಯದಲ್ಲಿರುವ ಪ್ರಾಥಮಿಕವಾದ ಆಕ್ಷೇಪಣೆಯು ಏನೆಂದರೆ, ಪ್ರಕಟನೆ ಪುಸ್ತಕದಲ್ಲಿ ಈ ಹಂತದ ವರೆಗೂ, *ತಂದೆಯಾದ ದೇವರು* ಸಿಂಹಾಸನದಲ್ಲಿ ಕೂತಿರುವವನಾಗಿ ಚಿತ್ರಿಸಲ್ಪಟ್ಟಿರುತ್ತಾನೆ ಎಂಬುದೆ. ನ್ಯಾಯಾಸನದ ಮೇಲೆ ಕೂತಿರುವದು ತಂದೆಯೋ ಅಥವಾ ಮಗನೋ ಎಂಬುದು ಅಷ್ಟೇನೂ

ಮಹತ್ವಪೂರ್ಣವಾದದ್ದಲ್ಲ; ಯಾಕೆಂದರೆ ಒಬ್ಬನೂ ಏನು ಮಾಡುತ್ತಾನೋ ಅದನ್ನು ಮತ್ತೊಬ್ಬನು ಸಹ ಮಾಡುವನೆಂದು ಹೇಳಬಹುದಾಗಿದೆ. ಇಬ್ಬರೂ ಒಂದೇ ಆಗಿದ್ದಾರೆ (ಯೋಹಾನ 10:30; 14:10). ಹಾಗೆಂದ ಮಾತ್ರಕ್ಕೆ ಅವರು ಒಂದೇ ವ್ಯಕ್ತಿ ಎಂದರ್ಥವಲ್ಲ, ಆದರೆ ಬದಲಾಗಿ ಅವರು "ದೇವತ್ವ, ಉದ್ದೇಶ, ಮತ್ತು ಕೆಲಸದಲ್ಲಿ ಒಂದೇ ಆಗಿದ್ದಾರೆ."[47]

ಸಿಂಹಾಸನದ ಮೇಲೆ ಕೂತಿದ್ದಾತನ ವಿಷಯವಾಗಿ, ಯೋಹಾನನು ಹೀಗೆ ಹೇಳಿದನು, **[ಆತನೆ]ದುರಿನಿಂದ ಭೂಮ್ಯಾಕಾಶಗಳು ಓಡಿಹೋಗಿ ಇನ್ನು ಕಾಣಿಸದ ಹಾಗಾದವು.** ಈ ಹೇಳಿಕೆಯು ನಮಗೆ ಗೊತ್ತಿರುವ ಪ್ರಕಾರ ವಿಶ್ವದ ಅಂತ್ಯವನ್ನು ಸೂಚಿಸುತ್ತಿರಬಹುದಾಗಿದೆ. "ಆಕಾಶವೂ ಭೂಮಿಯೂ ಅಳಿದು ಹೋಗುವವು" ಎಂದು ಹೇಳಿದನು (ಮತ್ತಾಯ 5:18). ಪೇತ್ರನು ಹೀಗೆ ಬರೆದನು, "ಆದರೂ ಕರ್ತನ ದಿನವು ಕಳ್ಳನು ಬರುವಂತೆ ಬರುತ್ತದೆ. ಆ ದಿನದಲ್ಲಿ ಆಕಾಶಮಂಡಲವು ಮಹಾಘೋಷದಿಂದ ಇಲ್ಲದೆ ಹೋಗುವದು, ಸೂರ್ಯಚಂದ್ರ ನಕ್ಷತ್ರಗಳು ಉರಿದು ಲಯವಾಗಿ ಹೋಗುವವು, ಭೂಮಿಯೂ ಅದರಲ್ಲಿರುವ ಕೆಲಸಗಳೂ ಸುಟ್ಟುಹೋಗುವವು" (2 ಪೇತ್ರ 3:10; ನೋಡಿರಿ ಕೀರ್ತನೆ 102:25, 26; ಯೆಶಾಯ 40:8; 51:6; ಇಬ್ರಿಯ 1:10, 11; 12:27). ಮುಂದಿನ ಅಧ್ಯಾಯದಲ್ಲಿ ನೋಡಲಿರುವ ಪ್ರಕಾರ, "ಮೊದಲಿದ್ದ" ಆಕಾಶಮಂಡಲ ಮತ್ತು ಭೂಮಿಮಂಡಲಗಳು ತೆಗೆದು ಹಾಕಲ್ಪಡುವಿಕೆಯು "ನೂತನ" ಆಕಾಶ ಹಾಗೂ ಭೂಮಂಡಲಗಳನ್ನು ಸಾಧ್ಯವಾಗಿಸುತ್ತದೆ (21:1).

ಹೇಗೂ, ಸನ್ನಿವೇಶದಲ್ಲಿ, ಮುಖ್ಯ ಒತ್ತು ವಿಶ್ವವು ಗತಿಸಿ ಹೋಗುವಿಕೆಗಿಂತಲೂ ಕರ್ತನ ಮಹಿಮೆಯ ಮೇಲೆ ಹೆಚ್ಚಾಗಿರುತ್ತದೆ. "ಸಿಂಹಾಸನದ ಮೇಲೆ ಕೂತಿರುವಾತನು ಎಷ್ಟೊಂದು ಪ್ರಕಾಶಮಾನವೂ ಧಹಿಸುವವನೂ ಆಗಿದ್ದಾನೆಂದರೆ ಭೂಮಿ ಹಾಗೂ ಆಕಾಶಗಳು ಸೂರ್ಯನ ಬಿಸಿಲಿಗೆ ಮಂಜು ಕರಗಿ ಹೋಗುವ ರೀತಿಯಲ್ಲಿ ಮರೆಯಾಗುವವು."[48]

**ವಚನ 12.** ಯೋಹಾನನು ಮುಂದುವರೆಸಿ ಹೇಳಿದ್ದೇನೆಂದರೆ, **ಇದಲ್ಲದೆ ಸತ್ತವರಾದ ದೊಡ್ಡವರೂ ಚಿಕ್ಕವರೂ ಸಿಂಹಾಸನದ ಮುಂದೆ ನಿಂತಿರುವದನ್ನು ಕಂಡೆನು.** ನ್ಯಾಯತೀರ್ಪಿನಲ್ಲಿ ಸಹ, "ದೇವರು ಪಕ್ಷಪಾತಿ" ಆಗಿರುವದಿಲ್ಲ (ರೋಮಾ 2:11; ನೋಡಿರಿ ಅಪೊಸ್ತಲರ ಕೃತ್ಯಗಳು 10:34). "ಪ್ರಮುಖರು" ಮತ್ತು "ಪ್ರಮುಖರಲ್ಲದವರು" - ಎಲ್ಲರೂ ನ್ಯಾಯತೀರ್ಪಿನೊಳಗೆ ಕರೆಯಲ್ಪಡುತ್ತಾರೆ. "ಯಾರೂ ಗೈರು ಹಾಜರಾಗುವದಿಲ್ಲ ಮತ್ತು ಯಾವದೇ ವಿನಾಯಿತಿಗಳಿರುವದಿಲ್ಲ."[49]

ಯೋಹಾನ ದರ್ಶನದಲ್ಲಿ, ಬೃಹತ್ ಸಂಖ್ಯೆಯಲ್ಲಿ ಜನರು ಸಿಂಹಾಸನದ ಮುಂದೆ ನಿಂತಿರುವ ವೇಳೆ, **ಆಗ ಪುಸ್ತಕಗಳು ತೆರೆಯಲ್ಪಟ್ಟವು; ಮತ್ತು ಜೀವಬಾಧ್ಯರ ಪಟ್ಟಿ ಎಂಬ ಇನ್ನೊಂದು ಪುಸ್ತಕವು ತೆರೆಯಲ್ಪಟ್ಟಿತು; ಆ ಪುಸ್ತಕಗಳಲ್ಲಿ ಬರೆದಿದ್ದ ಸಂಗತಿಗಳ ಆಧಾರದಿಂದ ಅವರವರ ಕೃತ್ಯಗಳ ಪ್ರಕಾರ ಸತ್ತವರಿಗೆ ನ್ಯಾಯತೀರ್ಪಾಯಿತು.** ಈ ಹೇಳಿಕೆಯನ್ನು ಪುಸ್ತಕಗಳಲ್ಲಿ ಮೃಗದ ಕುರಿತಾಗಿ ಅಪರಾಧಿಯೆಂದು ಸಾಭಿತುಪಡಿಸುವ ಮಾಹಿತಿಯನ್ನೊಳಗೊಂಡ ದಾನಿಯೇಲ 7:10ರೊಂದಿಗೆ ಹೋಲಿಕೆ ಮಾಡಿರಿ.

ವಾಕ್ಯಭಾಗವು ತೆರೆಯಲ್ಪಟ್ಟ **ಪುಸ್ತಕಗಳು** ಕುರಿತಾಗಿ ಸವಿಸ್ತಾರವಾದ ವಿವರಗಳನ್ನು ಕೊಡುವದಿಲ್ಲ, ಆದರೆ ಅವುಗಳೊಳಗೆ ದೇವರ ವಾಕ್ಯವು ಪ್ರಧಾನವಾಗಿರುವದೆಂದು ದೃಢವಿಶ್ವಾಸದಿಂದಿರಬಹುದು. ಯೇಸುವು ಹೀಗೆ ಹೇಳಿದನು, "ನನ್ನನ್ನು ಲಕ್ಷ್ಯಮಾಡದೆ ನನ್ನ ಮಾತುಗಳನ್ನು ಅಂಗೀಕರಿಸದೆ ಇರುವವನಿಗೆ ತೀರ್ಪುಮಾಡುವಂಥದು ಒಂದು ಇದೆ, ಅದು ಯಾವದಂದರೆ, ನಾನು ಆಡಿದ ಮಾತು; ಅದೇ ಅವನಿಗೆ ಕಡೇ ದಿನದಲ್ಲಿ ತೀರ್ಪುಮಾಡುವದು" (ಯೋಹಾನ 12:48). ಜನರು ಮನುಷ್ಯರ ಬರಹಗಳ ಪ್ರಕಾರವಾಗಿ

ನ್ಯಾಯತೀರಿಸಲ್ಪಡುವದಿಲ್ಲ, ಆದರೆ ಬೈಬಲಿನ ಪ್ರಕಾರವಾಗಿಯೇ ಆಗಿದೆ.

ಒಂದು ಕಡೇ ಪುಸ್ತಕವು ತೆರೆಯಲ್ಪಟ್ಟಿತ್ತು ಅದು **ಜೀವಬಾಧ್ಯರ ಪಟ್ಟಿ** ಎಂಬ ಪುಸ್ತಕ. ಈ ಪದಗುಚ್ಛವನ್ನು ದಾನಿಯೇಲ 12:1 ರೊಂದಿಗೆ ಹೋಲಿಕೆ ಮಾಡಿರಿ, ಅದು ಬಿಡುಗಡೆಗೊಳಿಸಲ್ಪಡುವವರ ಒಂದು ದಾಖಲೆ ಆಗಿತ್ತು. ಪ್ರಕಟನೆ ಪುಸ್ತಕದುದ್ದಕ್ಕೂ ಜೀವಬಾಧ್ಯರ ಪಟ್ಟಿಯ ಕುರಿತು ಪ್ರಸ್ತಾಪಿಸಲಾಗಿರುತ್ತದೆ (3:5; 13:8; 17:8; 21:27). (KJV ತರ್ಜುಮೆಯು 22:19ರಲ್ಲಿ ಸಹ "ಜೀವಬಾಧ್ಯರ ಪಟ್ಟಿ" ಎಂದು ಬಳಸುತ್ತದೆ, ಆದರೆ ಉತ್ತಮ ಹಸ್ತಪ್ರತಿಗಳೊಳಗೆ ಆ ಸ್ಥಳದಲ್ಲಿ "ಜೀವ ವೃಕ್ಷ" ಎಂದಿರುತ್ತದೆ.) ಜೀವಬಾಧ್ಯರ ಪಟ್ಟಿ ಎಂಬ ಪುಸ್ತಕದಲ್ಲಿ ದೇವರ ನಂಬಿಗಸ್ತರ ದಾಖಲೆಯು ಬರೆಯಲ್ಪಟ್ಟಿರುತ್ತದೆ (3:5ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). "ಪ್ರಾಚೀನ ಜಗತ್ತಿನಲ್ಲಿ ರಾಜರು ತಮ್ಮ ವ್ಯಾಪ್ತಿಗಳಲ್ಲಿದ್ದ ನಾಗರಿಕರ ನೊಂದಣಿಗಳನ್ನು ಇಟ್ಟುಕೊಂಡಿರುತ್ತಿದ್ದರು; ಒಬ್ಬ ಮನುಷ್ಯನು ಮರಣಿಸಿ ತನ್ನ ಪೌರತ್ವದ ಹಕ್ಕುಗಳನ್ನು ಕಳೆದುಕೊಂಡಾಗ ಮಾತ್ರವೇ, ಆತನ ಹೆಸರನ್ನು ಅಳಿಸಿ ಹಾಕಲಾಗುತ್ತಿತ್ತು. ಜೀವಬಾಧ್ಯರ ಪಟ್ಟಿಯು ದೇವರಿಗೆ ಸೇರಿದವರ ನೊಂದಣಿ ಪುಸ್ತಕವಾಗಿದೆ."[50] ಇದನ್ನು ಬೇರೆ ರೀತಿಯಲ್ಲಿ ಹೇಳುವದಾದರೆ, ಈ ಪಟ್ಟಿಯು ಯಾರ ಪಾಪಗಳು ಯೇಸುವಿನ ರಕ್ತದಿಂದ ಮುಚ್ಚಲ್ಪಟ್ಟಿರುತ್ತವೋ ಅವರ ಪಟ್ಟಿಯನ್ನು ಮಾಡುತ್ತದೆ.

ಸ್ಪಷ್ಟವಾಗಿರುವ ಪ್ರಕಾರ, ಕೆಲವೊಂದು ಪುಸ್ತಕಗಳು ಜನರ ಜೀವಿತಗಳ - ಅವರ ಯೋಚನೆಗಳು, ಅವರ ಮಾತುಗಳು, ಮತ್ತು ಅವರ ಕ್ರಿಯೆಗಳು - ದಾಖಲೆಯನ್ನೊಳಗೊಂಡಿರುತ್ತವೆ, ಯಾಕೆಂದರೆ ಸತ್ತವರಿಗೆ **ಅವರವರ ಕೃತ್ಯಗಳ ಪ್ರಕಾರ** ನ್ಯಾಯತೀರ್ಪಾಗುವದು ಎಂದು ವಾಚಕನಿಗೆ ಎರಡು ಸಾರಿ ಹೇಳಲ್ಪಟ್ಟಿರುತ್ತದೆ.

ಅನೇಕರು ಜನರಿಗೆ ಅವರ ಕೃತ್ಯಗಳ ಪ್ರಕಾರ ನ್ಯಾಯತೀರ್ಪಾಗುವ ವಿಚಾರಕ್ಕೆ ಆಕ್ಷೇಪಣೆಯನ್ನು ವ್ಯಕ್ತಪಡಿಸುತ್ತಾರೆ, ಆದರೆ ಆ ತತ್ವದ ಕುರಿತು ಬೈಬಲಿನುದ್ದಕ್ಕೂ ಕಲಿಸಲ್ಪಟ್ಟಿರುತ್ತದೆ. ಜ್ಞಾನಿಯು ಹೀಗೆ ಹೇಳಿದನು, "ಒಳ್ಳೇದಾಗಲಿ ಕೆಟ್ಟದಾಗಲಿ ಸಕಲ ರಹಸ್ಯ ಸಂಗತಿಗಳನ್ನು ವಿಮರ್ಶಿಸುವ ನ್ಯಾಯವಿಚಾರಣೆಗೆ ದೇವರು ಪ್ರತಿಯೊಂದು ಕಾರ್ಯವನ್ನು ಗುರಿಮಾಡುವನು" (ಪ್ರಸಂಗಿ 12:14). ಪೌಲನು ಬರೆದದ್ದೇನೆಂದರೆ ನ್ಯಾಯತೀರ್ಪಿನ ದಿನದಲ್ಲಿ ದೇವರು "ಪ್ರತಿಯೊಬ್ಬನಿಗೆ ಅವನವನ ಕೃತ್ಯಗಳಿಗೆ ತಕ್ಕ ಪ್ರತಿಫಲವನ್ನು ಕೊಡುವನು" (ರೋಮಾ 2:6). ಯೇಸುವು ತಾನು ತನ್ನ ದೇವದೂತರೊಡನೆ ಪ್ರಭಾವದಿಂದ ಬರುವ ವೇಳೆ, ಆತನು "ಒಬ್ಬೊಬ್ಬನಿಗೆ ಅವನವನ ನಡತೆಗೆ ತಕ್ಕ ಫಲವನ್ನು ಕೊಡುವನು" ಎಂದು ಹೇಳಿದನು (ಮತ್ತಾಯ 16:27). ಆತನು ಥುವತ್ಯೈರದಲ್ಲಿರುವ ಕ್ರೈಸ್ತರಿಗೆ ಹೀಗೆ ಹೇಳಿದನು, "ನಿಮ್ಮಲ್ಲಿ ಪ್ರತಿಯೊಬ್ಬನಿಗೆ ಅವನವನ ಕೃತ್ಯಗಳಿಗೆ ತಕ್ಕ ಹಾಗೆ ಪ್ರತಿಫಲ ಕೊಡುವೆನು" (ಪ್ರಕಟನೆ 2:23; ನೋಡಿರಿ ಯೆರೆಮೀಯ 17:10; ಮತ್ತಾಯ 25:34-36; 2 ಕೊರಿಂಥ 5:10; 11:15; 2 ತಿಮೊಥೆ 4:14).

ಒಬ್ಬರು ಆಕ್ಷೇಪಣೆಯೆತ್ತಿ ಹೀಗೆ ಹೇಳಬಹುದು, "ಆದರೆ ನಮ್ಮಲ್ಲಿ ಒಬ್ಬನೂ ರಕ್ಷಣೆ ಹೊಂದುವಷ್ಟರ ಮಟ್ಟಿಗೆ ಒಳ್ಳೇ ಕಾರ್ಯಗಳನ್ನು ಮಾಡಲಾರೆವು." ಅದು ಸತ್ಯವೇ (ಎಫೆಸ 2:8, 9); ಆದರೆ, Robert Mounceನು ಒತ್ತಿ ಹೇಳಿದ ಪ್ರಕಾರ, "ಇಲ್ಲಿ ವಿಷಯವು ಕ್ರಿಯೆಗಳ ಮೂಲಕ ರಕ್ಷಣೆ ಎಂಬುದಲ್ಲ, ಆದರೆ ದೇವರೊಂದಿಗೆ ಮನುಷ್ಯನ ಒಂದು ವಾಸ್ತವಿಕವಾದ ಸಂಬಂಧಕ್ಕೆ ಅಲ್ಲಗಳೆಯಲಾಗದಂಥ ಪುರಾವೆಯಾಗಿ ಕ್ರಿಯೆಗಳಿರುತ್ತವೆ ಎಂಬದೆ."[51] ನಮ್ಮ ಕ್ರಿಯೆಗಳು ನಮ್ಮ ನಂಬಿಕೆಯನ್ನು ತೋರಿಸುತ್ತವೆ (ಯಾಕೋಬ 2:18), ನಮ್ಮ ಪ್ರೀತಿಯನ್ನು ವ್ಯಕ್ತಪಡಿಸುತ್ತವೆ (ಯೋಹಾನ 14:15; 1 ಯೋಹಾನ 5:3), ಮತ್ತು ಕರ್ತನಿಗೆ ನಾವು ನೀಡುವ

ಪ್ರತಿಕ್ರಿಯೆಯನ್ನು ಸಂಪೂರ್ಣಗೊಳಿಸುತ್ತವೆ (ಯಾಕೋಬ 2:21, 22; ಎಫೆಸ 2:10).

ಜನರು ಮಾತಾಡುವ ಅಥವಾ ಮಾಡುವ ಎಲ್ಲವನ್ನೂ "ಬರೆದಿಡುವ ದೇವದೂತರು" ಬರೆದುಕೊಳ್ಳುತ್ತಾರೆ ಎಂದು ಊಹಿಸಿಕೊಳ್ಳಲಾಗುತ್ತದೆ. ಬಹು ಸಂಭಾವ್ಯವಾಗಿ, ಪುಸ್ತಕಗಳು "ನ್ಯಾಯಾಧಿಪತಿಯಾದ ದೇವರ ಸರ್ವವ್ಯಾಪಕತೆಯನ್ನು ಪ್ರತಿನಿಧಿಸುತ್ತವೆ, ಆತನಿಗೆ ತಿಳಿಯದಿರುವದು ಒಂದೂ ಇಲ್ಲ."[52]

**ವಚನ 13. ಸಮುದ್ರವು ತನ್ನೊಳಗಿದ್ದ ಸತ್ತವರನ್ನು ಒಪ್ಪಿಸಿತು; ಮೃತ್ಯುವೂ ಪಾತಾಳವೂ ತಮ್ಮ ವಶದಲ್ಲಿದ್ದ ಸತ್ತವರನ್ನು ಒಪ್ಪಿಸಿದವು. ಅವರಲ್ಲಿ ಪ್ರತಿಯೊಬ್ಬನಿಗೆ ಅವನವನ ಕೃತ್ಯಗಳ ಪ್ರಕಾರ ನ್ಯಾಯತೀರ್ಪಾಯಿತು.** ಪ್ರಕಟನೆ ಪುಸ್ತಕದುದ್ದಕ್ಕೂ **ಮೃತ್ಯುವೂ ಪಾತಾಳವೂ** ಎಂಬವುಗಳು ಒಂದಕ್ಕೊಂದು ಸಂಬಂಧಗೊಳಿಸಲ್ಪಟ್ಟಿವೆ. 1ನೇ ಅಧ್ಯಾಯದಲ್ಲಿ, ಯೇಸುವನ್ನು "ಮರಣದ ಮತ್ತು ಪಾತಾಳದ ಬೀಗದ ಕೈಗಳನ್ನು" ಹೊಂದಿರುವವನೆಂದು ಚಿತ್ರಿಸಲಾಗಿರುತ್ತದೆ (1:18ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). "ಮರಣ" 6ನೇ ಅಧ್ಯಾಯದಲ್ಲಿ ನಾಲ್ಕನೆಯ ಸವಾರನಾಗಿತ್ತು, ಮತ್ತು ಆತನ ಹಿಂದೆ "ಪಾತಾಳ" ಹೋಗುತ್ತಿತ್ತು (6:8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). "ಮನುಷ್ಯರಿಗೆ 'ಮರಣ'ವು ಸಾಮಾನ್ಯ ಗತಿಯಾಗಿರುತ್ತದೆ ... ಮತ್ತು 'ಪಾತಾಳ' ಅವರ ಸಾಮಾನ್ಯ ಗಮ್ಯತೆಯಾಗಿರುತ್ತದೆ ..."[53] ಲೋಕದ ಇತಿಹಾಸದಲ್ಲೆಲ್ಲಾ, ಮರಣವು ಮನುಷ್ಯರ ದೇಹಗಳನ್ನು ತೆಗೆದುಕೊಂಡಿದ್ದರೆ, ಪಾತಾಳವು ಅವರ ಆತ್ಮಗಳನ್ನು ತನ್ನ ಕಡೆಗೆ ತೆಗೆದುಕೊಂಡಿರುತ್ತದೆ. ಆ "ಕಡೇ ದಿನ"ದಲ್ಲಿ, ತಮ್ಮಲ್ಲಿ ಬಂಧಿಯಾಗಿಟ್ಟುಕೊಂಡಿರುವ ದೇಹಗಳನ್ನೂ ಆತ್ಮಗಳನ್ನೂ ಬಿಡುಗಡೆಗೊಳಿಸುವಂತೆ ಮರಣ ಹಾಗೂ ಪಾತಾಳಗಳಿಗೆ ಒತ್ತಾಯಿಸಲಾಗುವದು.

**ಸಮುದ್ರವು ತನ್ನೊಳಗಿದ್ದ ಸತ್ತವರನ್ನು ಒಪ್ಪಿಸಿತು** ಎಂಬ ಮಾತುಗಳು ಒಗಟಿನಿಂದ ಕೂಡಿವೆ, ಯಾಕೆಂದರೆ ಭೂಮಿಯ ಮೇಲೆ ಸಾಯುವವರಂತೆಯೇ, ಸಮುದ್ರದಲ್ಲಿ ಸಾಯುವವರ ದೇಹಗಳು ಹಾಗೂ ಆತ್ಮಗಳು ಸಹ ಮರಣ ಮತ್ತು ಪಾತಾಳದ ಬಳಿಯಲ್ಲಿರುತ್ತವೆ. ಈ ಗೂಢಾತ್ಮಕ ಪದಗಳು ಮರಣಾನಂತರ ಅಸ್ತಿತ್ವದಲ್ಲಿರಬೇಕೆಂದರೆ ಒಂದು ಸಮರ್ಪಕವಾದ ಹೂಣಲ್ಪಡುವಿಕೆ - ಸಮುದ್ರದಲ್ಲಿ ಕಳೆದು ಹೋದವರಿಗೆ ಅದು ಸಿಕ್ಕುತ್ತಿರಲಿಲ್ಲ - ಸಾರಭೂತವಾಗಿ ಪ್ರಾಮುಖ್ಯವಾಗಿರುತ್ತದೆಂಬ ಪ್ರಾಚೀನ ಭಾವನೆಯನ್ನು ಪ್ರತಿಫಲನಗೊಳಿಸುತ್ತವೆಂದು ಅನೇಕ ಲೇಖಕರು ಯೋಚಿಸುತ್ತಾರೆ. ಹೀಗೆ 13ನೇ ವಚನದ ಮಾತುಗಳು, ಜನರು ಹೇಗಾದರೂ ಅಥವಾ ಎಲ್ಲಿಯಾದರೂ ಸತ್ತಿದ್ದರೂ ಸರಿಯೇ, ದೇವರು ಸತ್ತವರನ್ನೆಲ್ಲಾ ಎಬ್ಬಿಸಬಲ್ಲನು ಮತ್ತು ಎಬ್ಬಿಸುವನು ಎಂಬ ಭರವಸವನ್ನು ಒದಗಿಸುತ್ತದೆ. ಕೆಲವು ಲೇಖಕರು ದೇವರಿಗೆ ಮರೆಯಾಗಿ, "ಸಮುದ್ರದ ಕಟ್ಟಕಡೆಯಲ್ಲಿ"ದ್ದರೂ ಸಹ ಅಡಗಿಕೊಳ್ಳಲಾಗದು ಎಂಬುದನ್ನು ಒತ್ತಿ ಹೇಳುವ ವಾಕ್ಯಭಾಗಗಳೊಂದಿಗೆ ಸಂಬಂಧಗೊಳಿಸುತ್ತಾರೆ. ಸರಳವಾಗಿ ಹೇಳುವದಾದರೆ, ಪಾಪಿಗಳು ದೇವರ ನ್ಯಾಯತೀರ್ಪಿನಿಂದ ತಪ್ಪಿಸಿಕೊಂಡು ಬಚ್ಚಿಟ್ಟುಕೊಳ್ಳಬಹುದಾದ ಯಾವ ಸ್ಥಳವೂ ಇರುವದಿಲ್ಲ. ಆ ಮಾತುಗಳ ಅರ್ಥವು ಏನೇ ಆಗಿದ್ದರೂ ಸರಿಯೇ, *ಯಾರೊಬ್ಬನೂ* ನ್ಯಾಯತೀರ್ಪಿನಿಂದ ತಪ್ಪಿಸಿಕೊಳ್ಳಲಾರನು ಎಂಬುದೇ ಇಲ್ಲಿರುವ ಸಂದೇಶವಾಗಿದೆ.

ಸಮುದ್ರ, ಮರಣ, ಹಾಗೂ ಪಾತಾಳಗಳು ತಮ್ಮಲ್ಲಿರುವ ಸತ್ತವರನ್ನು ಒಪ್ಪಿಸಿ ಬಿಡುವದ ಉಲ್ಲೇಖವು ಸತ್ತವರಿಗಾಗುವ ಪುನರುತ್ಥಾನವನ್ನು ಕುರಿತು ತಿಳಿಸುವ ಸಾಂಕೇತಿಕ ರೀತಿಯಾಗಿದೆ. ಯೇಸುವು ಹೇಳಿದ್ದೇನೆಂದರೆ "ಸಮಾಧಿಗಳಲ್ಲಿರುವವರೆಲ್ಲರು ಆತನ ಧ್ವನಿಯನ್ನು ಕೇಳಿ ಎದ್ದು ಹೊರಗೆ ಬರುವ ಕಾಲ ಬರುತ್ತದೆ. ಒಳ್ಳೇದನ್ನು ಮಾಡಿದವರಿಗೆ ಜೀವಕ್ಕಾಗಿ

ಪುನರುತ್ಥಾನವಾಗುವದು; ಕೆಟ್ಟದ್ದನ್ನು ನಡಿಸಿದವರಿಗೆ ತೀರ್ಪಿಗಾಗಿ ಪುನರುತ್ಥಾನವಾಗುವದು" (ಯೋಹಾನ 5:28, 29). ಪೌಲನ ಪ್ರಕಾರವಾಗಿ, "ಇದಲ್ಲದೆ ನೀತಿವಂತರಿಗೂ ಅನೀತಿವಂತರಿಗೂ ಪುನರುತ್ಥಾನವಾಗುವದೆಂದು ಇವರು ದೇವರಲ್ಲಿ ನಿರೀಕ್ಷೆಯಿಟ್ಟಿರುವ ಪ್ರಕಾರವೇ ನಾನೂ ನಿರೀಕ್ಷೆಯುಳ್ಳವನಾಗಿದ್ದೇನೆ" (ಅಪೊಸ್ತಲರ ಕೃತ್ಯಗಳು 24:15). ಹೊಸ ಒಡಂಬಡಿಕೆಯಲ್ಲಿ, ಪುನರುತ್ಥಾನದ ಕುರಿತಾಗಿರುವ ಬಹುಪಾಲು ವಾಕ್ಯಭಾಗಗಳು *ನೀತಿವಂತರ* ಸಂಬಂಧಪಟ್ಟಂತೆ ಇರುತ್ತವೆ. ಅಂತೂ, ಪುನರುತ್ಥಾನಗೊಂಡವರಾಗುವದು ಮಹಿಮೆ ಹಾಗೂ ಸನ್ಮಾನಗಳನ್ನು ಪಡೆದುಕೊಳ್ಳುವವರಿಗೆ ಮಾತ್ರವೇ ಒಂದು ರೋಮಾಂಚಕತೆಯೊಂದಿಗೆ ಎದುರುನೋಡುವಂಥ ಘಟನೆಯಾಗಿರಲಿದೆಯಷ್ಟೆ. ಹಾಗಿದ್ದರೂ, ಇಲ್ಲಿ ಉಲ್ಲೇಖಿಸಲ್ಪಟ್ಟಿರುವಂತಹ ವಾಕ್ಯಭಾಗಗಳಂತಿರುವ ಹಲವಾರು ವಾಕ್ಯಭಾಗಗಳು ಪುನರುತ್ಥಾನವು ಸಾಮಾನ್ಯವಾಗಿ ಸಂಭವಿಸುವದೆಂಬುದನ್ನು ಕ್ರೈಸ್ತರಿಗೆ ತಿಳಿಯಪಡಿಸುತ್ತವೆ; ನೀತಿವಂತರು ಮತ್ತು ಅನೀತಿವಂತರು ಇಬ್ಬರೂ ಎಬ್ಬಿಸಲ್ಪಡುವರು. ಕ್ರಿಸ್ತನು ಹಿಂದಿರುಗಿ ಬರುವ ವೇಳೆ, "ಸತ್ತವರು ಎಬ್ಬಿಸಲ್ಪಡುವರು" ಮತ್ತು ಬದುಕಿರುವವರು "ಮಾರ್ಪಡುವರು" (1 ಕೊರಿಂಥ 15:52), ಮತ್ತು ಆ ಬಳಿಕ ಎಲ್ಲರೂ ನ್ಯಾಯತೀರ್ಪನ್ನು ಎದುರಿಸುವರು.

ಪೌಲನು ಕ್ರೈಸ್ತರಿಗೆ ಹೀಗೆ ಬರೆದನು, "ಯಾಕಂದರೆ ಪ್ರತಿಯೊಬ್ಬನು ತನ್ನ ದೇಹದ ಮೂಲಕ ನಡಿಸಿದ *ಒಳ್ಳೇದಕ್ಕಾಗಲಿ ಕೆಟ್ಟದ್ದಕ್ಕಾಗಲಿ* ಸರಿಯಾಗಿ ಪ್ರತಿಫಲವನ್ನು ಹೊಂದುವದಕ್ಕೋಸ್ಕರ ನಾವೆಲ್ಲರೂ ಕ್ರಿಸ್ತನ ನ್ಯಾಯಾಸನದ ಮುಂದೆ ಯಥಾಸ್ಥಿತಿಯಲ್ಲಿ ಕಾಣಿಸಿಕೊಳ್ಳಬೇಕು" (2 ಕೊರಿಂಥ 5:10; ಒತ್ತಿ ಹೇಳಿದ್ದು ನನ್ನದು). ರೋಮಾ 2:6-8ರಲ್ಲಿ, ಆತನು ಕರ್ತನ ನೀತಿಯುಳ್ಳ ನ್ಯಾಯತೀರ್ಪಿನ "ದಿನ"ದಂದು ಏನು ಸಂಭವಿಸುವದೆಂಬುದರ ಕುರಿತು ಈ ವರ್ಣನೆಯನ್ನು ನೀಡುತ್ತಾನೆ:

> ಆತನು [ದೇವರು] ಪ್ರತಿಯೊಬ್ಬನಿಗೆ ಅವನವನ ಕೃತ್ಯಗಳಿಗೆ ತಕ್ಕ ಪ್ರತಿಫಲವನ್ನು ಕೊಡುವನು. ಯಾರು ಪ್ರಭಾವ ಮಾನ ನಿರ್ಲಯತ್ವಗಳನ್ನು ಹೊಂದಬೇಕೆಂದು ಒಳ್ಳೇದನ್ನು ಬೇಸರಗೊಳ್ಳದೆ ಮಾಡುತ್ತಾರೋ ಅವರಿಗೆ ನಿತ್ಯಜೀವವನ್ನು ಕೊಡುವನು. ಯಾರು ಸ್ವೇಚ್ಛೆಯುಳ್ಳವರಾಗಿ ಸತ್ಯವನ್ನು ಅನುಸರಿಸದೆ ಅನ್ಯಾಯವನ್ನು ಅನುಸರಿಸುತ್ತಾರೋ ಅವರಿಗೆ ಕೋಪ ರೌದ್ರಗಳು ಬರುವವು (ಒತ್ತ ಹೇಳಿದ್ದು ನನ್ನದು).

ನೀತಿವಂತರು ನ್ಯಾಯತೀರ್ಪಿನ ದಿನದಂದು ಸಿಂಹಾಸನದ ಮುಂಚೆ ನಿಲ್ಲುವರೆಂಬುದನ್ನು ಕೆಲವರು ಅಲ್ಲಗಳೆಯುತ್ತಾರೆ; ಆ ಮಹಾ ಕಾರ್ಯಕ್ರಮವು ದುಷ್ಟರಿಗೋಸ್ಕರ ಮಾತ್ರವೇ ಇರುತ್ತದೆಂದು ಪರಿಗಣಿಸುತ್ತಾರೆ. ಈ ಜನರು ಸಾಮಾನ್ಯವಾಗಿ ನೀತಿವಂತರು ಮರಣಿಸಿದ ನಂತರ ನೇರವಾಗಿ ಪರಲೋಕಕ್ಕೆ ಹೋಗುವರೆಂದು ಕಲಿಸುತ್ತಾರೆ. ಕೆಲವೊಂದು ವಾಕ್ಯಭಾಗಗಳು ಒಬ್ಬ ಕ್ರೈಸ್ತನು ಮರಣಿಸುವ ವೇಳೆ "ಕರ್ತನ ಸಂಗಡ" ಇರುವದಕ್ಕೆ ಹೋಗುವನೆಂಬುದಾಗಿ ಹೇಳುತ್ತವಾದರೂ (2 ಕೊರಿಂಥ 5:8; ನೋಡಿರಿ ಫಿಲಿಪ್ಪಿ 1:23), ಆ ವಾಕ್ಯಭಾಗಗಳ ಉದ್ದೇಶವು ಸತ್ತವರ ಮಧ್ಯಂತರ ಸ್ಥಿತಿಯ ಕುರಿತು ಒಂದು ನಿಶ್ಚಯವಾದ ಹೇಳಿಕೆಯನ್ನು ನೀಡುವದಾಗಿರುವದಿಲ್ಲ, ಆದರೆ ನಂಬಿಗಸ್ತರಿಗೆ ಮರಣವು ಒಂದು ಜಯವಾಗಿರುತ್ತದೆಂದು ಒತ್ತಿ ಹೇಳುವದೇ ಆಗಿರುತ್ತದೆ. ನೀತಿವಂತರು ನ್ಯಾಯತೀರ್ಪಿನ ದಿನದಲ್ಲಿ ಇರುವದಿಲ್ಲ ಎಂದು ನಂಬುವವರು ವಿಶ್ವಾಸಿಗಳು "ತೀರ್ಪಿಗೆ ಗುರಿಯಾಗುವದಿಲ್ಲ" ಎಂಬ ಹೇಳುವ ವಾಕ್ಯಭಾಗಗಳನ್ನು ಸಹ ಉಲ್ಲೇಖಿಸುತ್ತಾರೆ (ಯೋಹಾನ 5:24); ಆದರೆ ಆ ವಾಕ್ಯಭಾಗಗಳು ದಂಡನೆಯೆಂಬುದಾಗಿ ಹೇಳುವದಕ್ಕೆ "ನ್ಯಾಯತೀರ್ಪು" ಎಂದು

ಬಳಸುತ್ತವೆಯೇ ಹೊರತು, ನ್ಯಾಯತೀರ್ಪಿನ ದಿನವನ್ನಲ್ಲ. ಪಾತಾಳಲೋಕ, ಪುನರುತ್ಥಾನ, ಮತ್ತು ನ್ಯಾಯತೀರ್ಪುಗಳ ಕುರಿತಾಗಿ ಇರುವ ಸಾಮಾನ್ಯವಾದ ಬೈಬಲ್ ಉಪದೇಶವು ಸತ್ತಿರುವವ*ರೆಲ್ಲರು* ನ್ಯಾಯತೀರ್ಪಿಗಾಗಿ ಕಾಯ್ದುಕೊಂಡಿರುತ್ತಾರೆಂದು ಹೇಳುತ್ತದೆ. ಉದಾಹರಣೆಗೆ, "ಕರ್ತನ ಬಳಿಯಲ್ಲಿರುವದು" ಎಂಬ ಹೇಳಿಕೆಯ ನಂತರ ತಕ್ಷಣದಲ್ಲಿಯೇ ಎಲ್ಲರೂ ಕ್ರಿಸ್ತನ ನ್ಯಾಯಾಸನದ ಮುಂದೆ ಕಾಣಿಸಿಕೊಳ್ಳಬೇಕು ಎಂಬ ಹೇಳಿಕೆಯು ಬರುತ್ತದೆಂಬುದನ್ನು ಗಮನಿಸಿರಿ (2 ಕೊರಿಂಥ 5:8, 10). ಇನ್ನೊಂದಡೆಯಲ್ಲಿ, ನೀತಿವಂತರು ನ್ಯಾಯತೀರ್ಪಿಗಾಗಿ ಕಾದುಕೊಂಡಿರುವ ವೇಳೆ ನೀತಿವಂತರು *ಸಂತೋಷವಾಗಿ* ಇದ್ದರೆ, ಅನೀತಿವಂತರು ಬಹುವಾಗಿ *ಅಸಂತೋಷದಿಂದ* ಇರುತ್ತಾರೆ ಎಂಬುದನ್ನಂತೂ ಬೈಬಲ್ ತಿಳಿಸುತ್ತದೆ (ಲೂಕ 16:19-31). ತಾವು ಯೇಸುವಿನ ರಕ್ತದಿಂದ ರಕ್ಷಿಸಲ್ಪಟ್ಟಿದ್ದಾರೆಂಬುದು ನೀತಿವಂತರಿಗೆ ಗೊತ್ತಿರುತ್ತದೆ.

20:11-15ರಲ್ಲಿ ಅವಿಶ್ವಾಸಿಗಳ ಅಂತ್ಯಸ್ಥಿತಿಯ ಮೇಲೆ *ಒತ್ತು* ಇರುತ್ತದೆ, ಮತ್ತು ವಾಕ್ಯಭಾಗದ ಪ್ರಾಥಮಿಕ ಉದ್ದೇಶವು ಸೈತಾನನನ್ನು ಮತ್ತು ಮೃಗಗಳನ್ನು ಹಿಂಬಾಲಿಸಿದವರ ನಿತ್ಯವಾದ ಅಂತ್ಯಸ್ಥಿತಿಯನ್ನು ತೋರಿಸಿ ಕೊಡುವದೇ. ಹಾಗಿದ್ದರೂ, 20:11-15ರಲ್ಲಿನ ವಿವರಗಳು ನ್ಯಾಯತೀರ್ಪಿನ ದಿನವು ನೀತಿವಂತರು ಮತ್ತು ಅನೀತಿವಂತರು ಇಬ್ಬರಿಗಾಗಿಯೂ ಇರುತ್ತದೆಂಬ ಬೈಬಲಿನ ಸಾಮಾನ್ಯ ಬೋಧನೆಯೊಂದಿಗೆ ಸಹಮತವನ್ನು ತೋರಿಸುತ್ತವೆ. ದೊಡ್ಡವರೂ ಚಿಕ್ಕವರೂ ಸಿಂಹಾಸನದ ಮುಂದೆ ನಿಂತಿರುವರು; ಮರಣ, ಪಾತಾಳ, ಹಾಗೂ ಸಮುದ್ರದ ವಶದಲ್ಲಿದ್ದ ಎಲ್ಲರೂ ಕರ್ತನ ಮುಂದೆ ನಿಂತಿರುತ್ತಾರೆ. ಆ ನಂತರ ಅವಿಶ್ವಾಸಿಗಳಿಗಾಗುವ ಅಂತ್ಯಾವಸ್ಥೆಯು ವಾಕ್ಯಭಾಗದಲ್ಲಿ ಸೂಚ್ಯಾರ್ಥವಾಗಿ ತಿಳಿಸಲ್ಪಟ್ಟಿರುತ್ತದೆ, ವಿಶ್ವಾಸಿಗಳ ಅಂತ್ಯಾವಸ್ಥೆಯನ್ನು 21 ಹಾಗೂ 22 ಅಧ್ಯಾಯಗಳಲ್ಲಿ ಚರ್ಚಿಸಲ್ಪಡುವಂತೆ ಉಳಿಸುತ್ತದೆ.

**ವಚನ 14. ಆಮೇಲೆ ಮೃತ್ಯುವೂ ಪಾತಾಳವೂ ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟವು.** ಮರಣ ಮತ್ತು ಪಾತಾಳಗಳು ಪ್ರಕಟನೆ ಪುಸ್ತಕದಲ್ಲಿ ಮಾನವರೆಲ್ಲರನ್ನೂ ನುಂಗುವ ಉದ್ದೇಶವುಳ್ಳ "ಎರಡು ಹೊಟ್ಟೆಬಾಕತನ ಹಾಗೂ ಸಂತೃಪ್ತಿಗೊಳ್ಳದ ರಾಕ್ಷಸರು" ಎಂಬಂತೆ ವ್ಯಕ್ತೀಕರಣಗೊಳಿಸಲ್ಪಟ್ಟಿವೆ. 13ನೇ ವಚನದಲ್ಲಿ, ಅವುಗಳನ್ನು ತಮ್ಮ ಬೇಟೆಗಳನ್ನು ಕಕ್ಕುವಂತೆ ಒತ್ತಾಯಿಸಲಾಗುತ್ತದೆ.[54] ಅವುಗಳ ಉದ್ದೇಶವು ತೀರಿದ ಬಳಿಕ, ಸ್ವತಃ ಅವುಗಳೇ ತೊಲಗಿಸಲ್ಪಡಲಿದ್ದವು. ಪೌಲನು ಹೀಗೆ ಬರೆದನು, "ಮರಣವು ಕಡೇ ಶತ್ರುವಾಗಿ ನಿವೃತ್ತಿಯಾಗುವದು" (1 ಕೊರಿಂಥ 15:26).

ಮರಣ ಹಾಗೂ ಪಾತಾಳಗಳು ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟವು. ವಾಕ್ಯಭಾಗವು ಆ ಗಮ್ಯತೆಯ ಕುರಿತು ಈ ಟಿಪ್ಪಣಿಯನ್ನು ಸೇರ್ಪಡೆಗೊಳಿಸುತ್ತದೆ: **ಆ ಬೆಂಕಿಯ ಕೆರೆಯೇ ಎರಡನೆಯ ಮರಣವು.** "ಎರಡನೆಯ ಮರಣ" ಎಂಬ ಪದವು ಈ ಮುಂಚೆ, ಸ್ಮುರ್ನದಲ್ಲಿರುವ ಸಭೆಗೆ ಬರೆದ ಪತ್ರದಲ್ಲಿ ಬಳಸಲ್ಪಟ್ಟಿತು (2:11ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಬೈಬಲಿನಲ್ಲಿ, "ಮರಣ" ಎಂಬ ಪದವು ಅಗಲುವಿಕೆ ಎಂಬ ಅರ್ಥದಲ್ಲಿ ಬಳಸಲ್ಪಟ್ಟಿದೆ: ದೇಹ ಮತ್ತು ಆತ್ಮಗಳು ಅಗಲಲ್ಪಡುವ ವೇಳೆ ದೇಹದ ಮರಣವು ಸಂಭವಿಸುತ್ತದೆ (ಯಾಕೋಬ 2:26), ಆತ್ಮೀಕ ಮರಣವು ಒಬ್ಬ ವ್ಯಕ್ತಿಯ ಪಾಪವು ಆತನನ್ನು ಈ ಜೀವಿತದಲ್ಲಿ ದೇವರಿಂದ ಅಗಲಿಸುವ ವೇಳೆ ಸಂಭವಿಸುತ್ತದೆ (ಯೆಶಾಯ 59:1, 2; ಎಫೆಸ 2:1; 1 ತಿಮೊಥೆ 5:6), ಮತ್ತು "ಎರಡನೆಯ ಮರಣ" ಎಂದರೆ ಬರಲಿರುವ ಜೀವಿತದಲ್ಲಿ ದೇವರಿಂದ *ನಿತ್ಯವಾಗಿ* ಅಗಲಿಸಲ್ಪಡುವದೇ (2 ಥೆಸಲೋನಿಕ 1:8, 9; ನೋಡಿರಿ ಮತ್ತಾಯ 7:23; 25:12).

"ಎರಡನೆಯ ಮರಣ" **ಬೆಂಕಿಯ ಕೆರೆಯಲ್ಲಿ** ಸಂಭವಿಸುತ್ತದೆ. ಮುಂದಿನ ಅಧ್ಯಾಯದಲ್ಲಿ ನಾವು ಹೀಗೆ ಓದುತ್ತೇವೆ, "ಆದರೆ ಹೇಡಿಗಳು, ನಂಬಿಕೆಯಿಲ್ಲದವರು, ಅಸಹ್ಯವಾದದ್ದರಲ್ಲಿ ಸೇರಿದವರು, ಕೊಲೆಗಾರರು, ಜಾರರು, ಮಾಟಗಾರರು, ವಿಗ್ರಹಾರಾಧಕರು, ಎಲ್ಲಾ ಸುಳ್ಳುಗಾರರು ಇವರಿಗೆ ಸಿಕ್ಕುವ ಪಾಲು ಬೆಂಕಿ ಗಂಧಕಗಳುರಿಯುವ ಕೆರೆಯೇ; ಅದು ಎರಡನೆಯ ಮರಣವು" (21:8). ಸೈತಾನನ ಮಿತ್ರರು ಬೆಂಕಿಯ ಕೆರೆಯಲ್ಲಿ ದೊಬ್ಬಲ್ಪಟ್ಟಿದ್ದರು (19:20); ಸೈತಾನನು ಅಲ್ಲಿ ಹಾಕಲ್ಪಟ್ಟಿದ್ದನು (20:10); ಈಗ ತಮ್ಮ ಜೀವಿತಗಳನ್ನು ನಡಿಸುವಂತೆ ಸೈತಾನನಿಗೂ ಆತನ ಜೊತೆಗೆಲಸವರಿಗೂ ಅವಕಾಶವನ್ನು ಕೊಟ್ಟವರಿಗೋಸ್ಕರ ಅದು ಸಿದ್ಧಗೊಳಿಸಲ್ಪಡುತ್ತದೆ.

ಪ್ರಕಟನೆ ಪುಸ್ತಕದಲ್ಲಿ "ನರಕ" (γέεννα, *gehenna*) ಎಂಬ ಪದವು ಬಳಸಲ್ಪಟ್ಟಿಲ್ಲವಾದರೂ, ಅದು ಯೋಹಾನನು ಕರೆಯುವ "ಬೆಂಕಿಯ ಕೆರೆ" ಎಂಬ ಸ್ಥಳಕ್ಕೆ ಸಮಾನವಾಗಿದೆ. *Gehenna*, ಎಂಬುದು "ಹಿನ್ನೋಮ್ ಪುತ್ರನ ಕಣಿವೆ" ಎಂಬುದರ ಒಂದು ಸಂಕ್ಷೆಪಣವಾಗಿರುತ್ತದೆ, ಅದು ಯೆರೂಸಲೇಮಿನ ದಕ್ಷಿಣ ಮತ್ತು ಪಶ್ಚಿಮ ದಿಕ್ಕಿನಲ್ಲಿರುವ ಕಣಿವೆಗೆ ಇಟ್ಟಿದ್ದ ಹೆಸರಾಗಿತ್ತು, ಅದು ಆಧುನಿಕ *Wadi er Rababi* ಎಂಬ ಸ್ಥಳವಾಗಿದೆ. ಒಂದು ಪಾಷಂಡಿ ಮತದ ಗುಡಿಯಾಗಿದ್ದ ಅಲ್ಲಿ ನರಬಲಿಗಳನ್ನು ಅರ್ಪಿಸಲಾಗುತ್ತಿತ್ತು (2 ಅರಸು 23:10; ಯೆರೆಮೀಯ 7:31), ಇದು ಒಂದು ಅಪವಿತ್ರವಾದ ಹೆಸರನ್ನು ಪಡೆದುಕೊಂಡಿತ್ತು. ಈ ಸ್ಥಳದ ವಿರುದ್ಧ ಪ್ರವಾದನಾತ್ಮಕ ಖಂಡನೆಯಿದ್ದ ನಿಮಿತ್ತವಾಗಿ (ಯೆರೆಮೀಯ 7:32; 19:6), ಅಂತ್ಯಕಾಲಿಕ ಸಾಹಿತ್ಯಗಳಲ್ಲಿ ಅಂತಿಕ ನರಕದ ದಂಡನೆಗೆ ಸಮಾನಗೊಳಿಸಲ್ಪಟ್ಟಿತ್ತು. ಹೊಸ ಒಡಂಬಡಿಕೆಯ ಕಾಲಗಳ ಹೊತ್ತಿಗೆ, ಈ ಕಣಿವೆಯನ್ನು ತ್ಯಾಜ್ಯಗಳನ್ನು ಎಸೆಯುವ ತಿಪ್ಪೆ ಮೈದಾನವಾಗಿ ಬಳಸಲಾಗುತ್ತಿತ್ತು. ಕೊಳೆಯುವ ಕಸಕ್ಕೆ ಹಚ್ಚಲಾಗಿದ್ದ ಬೆಂಕಿಯಿಂದ ಹೊಗೆಯ ಅಲೆಯು ಮೇಲಕ್ಕೆ ಏರುತ್ತಲಿತ್ತು, ಯೇಸು ಮತ್ತು ಇತರರು ಇದನ್ನು, ಸತ್ತವರ ಅಂತಿಮ ನಿವಾಸವಾದ "ಬೆಂಕಿಯ ಕೆರೆ"ಗೆ ಒಂದು ಸೂಕ್ತವಾದ ಸಂಕೇತವೆಂದು ಪರಿಗಣಿಸಿದ್ದರು (ಮತ್ತಾಯ 5:22; ಮಾರ್ಕ 9:43).

ಯೇಸುವು ಈ ಭಯಂಕರವಾದ ಸ್ಥಳವನ್ನು "ಬೆಂಕೀಕೊಂಡ" ಎಂದು ಕರೆದನು (ಮತ್ತಾಯ 13:42). ಇನ್ನೊಂದು ಸಂದರ್ಭದಲ್ಲಿ ಆತನು ಅದನ್ನು "ಹೊರಗೆ ಕತ್ತಲೆ" ಎಂದು ಕರೆದನು (ಮತ್ತಾಯ 22:13). ನಿಯಮದ ಪ್ರಕಾರ, ಬೆಂಕಿಯು ಕತ್ತಲೆಯ ಬದಲಾಗಿ ಬೆಳಕನ್ನು ಒದಗಿಸುತ್ತದಾದ್ದರಿಂದ, ಯೇಸುವು ಬಣ್ಣಿಸಲಾಗದ್ದನ್ನು ಬಣ್ಣಿಸುವದಕ್ಕೆ ಸಂಕೇತವನ್ನು ಬಳಸುತ್ತಿದ್ದಾನೆ. ಇದು ನರಕದ ಭಯಾನಕತೆಗಳನ್ನು ಮಂದಗೊಳಿಸುವದಿಲ್ಲ, ಆದರೆ ಅವುಗಳನ್ನು ತೀಕ್ಷ್ಣಗೊಳಿಸುತ್ತದೆ. ರಾತ್ರಿಯಲ್ಲಿನ ಭಯಗಳನ್ನು ಕುರಿತು ಜ್ಞಾಪಿಸಿಕೊಳ್ಳಿರಿ; ಒಂದು ಸುಡುವ ಉರಿಯ ನೋವನ್ನು ನೆನಪಿಸಿಕೊಳ್ಳಿರಿ. ಭಯ ಹಾಗೂ ನೋವುಗಳನ್ನು ಕೋಟ್ಯಾಂತರ ಸಾರಿ ಗುಣಕಾರ ಮಾಡಿರಿ, ಅವುಗಳ ಅಪರಿಮಿತಕ್ಕೆ ವಿಸ್ತರಿಸಿರಿ, ಮತ್ತು ಆಗಲೂ ನೀವು ನಿಜವಾಗಿಯೂ ನರಕವು ಎಷ್ಟೊಂದು ಭಯಂಕರವಾದದ್ದೆಂಬುದನ್ನು ವ್ಯಕ್ತಪಡಿಸಿರುವದಕ್ಕೆ ಸಾಧ್ಯವಿರುವದಿಲ್ಲ.

ಅನೇಕರು ಪರಲೋಕದಲ್ಲಿ ನಂಬಿಕೆಯಿಡಲು ಬಯಸುತ್ತಾರೆ, ಆದರೆ ನರಕವನ್ನಲ್ಲ. ಹೇಗೂ, ಒಂದರ ಕುರಿತು ಹೇಳುವಂಥ ಅದೇ ಪುಸ್ತಕವು ಮತ್ತೊಂದರ ಬಗ್ಗೆ ಸಹ ತಿಳಿಸುತ್ತದೆ. ನರಕದ ಕುರಿತು ಬೈಬಲ್ ಹೇಳುವದನ್ನು ನಾವು ನಂಬುವದಿಲ್ಲವಾದರೆ, ಅದು ಪರಲೋಕದ ಕುರಿತು ಹೇಳುವದನ್ನು ನಾವು ವಿಶ್ವಾಸಿಸುವದಕ್ಕೆ ಸಾಧ್ಯವಿಲ್ಲ. ಜನರಿಗೆ ಅದು ಇಷ್ಟವಾದರೂ ಸರಿಯೇ ಅಥವಾ ಆಗದಿದ್ದರೂ ಸರಿಯೇ, "ಬೆಂಕಿ ಗಂಧಕಗಳುರಿಯುವ ಕೆರೆ" ಎಂಬುದೊಂದು

ಇರುತ್ತದೆ.

**ವಚನ 15.** ನ್ಯಾಯತೀರ್ಪನ್ನು ದೇವರ ವಾಕ್ಯದೊಂದಿಗೆ ಜನರ ಜೀವಿತಗಳ ದಾಖಲೆಯನ್ನು ಹೋಲಿಕೆ ಮಾಡಿ ನೊಡುವಂತೆಯೂ, ಮತ್ತು ಬಳಿಕ ಜೀವಬಾಧ್ಯರ ಪಟ್ಟಿಯನ್ನು ಅಂತಿಮ ಅಧಿಕಾರವೆಂದು ಗುರುತಿಸಲ್ಪಟ್ಟಂತೆಯೂ ಚಿತ್ರಿಸಿಕೊಳ್ಳಬಹುದಾಗಿದೆ. 15ನೇ ವಚನವು ಹೇಳುವದೇನೆಂದರೆ **ಯಾವನ ಹೆಸರು ಜೀವಬಾಧ್ಯರ ಪಟ್ಟಿಯಲ್ಲಿ ಬರೆದದ್ದಾಗಿ ಕಾಣಲಿಲ್ಲವೋ ಅವನು ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟನು** (ವಚನಗಳು 12, 14ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ನ್ಯಾಯತೀರ್ಪಿನಲ್ಲಿ ಏನು ಸಂಭವಿಸುತ್ತದೆಂಬುದನ್ನು ಯಾರೂ ನಿಖರವಾಗಿ ತಿಳಿದಿರುವದಿಲ್ಲ - ಆದರೆ ನಾವು ಏನನ್ನು ತಿಳಿದುಕೊಳ್ಳಬೇಕೆಂದು ದೇವರು ಬಯಸುತ್ತಾನೋ ಅದನ್ನಂತೂ ನಾವು ಬಲ್ಲೆವು. ಜನರು ದೇವರು ಮುಂದೆ ನಿಂತುಕೊಳ್ಳುವಾಗ, ಪುಸ್ತಕಗಳು ತೆರೆಯಲ್ಪಡುವವು ಮತ್ತು ಅವರು ಈ ಜೀವಿತದಲ್ಲಿ ಮಾಡಿದ ಕೃತ್ಯಗಳಿಗೆ ಆ ಪುಸ್ತಕಗಳ ಪ್ರಕಾರವಾಗಿ ಅವರಿಗೆ ನ್ಯಾಯತೀರ್ಪಾಗುವದು.

15ನೇ ವಚನದ ಮುಕ್ತಾಯದ ಮಾತುಗಳು ಹೃದಯಕ್ಕೆ ವೇದನೆಯನ್ನುಂಟು ಮಾಡುವಂಥವುಗಳು: **ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟನು**. ಯಾವನಾದರೂ ನಾಶವಾಗುವದರಲ್ಲಿ ದೇವರಿಗೆ ಇಷ್ಟವಿಲ್ಲ (2 ಪೇತ್ರ 3:9). ಆತನು ಜನರನ್ನು ನರಕಕ್ಕೆ ಹೋಗದಂತೆ ತಡೆಯುವದಕ್ಕೆ ತಾನು ಮಾಡಬೇಕಾಗಿದ್ದನ್ನು ಮಾಡಿರುತ್ತಾನೆ. Coffmanನು ಹೀಗೆ ಬರೆದನು, "ಕ್ರಿಸ್ತನು ಯಾವದೇ ಮನುಷ್ಯನೂ ಎಂದಿಗಾದರೂ ನಾಶನಕ್ಕೆ ಪಾತ್ರವಾದ ದಂಡನೆಯನ್ನು ಅನುಭವಿಸುವದರಿಂದ ತಡೆಯುವದಕ್ಕಾಗಿ ತನ್ನ ರಕ್ತ ಸುರಿಯುವ ಕೈಗಳನ್ನು ಶಿಲುಬೆಯ ಮೇಲೆ ಚಾಚಿದನು; ಆದರೆ ಇದನ್ನು ನಿರ್ಲಕ್ಷ್ಯಿಸುವದಕ್ಕೆ ತೀರ್ಮಾನಿಸಿಕೊಳ್ಳುವ ಮನುಷ್ಯರು ತಮ್ಮ ಭವಿಷ್ಯತ್ತಿನ ಪರಿಣಾಮ ಜವಾಬ್ದಾರಿಯನ್ನು ತಾವೇ ಹೊತ್ತುಕೊಳ್ಳಬೇಕು."[55] ನೀರಿನಲ್ಲಿ ಮುಳುಗುತ್ತಿರುವ ವ್ಯಕ್ತಿಯ ಕಡೆಗೆ ಒಬ್ಬ ಜೀವರಕ್ಷಕ ಸಾಧನವನ್ನು ಎಸೆದರೂ ಆ ಮನುಷ್ಯನು ಅದನ್ನು ಎಳೆದು ಹಿಡಿದುಕೊಳ್ಳಲು ನಿರಾಕರಿಸುವದಾದರೆ, ಮುಳುಗುತ್ತಿರುವ ವ್ಯಕ್ತಿಯು ತನ್ನ ಕೃತ್ಯಕ್ಕೆ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕಾಗುತ್ತದೆ.

## ಅನ್ವಯಿಸುವಿಕೆ

### ಸುರಕ್ಷತೆಯ ಬಲೆ (20:1-10)

ಒಂದು ಸಾರಿ ಒಬ್ಬ ಮನುಷ್ಯನು ಸರ್ಕಸ್ ಜೋಕಾಲಿ ದಂಡದ ಕಲಾಕಾರನನ್ನು ಆತನು ಹಾಗೂ ಆತನ ತಂಡದವರು ಪ್ರದರ್ಶನವನ್ನು ಮಾಡುವ ಸ್ಥಳದ ಕೆಳಗಡೆಯಲ್ಲಿ ಒಂದು ಬಲೆಯನ್ನು ಎಳೆದು ಕಟ್ಟಲಾಗಿರುವ ಉದ್ದೇಶವು ಏನೆಂದು ಕೇಳಿದನು. ಅವರ ಕೆಳಗಡೆಯಲ್ಲಿ ಬಲೆಯಿರುವ ಉದ್ದೇಶವು ಅವರು ತಮ್ಮ ಕುತ್ತಿಗೆಗಳನ್ನು ಮುರಿದುಕೊಳ್ಳುವದರಿಂದ ತಡೆಯುವದಕ್ಕಾಗಿಯೇ ಎಂದು ಒಪ್ಪಿಕೊಂಡನು, ಆದರೆ ಆತನು ಇನ್ನೂ ಹೇಳಿದ್ದೇನೆಂದರೆ, "ಬಲೆಯು ಇಲ್ಲವಾದರೆ, ನಾವು ಬಹಳವಾಗಿ ಅಧೈರ್ಯಕ್ಕೊಳಗಾಗಿ ಕೆಳಕ್ಕೆ ಬೀಳುವ ಸಾಧ್ಯತೆಯು ಅಧಿಕವಾಗಿರುತ್ತದೆ. ಅಲ್ಲೊಂದು ಬಲೆಯಿಲ್ಲವಾಗಿದ್ದಲ್ಲಿ, ನಾವು ಮಾಡುವಂಥ ಕೆಲವೊಂದು ಸಂಗತಿಗಳನ್ನು ಮಾಡುವದಕ್ಕೆ ಧೈರ್ಯಗೊಳ್ಳುತ್ತಿರಲಿಲ್ಲ."[56]

20:1-10ರಲ್ಲಿ, ಕ್ರೈಸ್ತರಿಗೆ ಭರವಸೆ ಕೊಡಲ್ಪಡುವದೇನೆಂದರೆ (1) ಸೈತಾನನ ಶಕ್ತಿಯು ಮಿತಿಯಾಗಿರುತ್ತದೆ (ವಚನಗಳು 1-3), (2) ಸತ್ತಿರುವ ನಂಬಿಗಸ್ತರು ಕ್ರಿಸ್ತನೊಂದಿಗೆ ಆಳ್ವಿಕೆ ಮಾಡುವರು (ವಚನಗಳು 4-6), ಮತ್ತು (3) ಸೈತಾನನು ಅಂತಿಮವಾಗಿ ನಾಶಗೊಳ್ಳುವನು

(ವಚನಗಳು 7-10). ಇವುಗಳ ರೀತಿಯಾದ ಭರವಸೆಗಳು ದೇವರು ತನ್ನ ಜನರಿಗೆ ನೀಡುವ "ಸುರಕ್ಷತೆಯ ಬಲೆ" ಆಗಿರುತ್ತವೆ. ಈ "ಸುರಕ್ಷತೆಯ ಬಲೆ"ಯು ಕ್ರೈಸ್ತರಿಗೆ ಅದು ಇಲ್ಲದೆ ಹೋಗಿದ್ದರೆ ಅವರು ಮಾಡದಿರುತ್ತಿದ್ದ ಸಂಗತಿಗಳನ್ನು ಸಾಧಿಸುವಂತೆ ಶಕ್ತಗೊಳಿಸುತ್ತದೆ.

## ಸೈತಾನನು ಬಂಧನದಲ್ಲಿಡಲ್ಪಡುತ್ತಾನೆ (20:1-3)

ಸೈತಾನನು ಶಿಲುಬೆಯ ಮೂಲಕ ಸೋಲಿಸಲ್ಪಟ್ಟಿರುತ್ತಾನೆ. ನಮ್ಮನ್ನು ಯಾವದು ಬಿಡುಗಡೆಗೊಳಿಸಿತೋ ಅದೇ ಆತನನ್ನು ಬಂಧನದಲ್ಲಿಟ್ಟಿರುತ್ತದೆ.[57] ಈ ರೀತಿಯಾಗಿ ಹಿಮ್ಮೊಗವಾದದ್ದು ನಮ್ಮನ್ನು ಸಂಭ್ರಮಿಸುವಂತೆ ಮಾಡತಕ್ಕದ್ದು. ಅಷ್ಟುಮಾತ್ರವಲ್ಲದೆ, ಇದು ನಮ್ಮ ಕೃತ್ಯಗಳಿಗೆ ವೈಯಕ್ತಿಕ ಜವಾಬ್ದಾರಿಯನ್ನು ವಹಿಸಿಕೊಳ್ಳುವಂತೆ ನಮ್ಮನ್ನು ನಡಿಸತಕ್ಕದ್ದು. ಕೆಲವರು "ಸೈತಾನನು ಹಾಗೆ ಮಾಡುವಂತೆ ನನ್ನನ್ನು ನಡಿಸಿದನು" ಹೇಳುವ ಮೂಲಕ ತಮ್ಮ ಪಾಪಗಳಿಗೆ ನೆಪಗಳನ್ನು ನೀಡಲು ಪ್ರಯತ್ನಿಸುತ್ತಾರೆ. ಸೈತಾನನು ಬೆದರಿಕೆಯನ್ನೊಡ್ಡಬಹುದು, ಸೈತಾನನು ಶೋಧಿಸಬಹುದು, ಮತ್ತು ಸೈತಾನನು ಆಸೆ ತೋರಿಸಿ ಪೀಡಿಸಬಹುದು - ಆದರೆ ಸೈತಾನನು ಯಾವನನ್ನೂ ಏನಾದರೂ ಮಾಡುವಂತೆ *ಮಾಡಲು* ಸಾಧ್ಯವಿಲ್ಲ. ಆತನು ಬಂಧನದಲ್ಲಿಡಲ್ಪಟ್ಟಿದ್ದಾನೆ. ಆದದರಿಂದ ನಮ್ಮಲ್ಲಿ ಒಬ್ಬೊಬ್ಬರೂ ಅವನವನ ಕೃತ್ಯಗಳಿಗೆ ಜವಾಬ್ದಾರರಾಗಿದ್ದೇವೆ. ಒಂದು ದಿನ, "ಹೀಗಿರಲಾಗಿ ನಮ್ಮಲ್ಲಿ ಪ್ರತಿಯೊಬ್ಬನು ತನ್ನ ತನ್ನ ವಿಷಯವಾಗಿ ದೇವರ ಮುಂದೆ ಉತ್ತರಕೊಡಬೇಕು" (ರೋಮಾ 14:12). ನೀವು ನಾಶನಕ್ಕೆ ಹೋಗುವದಾದಲ್ಲಿ, ನೀವು ನಿಮ್ಮನ್ನೇ ಹೊರತು ಬೇರೆ ಯಾರನ್ನೂ ಹೊಣೆಗಾರರನ್ನಾಗಿ ಮಾಡಲು ಸಾಧ್ಯವಿಲ್ಲ.

ಗತಕಾಲದ ದಿನಗಳಲ್ಲಿ, ಹೆಚ್ಚಾಗಿ ಬಳಸಲ್ಪಡುತ್ತಿದ್ದ ದೃಷ್ಟಾಂತವು ಸೈತಾನನು ಬಂಧನದಲ್ಲಿಡಲ್ಪಡುವದನ್ನು ಒಂದು ಕ್ರೂರ ಮೃಗವನ್ನು ಸರಪಣಿಗಿಂದ ಕಟ್ಟಲ್ಪಡುವದಕ್ಕೆ ಹೋಲಿಕೆ ಮಾಡುತ್ತಿತ್ತು. ಬೋಧಕರು ಅದರಿಂದ ತಿಳಿಯಪಡಿಸುತ್ತಿದ್ದ ಅಂಶವು ಏನೆಂದರೆ, ನಾವು ಮೃಗದ ಕೈಗೆ ಸಿಕ್ಕದಂತೆ ದೂರವಿರುವಷ್ಟು ಕಾಲ, ಅದು ಊಳಿಡಬಹುದು ಮತ್ತು ಕಿರಿಚಿಕೊಳ್ಳಬಹುದು, ಆದರೆ ಅದು ನಮಗೆ ಕೇಡು ಮಾಡಲಾರದು. ಹೇಗೂ, ನಾವು ಆತನ ಕ್ಷೇತ್ರದೊಳಗೆ ಉಳಿದುಕೊಳ್ಳುವದಾದರೆ, ಸರಪಣಿ ಹಾಕಲ್ಪಟ್ಟಿರಲಿ ಅಥವಾ ಹಾಕಲ್ಪಡದೆ ಇರಲಿ, ಅದು ನಮ್ಮನ್ನು ತುಂಡುಗಳಾಗಿ ಸೀಳಿ ಹಾಕಬಲ್ಲದು. ಈ ದೃಷ್ಟಾಂತವು ಅತ್ಯಂಥ ಅಧಿಕವಾಗಿ ಬಳಸಲ್ಪಟ್ಟಿರುವದರಿಂದ ಇದು ಸರ್ವೆಸಾಮಾನ್ಯವೆಂದು ತೋರಬಹುದು. ಸರ್ವೆಸಾಮಾನ್ಯವೋ ಅಥವಾ ಅಲ್ಲವೋ, ಅದು ಈಗಲೂ ಬೆಲೆಯುಳ್ಳದ್ದಾಗಿದೆ. ನಾವು ಕರ್ತನ ಹಿಂಡಿನಲ್ಲಿ ಸದಸ್ಯರಾಗಿರುವಷ್ಟು ಕಾಲ; ಒಳ್ಳೇ ಕುರುಬನನ್ನು "ನೀತಿ ಮಾರ್ಗದಲ್ಲಿ" (ಕೀರ್ತನೆ 23:3) ಹಿಂಬಾಲಿಸುತ್ತಾ ಇರುವ ವರೆಗೂ, ಸೈತಾನನು ನಮ್ಮ ಮೇಲೆ ಅಷ್ಟೇನೂ ಪರಿಣಾಮವನ್ನು ಬೀರಲಾರನು. ಆತನು ನಮ್ಮನ್ನು ಶಾರೀರಿಕವಾಗಿ ಕೊಲ್ಲಬಹುದು, ಆದರೆ ನಾವು ಕರ್ತನಿಗೆ ನಿಕಟವಾಗಿ ಇರುವ ವರೆಗೂ ಆತನು ನಮ್ಮನ್ನು ಆತ್ಮೀಕವಾಗಿ ನಾಶಗೊಳಿಸಲಾರನು. "ದೇವರಿಂದ ಹುಟ್ಟಿರುವವನ" ವಿಷಯದಲ್ಲಿ, ಯೋಹಾನನು "ಕೆಡುಕನು ಅವನನ್ನು ಹಿಡಿಯುವದಿಲ್ಲ" ಎಂದು ಹೇಳುತ್ತಾನೆ (1 ಯೋಹಾನ 5:18). ಹೇಗೂ, ನಾವು ಹಿಂಡನ್ನು ಬಿಟ್ಟು ಬೇರೆ ಕಡೆಗೆ ಹೋಗುವಾದರೆ, "ಗರ್ಜಿಸುವ ಸಿಂಹ" (1 ಪೇತ್ರ 5:8) ಆಗಲೂ ನಮ್ಮನ್ನು ಅಂಗದಿಂದ ಅಂಗಗಳನ್ನು ಬೇರ್ಪಡಿಸುವಂತೆ ಸೀಳಿ ಹಾಕಬಲ್ಲದು.

## ಎಲ್ಲಾ ವಿಶ್ವಾಸಿಗಳಿಗಾಗಿ ಆಶೀರ್ವಾದಗಳು (20:4-6)

ನೀವು ಎರಡು ಅಂಕಣಗಳನ್ನೊಳಗೊಂಡ ಒಂದು ಹೋಲಿಕೆ ನಕ್ಷೆಯನ್ನು ತಯಾರಿಸಬಹುದು: ಮೊದಲನೆಯ ಅಂಕಣದ ಮೇಲ್ಗಡೆಯಲ್ಲಿ "ಎಲ್ಲಾ ಕ್ರೈಸ್ತರು" ಎಂದು ಹೆಸರು ಬರೆಯಿರಿ, ಮತ್ತು ಎರಡನೆಯದ್ದರ ಮೇಲ್ಗಡೆಯಲ್ಲಿ "ರಕ್ತಸಾಕ್ಷಿಗಳು" ಎಂದು ಬರೆಯಿರಿ. ಒಂದೊಂದು ಶಿರೋನಾಮೆಯ ಕೆಳಗಡೆಯಲ್ಲಿ, 20:4-6ರಲ್ಲಿ ಪ್ರಸ್ತಾಪಿಸಲಾಗಿರುವ ಆಶೀರ್ವಾದಗಳನ್ನು ಬರೆಯಿರಿ, 20ನೇ ಅಧ್ಯಾಯದಲ್ಲಿ ರಕ್ತಸಾಕ್ಷಿಗಳಿಗೆ ಸಿಕ್ಕುತ್ತವೆಂದು ಹೇಳಿದ ಪ್ರತಿಯೊಂದು ಆಶೀರ್ವಾದಗಳು ಬೇರೊಂದು ಕಡೆಯಲ್ಲಿ ಕ್ರೈಸ್ತರಿಗೆ ಸಹ ವಾಗ್ದಾನ ಮಾಡಲ್ಪಟ್ಟಿವೆ ಎಂಬುದನ್ನು ಒತ್ತಿ ಹೇಳಿರಿ. ಬಳಿಕ, ರಕ್ತಸಾಕ್ಷಿಗಳು *ಈಗಲೂ* ಆ ಆಶೀರ್ವಾದಗಳನ್ನು ಹೊಂದಿದ್ದರೆಂದು ಒತ್ತಿ ಹೇಳಲಾಗಿರುತ್ತದೆಂಬುದನ್ನು ವಿವರಿಸಿರಿ.

## ನೀವು ಗೆಲ್ಲುವಿರಿ (20:4-6)

20:4-6ರ ಮುಖ್ಯ ಒತ್ತು ಏನೆಂದರೆ: ನೀವು ಕರ್ತನಿಗೆ ನಂಬಿಗಸ್ತರಾಗಿ ಉಳಿಯುವದಾದರೆ, ಸೈತಾನನು ಸೋಲುವನು ಮತ್ತು ನೀವು ಗೆಲ್ಲುವಿರಿ! ಈ ವಾಕ್ಯಭಾಗದಲ್ಲಿ ಪ್ರಥಮ ಶತಮಾನದೊಳಗೆ ತಮ್ಮ ನಂಬಿಕೆಯ ನಿಮಿತ್ತವಾಗಿ ಮರಣಿಸಿದವರ ಕುರಿತು ಒತ್ತಿ ಹೇಳಲಾಗಿರುತ್ತದೆ. ಪ್ರತಿಯೊಬ್ಬ ಕ್ರೈಸ್ತನಿಗೆ ಕೊಡಲಾಗಿದ್ದ ವಾಗ್ದಾನಗಳನ್ನು ಮರಣವು ರದ್ದುಗೊಳಿಸಲಿಲ್ಲ, ಸತ್ತಿರುವ ನಂಬಿಗಸ್ತರು ಈಗಲೂ ಆ ವಾಗ್ದಾನಗಳನ್ನು ಅನುಭವಿಸುತ್ತಿದ್ದರೆಂಬುದನ್ನು ಗಮನಕ್ಕೆ ತರಲಾಯಿತು. ಪ್ರಕಟನೆ 20ರಲ್ಲಿ ರಕ್ತಸಾಕ್ಷಿಗಳಿಗೆ ವಾಗ್ದಾನ ಮಾಡಿದ ಆಶೀರ್ವಾದಗಳು *ನಿಮ್ಮವುಗಳು* ಸಹ ಆಗಬಲ್ಲವು: *ನೀವು* ನಿಜವಾದ ಜೀವವನ್ನು ತಿಳಿಯಬಲ್ಲಿರಿ; *ನೀವು* ಕರ್ತನಿಗೆ ಯಾಜಕರಾಗಿರಬಲ್ಲಿರಿ; *ನೀವು* ಕ್ರಿಸ್ತನೊಂದಿಗೆ ಆಳ್ವಿಕೆ ಮಾಡಬಲ್ಲಿರಿ. ಅಷ್ಟುಮಾತ್ರವಲ್ಲದೆ, ನೀವು ಇದನ್ನು ಒಂದು "ಸಾವಿರ ವರುಷಗಳ" ಕಾಲ ಮಾಡಬಹುದು - ಅಂದರೆ, ಸಂಪೂರ್ಣವಾಗಿಯೂ ಪೂರ್ತಿಯಾಗಿಯೂ ಮಾಡಬಲ್ಲಿರಿ. ಅದು ಆಶ್ಚರ್ಯಕರವಾಗಿಲ್ಲವೋ?

## ಸೈತಾನನು ಸೋಲಿಸಲ್ಪಟ್ಟನು (20:7-10)

20:7-10ರ ಆಧಾರದ ಮೇಲಿನ ಒಂದು ಪಾಠವು ಈ ಕೆಳಗಿನ ಶಿರ್ಷೀಕೆಗಳಲ್ಲೊಂದನ್ನು ಬಳಸಿಕೊಳ್ಳಬಹುದು: "ವಿನಾಶಕನ ನಾಶನ," "ಸೈತಾನನ ಚರಮಗೀತೆ," ಸೈತಾನನ ಗಮ್ಯತೆ ಹಾಗೂ ನಾಶನ," "ಮತ್ತು ತೊಲಗಿದ್ದು ಒಳ್ಳೇದಾಯಿತು!"

20ನೇ ಅಧ್ಯಾಯದ ಮೊದಲ ಭಾಗದಲ್ಲಿ, ಸೈತಾನನನ್ನು ಬಂಧಿಸಲಾಗಿತ್ತು; 7ರಿಂದ 10 ವಚನಗಳಲ್ಲಿ ಆತನನ್ನು ತೊಲಗಿಸಲಾಗುತ್ತದೆ. ಈ ಘಟನೆಯ ಮಹತ್ವಪೂರ್ಣತೆಯನ್ನು ಮಾತುಗಳಿಂದ ವಿವರಿಸುವದಕ್ಕೆ ಸಾಧ್ಯವಿಲ್ಲ. ಒಂದು ಸ್ಥಳೀಯ ಸುದ್ದಿಪತ್ರಿಕೆಯ ಕಛೇರಿಯಲ್ಲಿ ಅದರ ಗೋಡೆಯ ಮೇಲೆ, ಪ್ರಮುಖ ಘಟನೆಗಳನ್ನು ವರದಿ ಮಾಡುವಂಥ ಕೆಲವೊಂದು ಚೌಕಟ್ಟು ಹಾಕಲಾಗಿರುವ ಸುದ್ದಿಪತ್ರಿಕೆಗಳನ್ನು ನೇತು ಹಾಕಲಾಗಿರುತ್ತದೆ. ಒಂದು ತಲೆಬರಹವು, ದೊಡ್ಡಕ್ಷರಗಳಲ್ಲಿ ಹೀಗಿರುತ್ತದೆ, "ಯುನೈಟೆಡ್ ಸ್ಟೇಟ್ಸ್ ಯುದ್ಧವನ್ನು ಘೋಷಿಸುತ್ತದೆ." ಇನ್ನೊಂದು ತಲೆಬಹರವು "ಯುದ್ಧವು ನಿಂತುಹೋಗುವದು" ಎಂದಿರುತ್ತದೆ. ಅಷ್ಟೇನೂ ಹಳೆಯದಲ್ಲದ ಒಂದು ಹೀಗೆ ಇರುತ್ತದೆ, "ಮನುಷ್ಯರು ಚಂದ್ರನ ಮೇಲೆ ನಡೆದಾಡುತ್ತಾರೆ." ಪ್ರಕಟನೆ 20ನೇ ಅಧ್ಯಾಯವನ್ನು ಸುದ್ದಿ ಪತ್ರಿಕೆಗಳಲ್ಲಿ ಮುದ್ರಿಸುವದಾದಲ್ಲಿ, ತಲೆಬರಹವು ಐದು ಇಂಚುಗಳಷ್ಟು ಅಕ್ಷರಗಳಲ್ಲಿ ಹೀಗಿರುತ್ತದೆ: "ಸೈತಾನನು

ಸೋಲಿಸಲ್ಪಟ್ಟನು!" ಇದು ದೇವರ ಪ್ರತಿಯೊಬ್ಬ ಮಗುವಿಕೆ ಎಷ್ಟೊಂದು ರೋಮಾಂಚನವನ್ನುಂಟು ಮಾಡುವದಾಗಿರಬಹುದು!

## ಕಡೇ ದಿನ (20:11-15)

W. B. West, Jr., ನು 20:11-15ಕ್ಕಾಗಿ "ಲೋಕದ ಕಡೇ ದಿನ" ಎಂಬ ಶಿರ್ಷೀಕೆಯನ್ನು ಬಳಸಿದನು. ಒಂದು ಪಾಠಕ್ಕೆ ಈ ಶಿರ್ಷೀಕೆಯನ್ನು ಕೊಡಬಹುದು "ಕಡೇ ದಿನ," ಈ ವಾಕ್ಯಭಾಗನ್ನು ಮತ್ತು ಯೋಹಾನ 6:39, 40 44, 54 ವಾಕ್ಯಭಾಗಗಳನ್ನು ಉಲ್ಲೇಖಿಸಬಹುದು. ಇನ್ನೊಂದು ಸೂಕ್ತವಾದ ಶಿರ್ಷೀಕೆಯೆಂದರೆ "ಆ ಮೇಲೆ ನ್ಯಾಯತೀರ್ಪು ನಡೆಯುವದು" (ಇಬ್ರಿಯ 9:27). ಇತರ ಸಂಭಾವ್ಯ ಶಿರ್ಷೀಕೆಗಳೆಂದರೆ "ನ್ಯಾಯತೀರ್ಪು," "ಅಂತಿಮ ತೆರೆ," ಮತ್ತು "ಮರಣಕ್ಕೆ ಮರಣವಾಗುವದು."

Jay Lockhartನು ಉತ್ತಮ ಸಂಕ್ಷಿಪ್ತ ವಿವರಣೆಯನ್ನು ನೀಡಿದ್ದನು: (1) ನಿತ್ಯವಾದ ಸಿಂಹಾಸನ (ವ. 11); (2) ನಿತ್ಯವಾದ ಪುಸ್ತಕಗಳು (ವ. 12); (3) ನಿತ್ಯವಾದ ಅಗಲುವಿಕೆ (ವಚನಗಳು 13-15); (4) ನಿತ್ಯವಾದ ತೀರ್ಮಾನ.[58]

ಒಂದು ವೀಕ್ಷಣ ಸಾಧನಕ್ಕಾಗಿ ನ್ಯಾಯತೀರ್ಪಿನ ದಿನದಂಯ ತೆರೆಯಲ್ಪಡುವ ಪುಸ್ತಕಗಳನ್ನು ಪ್ರತಿನಿಧಿಸುವದಕ್ಕೆ ನೀವು ಮೂರು ಪುಸ್ತಕಗಳ ಒಂದು ಜೊತೆಯನ್ನು (ಕಪ್ಪು ಬಿಡಿಹಾಳೆಯ ನೋಟ್ ಪುಸ್ತಕಗಳನ್ನು ಬಳಸಿ) ತಯಾರಿಸಬಹುದು. ಆ ಪುಸ್ತಕಗಳಿಗೆ "ದೇವರ ವಾಕ್ಯ," "ಕ್ರಿಯೆಗಳ ದಾಖಲೆ," ಮತ್ತು "ಜೀವಬಾಧ್ಯರ ಪಟ್ಟಿಯ ಪುಸ್ತಕ" ಎಂದು ಹೆಸರುಗಳನ್ನು ಬರೆಯಬಹುದು. ಪುಸ್ತಕಗಳ ಒಳಗೆ ನೀವು ತಿಳಿಸಲಿಚ್ಛಿಸುವ ಅಂಶಗಳನ್ನು ಬರೆಯಬಹುದು. ಪುಸ್ತಕಗಳನ್ನು ಪ್ರಸಂಗಪೀಠದ ಮೇಲೆ ಮತ್ತು ಸಂಗೀತ ಸ್ಟ್ಯಾಂಡುಗಳ ಮೇಲಿಟ್ಟು ಪ್ರದರ್ಶಿಸಬಹುದು.

## ನ್ಯಾಯತೀರ್ಪು (20:11-15)

ನಸುಕಿನ ಮುಂಜಾನೆಯಲ್ಲಿ, ನಿದ್ದೆ ಮಾಡುವದಕ್ಕೆ ಸಾಧ್ಯವಾಗದೆ, ಒಬ್ಬ ಯುವ ವಕೀಲನು ತನ್ನ ಭವಿಷ್ಯದ ಕುರಿತಾಗಿ ಆಲೋಚನೆ ಮಾಡಿದನು. ಆತನು ಆಮಂತ್ರಿಸದ ಪ್ರಶ್ನೆಗಳೆಲ್ಲಾ ಆತನ ಮನಸ್ಸಿಗೆ ತೋಚಲಾರಂಭಿಸಿದ್ದವು:

"ನೀನು ಕಾನೂನುಶಾಸ್ತ್ರದಲ್ಲಿ ತೇರ್ಗಡೆಯಾದ ಬಳಿಕ ಏನು ಮಾಡುವಿ?"

"ವಕೀಲ ವೃತ್ತಿಯನ್ನು ಮಾಡುವದು?"

"ಆ ಮೇಲೆ ಏನು?"

"ನಾನು ಶ್ರೀಮಂತನಾಗುವೆನು."

"ಆ ಮೇಲೆ ಏನು?"

"ನಾನು ನಿವೃತ್ತಿಯಾಗುವೆನು."

"ಅದಾದ ನಂತರ ಏನು?"

"ನಾನು ಮರಣಿಸುವೆನು."

"ಆ ಮೇಲೆ ಏನಾಗುವದು?"

ಒಂದು ಕ್ಷಣವು ಗತಿಸಿದ ಬಳಿಕ ಉತ್ತರವು ಬಂದಿತ್ತು, ಮತ್ತು ಅದು ತಡೆದುತಡೆದು ಬಂದಿತ್ತು: "ನ್ಯಾಯತೀರ್ಪು."

ನ್ಯಾಯತೀರ್ಪಿನಲ್ಲಿ ದೇವರನ್ನು ಎದುರುಗೊಳ್ಳುವ ಬಗ್ಗೆ ಯೋಚಿಸುವಂಥದ್ದು ಆ

ಯುವಕನ ಜೀವಿತವನ್ನೇ ಬದಲಾಯಿಸಿ ಬಿಟ್ಟಿತ್ತು[59] - ಮತ್ತು ಅದು ನಿಮ್ಮ ಜೀವಿತವನ್ನೂ ಮಾರ್ಪಡಿಸಬಲ್ಲದು.

## ನ್ಯಾಯತೀರ್ಪಿನ ಕುರಿತಾದ ಐದು ವಾಸ್ತವಾಂಶಗಳು (20:11-15)

ಮರಣಾನಂತರದ ಜೀವಿತದ ಹಾಗೂ ಯುಗಾಂತ್ಯದ ಕುರಿತಾಗಿ ಅನೇಕ ಊಹೆಗಳಿದ್ದಾವಾದರೂ, ಪ್ರಕಟನೆ 20:11-15 ವಚನಗಳು ಪ್ರತಿಯೊಬ್ಬರು ತಿಳಿದುಕೊಳ್ಳತಕ್ಕಂಥ ನ್ಯಾಯತೀರ್ಪಿನ ಕುರಿತ ಐದು ವಾಸ್ತವಾಂಶಗಳನ್ನು ಬಯಲುಗೊಳಿಸುತ್ತದೆ.

1. *ನ್ಯಾಯತೀರ್ಪಿನ ದಿನವೊಂದು ಬರಲಿದೆ* (ವ. 12). ಅಪೊಸ್ತಲನಾದ ಯೋಹಾನನು "ಸತ್ತವರಿಗೆ ನ್ಯಾಯತೀರ್ಪಾಯಿತು" ಎಂಬ ಮಾತುಗಳೊಂದಿಗೆ ಅಷ್ಟೊಂದು ಖಚಿತವಾಗಿ ವ್ಯಕ್ತಪಡಿಸಿದನು. Edward McDowellನು ಹೀಗೆ ಬರೆದನು, "ನಾವು ನಮ್ಮ ಬಹಳಷ್ಟು ಬೋಧಿಸುವದರಲ್ಲಿ ... ಇತಿಹಾಸದಲ್ಲಿ ದೇವರ ಹಸ್ತದ, ಒಂದು ಗುರಿ ಹಾಗೂ ಅದರ ನೆರವೇರಿಕೆ ಕಡೆಗೆ ಆತನು ಇತಿಹಾಸವನ್ನು ಮಾರ್ಗದರ್ಶಿಸುತ್ತಿರುವದು ಎಂಬ ಅರ್ಥದಲ್ಲಿ ಕಳೆದು ಹೋಗಿದ್ದೇವೆ. ನಮಗೆ ದೇವರು ನಡೆಯುವಂತೆ ಮಾಡುತ್ತಿರುವ ಒಂದು ನೆರವೇರಿಕೆಯು ಇರುತ್ತದೆಂಬ ಒಂದು ಹುರುಪಿನ ಖಚಿತತೆಯ ... ಅಗತ್ಯವಿರುತ್ತದೆ."[60] ಆ "ನೆರವೇರಿಕೆ"ಯು ನ್ಯಾಯತೀರ್ಪಿನ ದಿನವೇ. ಈ ಭೂಮಿಯ ಮೇಲಿನ ಜೀವಿತವು ಪರಾಕಾಷ್ಠೆಯ ಘಟನೆಯ ಕಡೆಗೆ ರಭಸವಾಗಿ ಉರುಳುತ್ತಿದೆ. ಲೋಕದ ಇತಿಹಾಸವು ಆ ಒಂದು ಸಂದರ್ಭಕ್ಕೆ ಬಂದು ನಿಲ್ಲುವದು.[61]

2. *ಕರ್ತನು ನಿಮಗೆ ನ್ಯಾಯಾಧಿಪತಿಯಾಗಿರುವನು* (ವ. 11). ಯೋಹಾನನು ದೇವರನ್ನು ನ್ಯಾಯತೀರ್ಪನ್ನು ಕೊಡಲು ಸಿದ್ಧನಾಗಿ "ಸಿಂಹಾಸನದ ಮೇಲೆ ಕೂತಿದ್ದಾತನು" ಎಂದು ಚಿತ್ರಿಸುತ್ತಾನೆ. ಒಬ್ಬ ವೇಶ್ಯೆಯನ್ನು ಆಕೆಯ ಪ್ರಾರ್ಥನ ಜೀವಿತದ ಕುರಿತಾಗಿ ಒಮ್ಮೆ ಸಂದರ್ಶನವನ್ನು ಮಾಡಲಾಗಿತ್ತು. ಪ್ರಶ್ನೆಗಳಿಗೆ ಉತ್ತರಿಸುತ್ತಾ ಆಕೆಯು ಹೀಗೆ ಹೇಳಿದ್ದಳು, "[ದೇವರು] ನನ್ನನ್ನು ನ್ಯಾಯತೀರಿಸಲು ಹೋಗುವದಿಲ್ಲ. ದೇವರು ಯಾರನ್ನೇ ಆಗಲಿ ನ್ಯಾಯತೀರಿಸುತ್ತಾನೆಂದು ನನಗನ್ನಿಸುವದಿಲ್ಲ."[62] ಆ ನಂಬಿಕೆಯು ಆಕೆಗೆ ಆಹ್ಲಾದಕರ ಅನುಭವವನ್ನುಂಟು ಮಾಡಿತ್ತು - ಆದರೆ ಅದು ಮಿಥ್ಯವಾಗಿತ್ತು. ನ್ಯಾಯತೀರ್ಪಿನಂದು, ಕರ್ತನು ನ್ಯಾಯಾಧಿಪತಿಯಾಗಿರುವನು, ಮತ್ತು "ಆತನ ನ್ಯಾಯತೀರ್ಪುಗಳು ಸತ್ಯವೂ ನ್ಯಾಯವೂ ಆಗಿವೆ" (19:2).

3. *ನೀವು ಅಲ್ಲಿರುವಿರಿ* (ವಚನಗಳು 12, 13). ಯೋಹಾನನ ದರ್ಶನದಲ್ಲಿ, ಆತನು "ಸತ್ತವರಾದ ದೊಡ್ಡವರೂ ಚಿಕ್ಕವರೂ" ನ್ಯಾಯಾಸನದ ಮುಂದೆ ನಿಂತಿರುವದನ್ನು ಕಂಡನು. ಸರಳವಾಗಿ ಹೇಳುವದಾದರೆ, ಅಲ್ಲಿ ಎಲ್ಲರೂ ಇದ್ದರು. ಪೇತ್ರನು ಗಮನಕ್ಕೆ ತಂದದ್ದೇನೆಂದರೆ ನ್ಯಾಯತೀರ್ಪು "ದೇವರ ಮನೆಯಲ್ಲಿಯೇ *ಪ್ರಾರಂಭವಾಯಿತಲ್ಲಾ*" ಎಂಬದೆ (1 ಪೇತ್ರ 4:17; ಒತ್ತಿ ಹೇಳಿದ್ದು ನನ್ನದು). ಮತ್ತಾಯ 25ರಲ್ಲಿ ಸತ್ಕಾರ್ಯಗಳನ್ನು ಮಾಡಿದವರಿಗೂ ಸತ್ಕಾರ್ಯಗಳನ್ನು ಮಾಡುವದಕ್ಕೆ ವಿಫಲರಾದವರಿಗೂ ಒಂದೇ ಗಳಿಗೆಯಲ್ಲಿ ತೀರ್ಪಾಗುವದು (ಮತ್ತಾಯ 25:31-46). ಅಲ್ಲದೆ ಪ್ರಕಟನೆ ಪುಸ್ತಕವು ಸಹ ನಂಬಿಗಸ್ತರಿಗೆ ಪ್ರತಿಫಲಗಳನ್ನು ಕೊಡುವಿಕೆ ಮತ್ತು ಸತ್ತವರಿಗೆ ನ್ಯಾಯತೀರ್ಪಾಗುವ ಸಾಮಾನ್ಯವಾದ ಸಮಯ ಏಕಕಾಲದಲ್ಲಿಯೇ ನಡೆಯುತ್ತದೆ ಎಂಬುದನ್ನು ತಿಳಿಸುತ್ತದೆ (ಪ್ರಕಟನೆ 11:18). ಶಾಸ್ತ್ರದ ಉಪದೇಶವು ಏನೆಂದರೆ ಒಂದು ದಿನ ನಮ್ಮಲ್ಲಿ *ಎಲ್ಲರೂ* ದೇವರ ಮುಂದೆ ನಿಲ್ಲಬೇಕು ಎಂಬದೆ. ನ್ಯಾಯತೀರ್ಪಿನ ದಿನದ ಉದ್ದೇಶವು, ನಂಬಿಗಸ್ತರಿಗೆ ಸಂಬಂಧಪಟ್ಟಂತೆ, ನೀತಿವಂತರ

ನ್ಯಾಯವನ್ನು ಸ್ಥಾಪಿಸುವದಾಗಿರುತ್ತದೆಂದು ತೋರುತ್ತದೆ. ಅನ್ಯಾಯವಾಗಿ ಆರೋಪಗಳಿಗೆ ಗುರಿಯಾಗಿರುವ, ಮತ್ತು ಅವರಿಗೆ ತಮ್ಮ ನಿರಪರಾಧಿತನವನ್ನು ತೋರಿಸಿ ಕೊಡುವದಕ್ಕೆ ತಮ್ಮ "ನ್ಯಾಯಾಲಯದಲ್ಲಿನ ದಿನ" ವನ್ನು *ಬಯಸುವಂಥ* ಜನರಿರುತ್ತಾರೆ.

ನಿಮಗೆ ನ್ಯಾಯತೀರ್ಪಿನ ಕುರಿತು ಸಮಸ್ತವೂ ತಿಳಿದದೆಯೋ? ಏನು ಸಂಭವಿಸುತ್ತದೆಂಬುದು ನಮಗೆ ನಿಖರವಾಗಿ ಅರ್ಥವಾಗುತ್ತದೋ? ನಾವು ನ್ಯಾಯತೀರ್ಪಿನ ವಿಷಯವಾದ ಪ್ರತಿಯೊಂದು ಸಮಸ್ಯೆಯನ್ನು ಬಗೆಹರಿಸಬಲ್ಲೆವೋ? ಇಲ್ಲ, ಇಲ್ಲವೇ ಇಲ್ಲ. ನಾವು ಈ ಜೀವಿತದಾಚೆಯ ಸಂಗತಿಗಳನ್ನು ಚರ್ಚಿಸುವ ವೇಳೆ, ನಾವು ಗರ್ಭದಿಂದ ಹೊರ ಬಂದ ನಂತರದ ಜೀವನವು ಹೇಗಿರುತ್ತದೆಂಬುದಾಗಿ ಚರ್ಚೆ ಮಾಡುತ್ತಿರುವ ಹಸುಗೂಸುಗಳಂತೆ ಇದ್ದೇವೆ. ಹಾಗಿದ್ದರೂ, ನಾವೇನು ತಿಳಿದುಕೊಳ್ಳಬೇಕೆಂದು ದೇವರ ಇಂಗಿತವಾಗಿದೆಯೋ ಅದನ್ನು ತಿಳಿಯಬಲ್ಲೆವು: ಒಂದು ನ್ಯಾಯತೀರ್ಪಿನ ದಿನ ಇರಲಿದೆ, ಅಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಇರುವನು, ಮತ್ತು ಪ್ರತಿಯೊಬ್ಬ ವ್ಯಕ್ತಿಗೂ ತೀರ್ಪಾಗುವದು.

4. *ನಿಮಗೆ ನಿಮ್ಮ ಕೃತ್ಯಗಳ ಪ್ರಕಾರವಾಗಿ ತೀರ್ಪಾಗುವದು* (ವಚನಗಳು 12, 13, 15). ಪ್ರತಿಯೊಬ್ಬರ ಜೀವಿತವು ಪರಲೋಕದಲ್ಲಿ "ಬರೆದಿಡಲ್ಪಟ್ಟಿದೆ" ಎಂಬ ವಾಸ್ತವಾಂಶವು ಎರಡು ಸಂಗತಿಗಳನ್ನು ತಿಳಿಸುತ್ತದೆ: ನಮ್ಮಲ್ಲಿ ಪ್ರತಿಯೊಬ್ಬೊಬ್ಬನೂ ಪ್ರಾಮುಖ್ಯ ಹಾಗೂ ನಾವು ಮಾಡುವದೆಲ್ಲಾ ಪ್ರಾಮುಖ್ಯವೆಂಬುದನ್ನು ಅದು ಹೇಳುತ್ತದೆ. ಅಲ್ಲದೆ ಅದು ನಮಗೆ, ನಾವು ಗ್ರಹಿಸಿಕೊಂಡರೂ ಸರಿಯೇ ಅಥವಾ ಗ್ರಹಿಸಿಕೊಳ್ಳದಿದ್ದರೂ ಸರಿಯೇ, ನಮ್ಮ ಪ್ರತಿಯೊಂದು ಯೋಚನೆ, ಮಾತು, ಹಾಗೂ ಕ್ರಿಯೆಗಳು ನಿತ್ಯವಾದ ಪರಿಣಾಮಗಳನ್ನು ಹೊಂದಿರುತ್ತವೆಂಬುದನ್ನು ತಿಳಿಸುತ್ತದೆ (ನೋಡಿರಿ ಮತ್ತಾಯ 12:36).

ನಮ್ಮ ದುರ್ಬಲತೆಗಳು ಹಾಗೂ ಪಾಪವನ್ನು ಬೇರೆಯವರು ನೋಡುವಂತೆ ತೋರಿಸಲ್ಪಡುವದಕ್ಕಿಂತಲೂ ಹೆಚ್ಚು ಮುಜುಗರ, ಅವಮಾನಕರ, ಅಥವಾ ಭೀತಿಗೊಳಿಸುವಂಥದ್ದು ಬೇರೆ ಇನ್ನಾವದೂ ಇರುವದಿಲ್ಲ. ಆದದರಿಂದ ತಕ್ಷಣವೇ ಗಮನಕ್ಕೆ ತೆಗೆದುಕೊಳ್ಳುವದು ಪ್ರಾಮುಖ್ಯವಾಗಿರುತ್ತದೆ, ಏನೆಂದರೆ "ದಾಖಲೆಯ ಪುಸ್ತಕಗಳಲ್ಲಿ ಏನು ಬರೆಯಲ್ಪಟ್ಟಿರುತ್ತದೆ ಎಂಬುದು, ... ದೇವರು ಯಾವದನ್ನು ಜ್ಞಾಪಕದಲ್ಲಿಟ್ಟುಕೊಳ್ಳಲು ತೀರ್ಮಾನಿಸುತ್ತಾನೆ ಮತ್ತು ಯಾವದನ್ನು ಮರೆತು ಹೋಗಲು ತೀರ್ಮಾನಿಸುತ್ತಾನೆ ಎಂಬುದರಿಂದ ನಿರ್ಧರಿತವಾಗುತ್ತದೆ."[63] ದೇವರಿಗೆ ಸ್ತೋತ್ರವಾಗಲಿ, ಆತನು ಕೆಲವು ಸಂಗತಿಗಳನ್ನು ಜ್ಞಾಪಕದಲ್ಲಿಟ್ಟುಕೊಳ್ಳುವದಿಲ್ಲ ಎಂದು ವಾಗ್ದಾನ ಮಾಡಿದ್ದಾನೆ (ಯೆರೆಮೀಯ 31:34; ಇಬ್ರಿಯ 8:12)! ನಿರ್ದಿಷ್ಟವಾಗಿ, ಆತನು ತನ್ನ ಮಗನಿಂದ ನಿವಾರಿಸಲ್ಪಟ್ಟಿರುವ ಪಾಪಗಳನ್ನು ಜ್ಞಾಪಕದಲ್ಲಿಟ್ಟುಕೊಳ್ಳುವದಿಲ್ಲ (ರೋಮಾ 5:9; ಎಫೆಸ 1:7). "ಜ್ಞಾಪಕ" ಎಂಬುದು ರಾಜಿಗೆ ಸಿದ್ಧ ಎಂಬ ಅರ್ಥದಲ್ಲಿ ಬಳಸಲ್ಪಟ್ಟಿರುತ್ತದೆ. ದೇವರು ನಮ್ಮ ಪಾಪಗಳನ್ನು ಆ ಮೇಲೆ ನಮ್ಮ ವಿರುದ್ಧ ಹಿಡಿಯುವನು ಎಂಬ ಅರ್ಥದಲ್ಲಿ ಅವುಗಳನ್ನು "ಜ್ಞಾಪಕ" ಮಾಡಿಕೊಳ್ಳುವದಿಲ್ಲ; ಒಮ್ಮೆ ನಮ್ಮ ಪಾಪಗಳು ಕ್ಷಮಿಸಲ್ಪಟ್ಟರೆ, ಆತನು ಪುನಃ ಅವುಗಳನ್ನು ನೆನಪಿಸಿಕೊಳ್ಳುವದಿಲ್ಲ.

> Martin Lutherನು ತನ್ನ ಕನಸುಗಳಲ್ಲೊಂದರ ಬಗ್ಗೆ ಹೇಳುತ್ತಾ ಅದರಲ್ಲಿ ಸೈತಾನನು ಪುಸ್ತಕಗಳ ಬೃಹ್ ಸಂಪುಟಗಳು ಸಾಲು ಸಾಲಾಗಿ ಗೋಡೆಗೆ ಜೋಡಿಸಲ್ಪಟ್ಟಿದ್ದ ಕೋಣೆಯೊಳಗೆ ಬಂದನು, ಮತ್ತು ಅವುಗಳನ್ನು ಓದುವಂತೆ ಆತನಿಗೆ ಆಜ್ಞಾಪಿಸಿದನು. ಶೀಘ್ರವೇ ಅವನಿಗೆ ತನ್ನ ಪಾಪಗಳು, ಅವನ ಸ್ವಂತ ಕೈಯಿಂದ ಬರೆಯಲ್ಪಟ್ಟಿದ್ದ ಪುಸ್ತಕಗಳನ್ನು ಕಂಡನು. ಸೈತಾನನು ಹೀಗೆ ಕೇಳಿದನು, "ಇದು ನಿಜವೋ? ನೀನು ಇದನ್ನು ಬರೆದಿಯಾ?" ಸೈತಾನನು ಇನ್ನೇನು ಪುಸ್ತಕಗಳನ್ನೆತ್ತಿಕೊಂಡು ಹೊರಡಬೇಕೆನ್ನುವ ತನಕವೂ

> Lutherನು ಹೆದರಿಕೆ, ದುರ್ಗತಿ ಹಾಗೂ ಮಾತೇ ಹೊರಡದಂಥ ಅನುಭವವಾದದ್ದನ್ನು ನೆನಪಿಸಿಕೊಳ್ಳುತ್ತಾನೆ. ಆಗ ಈತನು ಹೀಗೆ ಕೂಗಿ ಹೇಳುತ್ತಾನೆ, "ಹೌದು ಅದು ಸತ್ಯ, ಅದರಲ್ಲಿರು ಪ್ರತಿ ಮಾತು ಸತ್ಯ. ನನ್ನ ಕೈ ಅದನ್ನು ಬರೆಯಿತು, ಆದರೆ ಅದೆಲ್ಲವೂ ಬರೆದಾದ ಬಳಿಕ, 'ಯೇಸು ಕ್ರಿಸ್ತನ ರಕ್ತವು ನಮ್ಮನ್ನು ಎಲ್ಲಾ ಪಾಪಗಳಿಂದ ಬಿಡಿಸಿ ಶುದ್ಧ ಮಾಡುತ್ತದೆ' ಎಂದು ಬರೆಯಲ್ಪಟ್ಟಿದೆ."[64]

ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಉದ್ದೇಶವು ಆತನ ರಕ್ತದಿಂದ ಶುದ್ಧ ಮಾಡಲ್ಪಡುವದಕ್ಕಲ್ಲದೆ ಬೇರೆ ಇನ್ನಾವದೇ ಉದ್ದೇಶವು ಇಲ್ಲವಾದರೆ (ಅಪೊಸ್ತಲರ ಕೃತ್ಯಗಳು 22:16), ಆ ದೀಕ್ಷಾಸ್ನಾನವು ಸಾಕಾಗತಕ್ಕದ್ದು. ದೇವರ ವಾಕ್ಯದ "ಬೆಳಕಿನಲ್ಲಿ ನಡೆಯುವ"ದನ್ನು ಮುಂದುವರೆಸುವದರಲ್ಲಿ ರಕ್ತದಿಂದ ನಿರಂತರವಾಗಿ ಶುದ್ಧ ಮಾಡಲ್ಪಡುವದಲ್ಲದೆ ಬೇರೆ ಇನ್ನಾವ ಸ್ಫೂರ್ತಿಯು ಇಲ್ಲವಾದರೆ (1 ಯೋಹಾನ 1:7), ಅದು ಸಾಕಾಗಿರುತ್ತದೆ. ಒಬ್ಬ ವ್ಯಕ್ತಿಯು ಶುದ್ಧ ಮಾಡಲ್ಪಡುವ ಅಗತ್ಯವಿದೆ ಎಂಬುದನ್ನು ಮತ್ತು ಬಯಕೆಯನ್ನು ಆತನಲ್ಲಿ ಉಂಟು ಮಾಡುವಂಥದು ಯಾವದು?

> ಹತ್ತೊಂಭತ್ತನೆಯ ಶತಮಾನದ ಅಂತ್ಯದ ವೇಳೆಯಲ್ಲಿ, ಸ್ವೀಡನ್ ರಸಾಯನ ವಿಜ್ಞಾನಿ Alfred Nobelನು ಒಂದು ಮುಂಜಾನೆ ಎಚ್ಚರಗೊಂಡ ವೇಳೆ ತನ್ನ ಸ್ವಂತ ನಿಧನವಾರ್ತೆಯನ್ನು ಸ್ಥಳೀಯ ಸುದ್ದಿ ಪತ್ರಿಕೆಯಲ್ಲಿ ಓದಿದನು: "ಡೈನಾಮೈಟ್ ಬಾಂಬ್ ಅನ್ವೇಷಕ Alfred Nobelನು ನಿನ್ನೆಯ ದಿನ ಮರಣ ಹೊಂದಿದ್ದು, ಆತನು ಒಂದು ಯುದ್ಧದಲ್ಲಿ ಹಿಂದೆಂದಿಗಿಂತಲೂ ಅಧಿಕ ಜನರು ಮರಣಿಸುವಂತೆ ಮಾಡುವ ದಾರಿಯೊಂದನ್ನು ಕಂಡು ಹಿಡಿದವನು, ಮತ್ತು ಆತನು ಅಧಿಕ ಐಶ್ವರ್ಯವಂತನಾಗಿ ಮರಣ ಹೊಂದಿದನು."
>
> ವಾಸ್ತವಿಕದಲ್ಲಿ, Alfredನ ಅಣ್ಣನ ಮರಣವಾಗಿತ್ತು; ಸುದ್ದಿ ಪತ್ರಿಕೆ ವರದಿಗಾರನು ಸಮಾಧಿಲೇಖದ ವಿಷಯದಲ್ಲಿ ಎಡವಟ್ಟು ಮಾಡಿ ಬಿಟ್ಟಿದ್ದನು.
>
> ಆದರೆ ಈ ಘಟನೆಯು Nobelನ ಮೇಲೆ ಗಹನವಾದ ಪ್ರಭಾವವನ್ನುಂಟು ಮಾಡಿತ್ತು. ತಾನು ಜನರನ್ನು ಕೊಲ್ಲುವ ದಾರಿಗಳನ್ನು ಕಂಡು ಹಿಡಿದವನು ಮತ್ತು ಅದನ್ನು ಮಾಡುವವನಾಗಿ ಸಾಕಷ್ಟು ಸಂಪತ್ತನ್ನು ಕೂಡಿಸಿಟ್ಟುಕೊಂಡವನು ಎಂದು ಹೆಸರು ಪಡೆಯುವದಕ್ಕಿಂತ ಬೇರೆ ವಿಷಯದಕ್ಕೆ ಪ್ರಸಿದ್ಧನಾಗಬೇಕೆಂದು ಬಯಸುತ್ತೇನೆಂದು ನಿರ್ಧರಿಸಿಕೊಂಡನು. ಆದದರಿಂದ ಆತನು Nobel ಬಹುಮಾನವನ್ನು ಆರಂಭಿಸಿದನು, ಅದು ಶಾಂತಿಗಾಗಿ ಪ್ರಯಾಸ ಪಡುವಂಥ ವಿಜ್ಞಾನಿಗಳಿಗಾಗಿ ಹಾಗೂ ಲೇಖಕರಿಗಾಗಿ ಕೊಡಲ್ಪಡುವ ಪ್ರಶಸ್ತಿ ಆಗಿರುತ್ತದೆ.
>
> Nobelನು ಹೀಗೆ ಹೇಳಿದನು, "ಪ್ರತಿಯೊಬ್ಬ ವ್ಯಕ್ತಿಗೂ ಮಧ್ಯದಲ್ಲಿ ತನ್ನ ಸಮಾಧಿಲೇಖವನ್ನು ತಿದ್ದಿಕೊಳ್ಳಲು ಮತ್ತು ಒಂದು ಹೊಸ ಲೇಖವನ್ನು ಬರೆಯುವದಕ್ಕೆ ಅವಕಾಶವು ಸಿಕ್ಕಬೇಕು."[65]

ನಿಮಗೆ ಒಂದು ಅಂತಹ ಒಂದು ಸದವಕಾಶವಿರುತ್ತದೆ. ನಿಮ್ಮ ಜೀವಿತವನ್ನು ಮುಗಿದು ಬಿಟ್ಟಿದೆಯೋ ಎಂಬಂತೆ ನೋಡಿರಿ. ನೀವು ಈ ಕ್ಷಣದಲ್ಲಿ ಮರಣಿಸಿದರೆ ನ್ಯಾಯತೀರ್ಪಿನಲ್ಲಿ ಏನು ಬಯಲುಗೊಳಿಸಲ್ಪಡುವದು ಎಂಬುದನ್ನು ಊಹಿಸಿಕೊಳ್ಳಿರಿ. ನೀವು ಅಲ್ಲಿ ನೋಡುತ್ತಿರುವ ಸಂಗತಿಯು ನಿಮಗೆ ಇಷ್ಟವಾಗಿಲ್ಲವಾದರೆ, ನಿಮ್ಮ ಜೀವಿತದ ದಾಖಲೆಯನ್ನು "ಹೊಸದಾಗಿ ಬರೆಯಿರಿ" - ತಕ್ಷಣವೇ ಪ್ರೀತಿಸ್ವರೂಪಿಯೂ ಕೃಪಾಭರಿತನೂ ಆಗಿರುವ ಕರ್ತನ ಬಳಿಗೆ ಓಡಿ ಹೋಗುವ ಮೂಲಕವಾಗಿಯೇ.

ಆ ದಿನದಲ್ಲಿ, ಅನೇಕರು ಕೇವಲ ಒಂದು ಸಣ್ಣ ಬದಲಾವಣೆ ಮಾಡಿಕೊಳ್ಳುವದಕ್ಕೆ

ತಮಗಿರುವದನ್ನೆಲ್ಲಾ ಕೊಟ್ಟು ಬಿಡುವದಕ್ಕೆ ಸಿದ್ಧರಿರುವದು - ಆದರೆ ಆಗ ಬಹಳ ತಡವಾಗಿ ಹೋಗಿರುತ್ತದೆ. ಆದರೆ ಇಂದು ನೀವು ಯೇಸು ಕ್ರಿಸ್ತನಲ್ಲಿ ವಿಶ್ವಾಸ ಇಡಬಹುದು ಮತ್ತು ಆತನ ಚಿತ್ತಕ್ಕೆ ಒಪ್ಪಿಸಿಕೊಳ್ಳಬಹುದು, ಮತ್ತು ಹೀಗೆ ಬದಲಾವಣೆಯನ್ನು ಪಡೆದುಕೊಳ್ಳಬಹುದು, ದಾಖಲೆಯಲ್ಲಿ ಒಂದು ಚಿಕ್ಕ ಬದಲಾವಣೆ ಮಾತ್ರವೇ ಅಲ್ಲ, ಆದರೆ ಇಡೀ ಸಂಗತಿಯನ್ನೇ ಬದಲಾಯಿಸಿಕೊಳ್ಳಬಹುದು - ಯೇಸು ಕ್ರಿಸ್ತನ ರಕ್ತದಿಂದ ತೊಳೆಯಲ್ಪಟ್ಟು ಶುದ್ಧರಾಗುವದು![66]

5. *ನೀವು ಪರಲೋಕ ಅಥವಾ ನರಕ ಎರಡಲ್ಲೊಂದಕ್ಕೆ ಕಳುಹಿಸಲ್ಪಡುವಿರಿ* (ವಚನಗಳು 14, 15). ಜೀವಬಾಧ್ಯರ ಪಟ್ಟಿಯಲ್ಲಿ ಯಾರ ಹೆಸರುಗಳು ಬರೆಯಲ್ಪಟ್ಟಿಲ್ಲವೋ ಅವರು "ಬೆಂಕಿಯ ಕೆರೆಗೆ ದೊಬ್ಬಲ್ಪಡುವರು," ಅದೇ ವೇಳೆಯಲ್ಲಿ ನಂಬಿಗಸ್ತರು ದೇವರ ಸಮ್ಮುಖದಲ್ಲಿ ನೆಲೆಸುವರು (ಅಧ್ಯಾಯಗಳು 21, 22). ಒಂದು ಸಂದೇಶದ ಮುಕ್ತಾಯದ ವೇಳೆ, ಒಬ್ಬನು ಕರ್ತನ ಕಡೆಗೆ ತಿರುಗಿ ಬರುವದಕ್ಕೆ ಬಯಸುತ್ತೇನೆಂದು ಪ್ರತಿಕ್ರಿಯೆ ನೀಡಿದನು. ಆತನು ಒಂದು ಭಯಾನಕವಾದ ಕನಸಿನ ಕುರಿತು ತಿಳಿಸಿದನು: ಅದೊಂದು ನ್ಯಾಯತೀರ್ಪಿನ ದಿನವಾಗಿತ್ತು, ಮತ್ತು ಕರ್ತನು ಜೀವಬಾಧ್ಯರ ಪುಸ್ತಕ ತೆರೆದು ಓದುತ್ತಿದ್ದನು. ದೇವರು ಮೊದಲನೆಯವನಿಗೆ ಮತ್ತು ಬೇರೊಬ್ಬನಿಗೆ "ಭಲೇ!" ಎಂದು ಹೇಳಿದನು. ಕರ್ತನು ಈ ವ್ಯಕ್ತಿಯ ಹೆಸರು ಇರಬೇಕಾಗಿದ್ದ ಸ್ಥಳಕ್ಕೆ ಬಂದನು, ಆದರೆ ಈತನು ತನ್ನ ಹೆಸರು ಹೇಳಿದ್ದು ಕೇಳಿಸಲಿಲ್ಲ. ಆತನು ಸಿಂಹಾಸನದ ಹಿಂದೆ ನಡೆದು ಹೋಗಿ ಕರ್ತನ ಭುಜದ ಮೇಲಿಂದ ಇಣುಕಿ ಜೀವಬಾಧ್ಯರ ಪುಸ್ತಕದೊಳಗೆ ನೋಡಿದನು. ಆತನಿಗೆ ತನ್ನ ಹೆಸರಿನ ಮೇಲೆ ಗೆರೆ ಎಳೆಯಲ್ಪಟ್ಟಿರುವದನ್ನು ಕಂಡು ಬಹಳ ಹೆದರಿಕೆಯಾಗಿತ್ತು. ಈ ಮನುಷ್ಯನು ಬೋಧಕನ ಮುಂದೆ ಹೀಗೆ ಅರಿಕೆ ಮಾಡಿದನು, "ಒಬ್ಬ ಕ್ರೈಸ್ತನಾಗಿ ನಾನೇನು ಮಾಡಬೇಕೆಂದು ನನಗೆ ಗೊತ್ತಿತ್ತು, ಆದರೆ ಅದನ್ನು ಮಾಡಲು ನಾನು ನಿರಾಕರಿಸಿದೆನು. ಆದರೆ ಈಗ ನಾನು ಹಿಂದಿರುಗಿ ಬರಲಿಚ್ಛಿಸುತ್ತೇನೆ. ನನ್ನ ಹೆಸರು ಯಜ್ಞದ ಕುರಿಯಾದಾತನ ಜೀವಬಾಧ್ಯರ ಪಟ್ಟಿಯಲ್ಲಿ ಪುನಃ ಬರೆಯಲ್ಪಡಬೇಕೆಂದು ಬಯಸುತ್ತೇನೆ!"

ಪ್ರಕಟನೆ 20ನೇ ಅಧ್ಯಾಯದ ಹಲವಾರು ಅಂಶಗಳನ್ನು ಗ್ರಹಿಸಿಕೊಳ್ಳಲು ಕಷ್ಟಕರವಾಗಿರುತ್ತದೆ, ಆದರೆ ಅತ್ಯಂಥ ಮಹತ್ವಪೂರ್ಣವಾಗಿರುವಂಥದ್ದು ಅರ್ಥಮಾಡಿಕೊಳ್ಳುವದಕ್ಕೆ ಕಷ್ಟಕರವಾಗಿರುವದಿಲ್ಲ. Jay Lockhartನು ಈ ಅತ್ಯುನ್ನತವಾದ ಸಲಹೆಯನ್ನು ಕೊಡುತ್ತಾನೆ: "ಊಹಾಪೋಹದ ಉದ್ರೇಕಕಾರಿತ್ವದಲ್ಲಿ ಸಿಲುಕಿಕೊಳ್ಳುವದರ ಬದಲಾಗಿ, ನಮ್ಮ ಹೆಸರುಗಳು ಜೀವಬಾಧ್ಯರ ಪಟ್ಟಿಯಲ್ಲಿ ಬರೆಯಲ್ಪಟ್ಟಿರುವದನ್ನು ಖಚಿತಪಡಿಸಿಕೊಳ್ಳೋಣ![67]

ನಿಮ್ಮ ಹೆಸರು ಕುರಿಯಾದಾತನ ಜೀವಬಾಧ್ಯರ ಪಟ್ಟಿಯಲ್ಲಿ ಬರೆಯಲ್ಪಟ್ಟಿ*ದೆಯೋ*? ನೀವು ಪಶ್ಚಾತ್ತಾಪ ಹಾಗೂ ದೀಕ್ಷಾಸ್ನಾನ ಮೂಲಕವಾಗಿ ಯೇಸುವಿನಲ್ಲಿ ನಿಮ್ಮ ನಂಬಿಕೆಯನ್ನು ವ್ಯಕ್ತಪಡಿಸಿರುವಿರೋ (ಅಪೊಸ್ತಲರ ಕೃತ್ಯಗಳು 2:37, 38; ಗಲಾತ್ಯ 3:26, 27)? ನೀವು ದೇವರಿಗೆ ನಂಬಿಗಸ್ತರಾಗಿ ಉಳಿದಿರುವಿರೋ (ಪ್ರಕಟನೆ 2:10; 3:5)? ನಿಮ್ಮ ಹೆಸರು ಜೀವಬಾಧ್ಯರ ಪಟ್ಟಿಯಲ್ಲಿ ಎಂದಿಗೂ ಸೇರ್ಪಡೆಗೊಳಿಸಲ್ಪಟ್ಟಿಲ್ಲವಾದರೆ, ಅಥವಾ ಅದು ಅಳಿಸಿ ಹಾಕಲ್ಪಟ್ಟಿದ್ದರೆ, ಇನ್ನು ಕಾಯಬೇಡಿರಿ; ಇನ್ನು ಹಿಂದೆಮುಂದೆ ನೋಡದಿರಿ. ಇಂದೇ ಈ ವಿಷಯವನ್ನು ಬಗೆಹರಿಸಿರಿ.

## ನ್ಯಾಯತೀರ್ಪಿನ ಉದ್ದೇಶ (20:11-15)

ಒಂದು ಕಠಿಣ ಪ್ರಶ್ನೆಯೆಂದರೆ "ಒಬ್ಬ ವ್ಯಕ್ತಿಗೆ ಮರಣದಿಂದ ತನ್ನ ಸ್ಥಿತಿ ಏನು ಮತ್ತು ತನ್ನ ಅಂತ್ಯಾವಸ್ಥೆಯು ಏನೆಂದು ತಿಳಿದಿರುವದಾದರೆ ಒಂದು ನ್ಯಾಯತೀರ್ಪು ಇರುವದಾದರೂ ಏಕೆ?" (ನೋಡಿರಿ ಲೂಕ 16:19–31.) ನ್ಯಾಯತೀರ್ಪಿನ ಕುರಿತಾದ ಒಂದು ಕರಪತ್ರದಲ್ಲಿ ಈ ಉತ್ತರವನ್ನು ಮುಂದಿಡಲಾಗಿತ್ತು: "ಅದು ನಿರಪರಾಧಿತ್ವವನ್ನಾಗಲಿ ಅಥವಾ ಅಪರಾಧಿತ್ವವನ್ನಾಗಿ ಸಾಭಿತು ಪಡಿಸುವದಕ್ಕಿಂತ ಹೆಚ್ಚಾಗಿ ನ್ಯಾಯವನ್ನು ತೋರಿಸುವದು ಮತ್ತು ದಂಡನೆಯ ತೀರ್ಪನ್ನು ಕೊಡುವದರ ಕುರಿತೇ ಆಗಿರುವದು."[68] Haileyನು ಅಭಿಪ್ರಾಯ ಪಟ್ಟಿದ್ದೇನೆಂದರೆ, "ಸಂದರ್ಭವು ಪ್ರಾಥಮಿಕವಾಗಿ ನೀತಿವಂತರಿಗೆ ಪ್ರತಿಫಲಗಳನ್ನು [ಕೊಡುವದು] ಮತ್ತು ದುಷ್ಟರಿಗೆ ದಂಡನೆಯನ್ನು ಜಾರಿಗೊಳಿಸುವದು ಆಗಿರುತ್ತದೆ."[69]

---

### ಅಡಿಟಿಪ್ಪಣಿಗಳು

[1]G. B. Caird, *A Commentary on the Revelation of St. John the Divine*, Harper's New Testament Commentaries, ed. Henry Chadwick (London: Adam & Charles Black, 1966), 249. [2]John Risse, "The Meaning of the Millennium," Sermon preached at the Southern Hills church of Christ, Abilene, Texas, 30 June 1991. [3]Frank Pack, *Revelation,* Part 2 (Austin, Tex.: R. B. Sweet Co., 1965), 45. [4]Douglas Ezell, *Revelations on Revelation: New Sounds From Old Symbols* (Waco, Tex.: Word Books, 1977), 88–89. [5]W. B. West, Jr., *Revelation Through First-Century Glasses*, ed. Bob Prichard (Nashville: Gospel Advocate Co., 1997), 133. [6]Adapted from Jim McGuiggan, *The Book of Revelation*, Looking Into The Bible Series (Lubbock, Tex.: International Biblical Resources, 1976), 287. [7]Ray Summers, *Worthy Is the Lamb* (Nashville: Broadman Press, 1951), 202. [8]West, 133. [9]Robert H. Mounce, *The Book of Revelation,* The New International Commentary on the New Testament, ed. F. F. Bruce (Grand Rapids, Mich.: Wm. B. Eerdmans Publishing Co., 1977), 352. [10]Thomas F. Torrance, *The Apocalypse Today* (Grand Rapids, Mich.: Wm. B. Eerdmans Publishing Co., 1959), 133.

[11]Homer Hailey, *Revelation: An Introduction and Commentary* (Grand Rapids, Mich.: Baker Book House, 1979), 391. [12]Owen L. Crouch, *Expository Preaching and Teaching: Revelation* (Joplin, Mo.: College Press Publishing Co., 1985), 348. [13]ಈ ವಿಷಯದ ಕುರಿತ ಕ್ಲುಪ್ತ ಸಮಿಕ್ಷೆಗಳು William Barclay, *The Revelation of John*, vol. 2, rev. ed., The Daily Study Bible Series (Philadelphia: Westminster Press, 1976), 190–91, and in R. C. H. Lenski, *Interpretation of St. John's Revelation* (Minneapolis, Minn.: Augsburg Publishing House, 1963), 570 ದಲ್ಲಿ ಸೇರ್ಪಡೆಗೊಳಿಸಲ್ಪಟ್ಟಿರುತ್ತವೆ. [14]Caird, 251. [15]Summers, 203. [16]William Hendriksen, *More Than Conquerors* (Grand Rapids, Mich.: Baker Book House, 1954), 230–31. [17]James M. Efird, *Revelation for Today* (Nashville: Abingdon Press, 1989), 118. [18]A further discussion of this appears in McGuiggan, 303. [19]Pack, 48. [20]Bruce M. Metzger, *Breaking the Code: Understanding the Book of Revelation* (Nashville: Abingdon Press, 1993), 95.

[21]Daniel Russell, *Preaching the Apocalypse* (New York: Abingdon Press, 1935), 227. [22]Burton Coffman, *Commentary on Revelation* (Austin, Tex.: Firm Foundation Publishing House, 1979), 469. [23]Hendriksen, 230. [24]Barclay, 192. [25]Ibid. Barclay summarized this thought from Henry B. Swete, *The Apocalypse of St. John*, 3d ed. (London: Macmillan Co., 1909; reprint, Grand Rapids, Mich.: Wm. B. Eerdmans Publishing Co., 1954), 262. [26]Donald Guthrie, *The Relevance of John's Apocalypse* (Grand Rapids, Mich.: Wm. B. Eerdmans Publishing Co., 1987), 102–3. [27]Pack, 52. [28]Barclay, 194. [29]McGuiggan, 304. [30]Caird, 256.

[31]Hailey, 398. [32]Swete, 269. [33]Coffman, 478. [34]Leon Morris, *Revelation*, rev. ed., The Tyndale New Testament Commentaries, ed. Leon Morris (Grand Rapids, Mich.: Wm. B.

Eerdmans Publishing Co., 1987), 233. [35]Martin H. Franzmann, *The Revelation to John* (St. Louis: Concordia Publishing House, 1976), 134. [36]Crouch, 362. [37]*Paradise Lost* 1.262. *Paradise Lost* was the masterpiece of the English poet John Milton (1608–74). [38]H. L. Ellison, *1 Peter—Revelation*, Scripture Union Bible Study Books (Grand Rapids, Mich.: Wm. B. Eerdmans Publishing Co., 1969), 84–85 (ಒತ್ತಿ ಹೇಳಿದ್ದು ನನ್ನದು). [39]"ಯುಗಯುಗಾಂತರಗಳಲ್ಲಿಯೂ" ಎಂಬ ಪದಗುಚ್ಛ ಹಾಗೂ ನರಕದ ನಿತ್ಯವಾದ ಸ್ವಭಾವದ ಕುರಿತು ಚರ್ಚೆಗಾಗಿ, ನೋಡಿರಿ Hailey, 398–99. [40]Morris, 233.

[41]Pack, 55. [42]Clarence E. Macartney, *Macartney's Illustrations* (Nashville: Abingdon Press, 1965), 198–99ದಲ್ಲಿ ಉಲ್ಲೇಖಿಸಲಾಗಿದೆ. [43]Caird, 259. [44]T. F. Glasson, *The Revelation of John*, The Cambridge Bible Commentary on the New English Bible, ed. P. R. Ackroyd, A. R. C. Leaney, and J. W. Packer (Cambridge: Cambridge University Press, 1965), 113, n. [45]West, 145. [46]ಬಹು ನ್ಯಾಯತೀರ್ಪುಗಳು ನಡೆಯುತ್ತವೆಂದು ಸಾಭಿತುಪಡಿಸಲು ಬಳಸುವ ವಾಕ್ಯಭಾಗಗಳ ಕುರಿತಾದ ಒಂದು ಚರ್ಚೆಗಾಗಿ, ನೋಡಿರಿ Pack, 56–57. [47]Hailey, 400. [48]Metzger, 95. [49]Ibid. [50]Barclay, 95.

[51]Mounce, 366. [52]Albertus Pieters, *Studies in the Revelation of St. John* (Grand Rapids, Mich.: Wm. B. Eerdmans Publishing Co., 1954), 313. [53]Morris, 235. [54]These last two sentences were adapted from Swete, 273. [55]Coffman, 478. [56]Adapted from Craig Brian Larson, ed., *Illustrations for Preaching and Teaching From Leadership Journal* (Grand Rapids, Mich.: Baker Books, 1993), 215. [57]Eldred Echols, *Haven't You Heard? There's a WAR Going On!: Unlocking the Code to Revelation* (Fort Worth, Tex.: Sweet Publishing, 1995), 44ರಿಂದ ಆಯ್ದುಕೊಳ್ಳಲಾಗಿದೆ. [58]Jay Lockhart, "The Final Judgment," *Truth for Today* 9 (January 1989): 23–25. [59]ಈ ಕಥೆಯು Walter B. Knight, *Knight's Master Book of 4,000 Illustrations* (Grand Rapids, Mich.: Wm. B. Eerdmans Publishing Co., 1956), 351ದಿಂದ ಆಯ್ದುಕೊಳ್ಳಲ್ಪಟ್ಟಿದೆ. [60]Edward A. McDowell, *The Meaning and Message of the Book of Revelation* (Nashville: Broadman Press, 1951), 201.

[61]ಈ ವಾಕ್ಯವು Tommy South, "The Great White Throne," *Truth for Today* 9 (January 1989): 20ದಿಂದ ಆಯ್ದುಕೊಳ್ಳಲ್ಪಟ್ಟಿದೆ. [62]Larson, 123. [63]Caird, 259. [64]Harold Hazelip, *The Lord Reigns: A Survey of the Book of Revelation* (Abilene, Tex.: Herald of Truth, n.d.), 22. [65]Larson, 123. [66]David Roper, "When the Books Were Opened," tract (Pasadena, Tex.: Haun Publishing Co., n.d.), 15. [67]Jay Lockhart, "The Millennial, 2," *Truth for Today* 9 (January 1989): 18. [68]Roper, 9. [69]Hailey, 399.